ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 24 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕರಾದಸಂಸಕ್ಕೆ ಮರಳಿದ ದೇವಗಳ್ಳಿ ಸೋಮಶೇಖರ್



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ದೇವಗಳ್ಳಿ ಸೋಮಶೇಖರ್ ಮರಳಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಗೆ ಮರಳಿ ಸೇರ್ಪಡೆಗೊಂಡರು.

ಮೈಸೂರು, ಮೇ 9(ಎಂಟಿವೈ)– ಕೆಲ ಕಾರಣಗಳಿಂದ ತಟಸ್ಥರಾಗಿ ಸಂಘಟನಾ ಚಟುವಟಿಕೆಯಿಂದ ದೂರವುಳಿದಿದ್ದ ಹಿರಿಯ ದಲಿತ ಮುಖಂಡ ದೇವಗಳ್ಳಿ ಸೋಮಶೇಖರ್ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಗೆ (ಕರಾದಸಂಸ) ಮರು ಸೇರ್ಪಡೆಯಾಗಿದ್ದಾರೆ ಎಂದು ದಸಂಸ ಕಾರ್ಯಕಾರಿ ರಾಜ್ಯ ಸಂಚಾಲಕ ಜೀವನಹಳ್ಳಿ ವೆಂಕಟೇಶ್ ತಿಳಿಸಿದ್ದಾರೆ.


ದೇವಗಳ್ಳಿ ಸೋಮಶೇಖರ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಸಂಚಾಲಕರಾಗಿದ್ದ ಲಕ್ಷ್ಮೀ ನಾರಾಯಣ ನಾಗವಾರ ಅವರೊಂದಿಗೆ ದೇವಗಳ್ಳಿ ಸೋಮಶೇಖರ್ ಸೇರಿದಂತೆ ಇನ್ನಿತರರು ಕರಾದಸಂಸವನ್ನು ರಾಜ್ಯದಾದ್ಯಂತ ಸಂಘಟಿಸಿ, ಅಸಮಾನತೆಯ ವಿರುದ್ಧ ಪ್ರಬಲ ಹೋರಾಟ ಮಾಡಿದ್ದರು. ಆದರೆ, ಕೆಲ ವರ್ಷಗಳಿಂದ ಸಂಘಟನೆಯಿಂದ ದೂರವುಳಿದಿದ್ದರು. ಇದೀಗ ಕರಾದಸಂಸಗೆ ಮರಳಿ ಬಂದಿರುವುದರಿಂದ ಮೈಸೂರು ಭಾಗದಲ್ಲಿ ಸಂಘಟನೆಗೆ ಹೆಚ್ಚಿನ ಬಲ ಬಂದಿದೆ ಎಂದರು.

ಇದೇ ವೇಳೆ ದೇವಗಳ್ಳಿ ಸೋಮಶೇಖರ್ ಮಾತನಾಡಿ, ರಾಜ್ಯದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಸಂಚಾಲಕರಾಗಿದ್ದ ಲಕ್ಷ್ಮೀನಾರಾಯಣ ನಾಗವಾರ ಅವರೊಂದಿಗೆ ರಾಜ್ಯದಲ್ಲಿ ಸಂಘಟನೆ ಮಾಡಲಾಗಿತ್ತು. ಹಲವು ಹೋರಾಟಗಳ ಮೂಲಕ ಸಂಘಟನೆಯನ್ನು ಗಟ್ಟಿಗೊಳಿಸಲಾಗಿತ್ತು ಆದರೆ, ಕೆಲ ಬೆಳವಣಿಗೆಯಿಂದಾಗಿ ನಾನು ಕರಾದಸಂಸವನ್ನು ತೊರೆದು ತಟಸ್ಥನಾಗಿದ್ದೆ. ಇದನ್ನು ಗಮನಿಸಿದ ದಸಂಸದ ಮತ್ತೊಂದು ಸಂಘಟನೆಯ ಮುಖಂಡರು ನನ್ನನ್ನು ಕರೆದು ತಮ್ಮ ಸಂಘಟನೆಗೆ ಬರಮಾಡಿಕೊಂಡಿದ್ದರು. ಆದರೆ, ಇತ್ತೀಚೆಗೆ ಲಕ್ಷ್ಮೀನಾರಾಯಣ ನಾಗವಾರ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ನೋಡಲು ಹೋದಾಗ ಮನಸ್ಸಿಗೆ ತುಂಬಾ ನೋವಾಯಿತು. ಆ ಕಾರಣದಿಂದ ಮರಳಿ ಕರಾದಸಂಸ ಸಂಘಟನೆ ಯನ್ನು ಸೇರುತ್ತಿರುವುದಾಗಿ ಸ್ಪಷ್ಟಪಡಿಸಿದರು. ದಸಂಸ ಜಿಲ್ಲಾ ಸಂಚಾಲಕ ಮಣಿ ಯಯ್ಯ ಕೆ.ಭುಗತಗಳ್ಳಿ ಮಾತನಾಡಿ, ಧ್ವನಿ ಇಲ್ಲದವರಿಗೆ ಧ್ವನಿಯಾಗಿ, ಅನ್ಯಾಯ ಕ್ಕೊಳಗಾದವರಿಗೆ ನ್ಯಾಯ ದೊರಕಿಸಿ ಕೊಡುವ ಕಾರ್ಯವನ್ನು ದಸಂಸ ನಿರಂತರವಾಗಿ ಮಾಡುತ್ತಿದೆ. ಸಮ ಸಮಾಜ ನಿರ್ಮಾಣ ಮಾಡುವ ಉದ್ದೇಶದಿಂದ ಸಂಘಟನೆ ಮತ್ತಷ್ಟು ಪ್ರಬಲಗೊಳ್ಳಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರಾದಸಂಸ ಮೈಸೂರು ವಿಭಾಗೀಯ ಸಂಚಾಲಕ ರಾಜಶೇಖರ ಕೋಟೆ, ಜಿಲ್ಲಾ ಸಂಘಟನಾ ಸಂಚಾಲಕರಾದ ಬೊಕ್ಕಹಳ್ಳಿ ಲಿಂಗಯ್ಯ, ಆಲಗೂಡು ಶಿವಣ್ಣ, ನಗರ ಸಂಚಾಲಕ ವಿ.ಎಸ್.ಮೋಹನ್ ಕುಮಾರ್, ತಾಲೂಕು ಸಂಚಾಲಕ ಪ್ರಸನ್ನ ಮತ್ತಿತರರು ಇದ್ದರು.

ಜೈಲುವಾಸ ಶಿಕ್ಷೆಯಾಗದಿರಲಿ; ಇನ್ನು ಮುಂದೆ ಶಿಕ್ಷಣವಾಗಲಿ

ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಆಶಯ



ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಮಾತನಾಡಿದರು.

ಮೈಸೂರು, ಮೇ 9– ನಾನು ಅಪರಾಧಿ ಆಗಬಾರದು ಎಂಬ ವಿವೇಕ ಕೊಟ್ಟಿದ್ದೇ ಶಿಕ್ಷಣ. ಇದಕ್ಕಾಗಿ ಜೈಲು ವಾಸವನ್ನು ಶಿಕ್ಷೆಯೆನ್ನದೆ ಶಿಕ್ಷಣವನ್ನಾಗಿ ಪರಿವರ್ತಿಸಿಕೊಳ್ಳಿ ಎಂದು ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಸಲಹೆ ನೀಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕಾರಾಗೃಹ ಇಲಾಖೆ ಹಾಗೂ ನಗರದ ಕೇಂದ್ರ ಕಾರಾಗೃಹ ಸಹಯೋಗದೊಂದಿಗೆ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಆಯೋಜಿಸಿದ್ದ ಮೂರು ದಿನಗಳ ಸಾಹಿತ್ಯ ಕಮ್ಮಟದ ಸಮಾರೋಪ ಸಮಾರಂಭದಲ್ಲಿ ಶುಕ್ರವಾರ ಮಾತನಾಡಿದ ಅವರು, ಚಿಂತೆಯೇ ಮುಪ್ಪು ಎನ್ನುವುದು ಸತ್ಯ. ಮಾನಸಿಕವಾಗಿ ಕುಗ್ಗಿದರೆ ನಾವು ಸಾವಿನ ಸಮೀಪ ಸರಿದಂತೆ ಆದ್ದರಿಂದ ಉತ್ಸಾಹದಿಂದ ಇರುವುದರ ಜೊತೆಗೆ ಓದಿನ ಸಂಪತ್ತನ್ನು ಸಂಪಾದಿಸಬೇಕು ಎಂದು ತಿಳಿಸಿದರು.

ದೇವನೂರ ಮಹಾದೇವ ಅವರ 'ಬಂಡೆಯ ಮೇಲೆ ಚಿಗುರೊಡೆಯಬೇಕು' ಮಾತನ್ನು ಮನಗಾಣಿರಿ. ಶಿಕ್ಷೆಯ ಅವಧಿಯನ್ನು ಲೆಕ್ಕ ಹಾಕದೆ ಸಾಹಿತ್ಯ ಓದಿ, ಹೆಚ್ಚಿನ ಅಧ್ಯಯನ ಕೈಗೊಳ್ಳಿ. ನಾವು ಎಲ್ಲಿದ್ದೇವೆ ಎನ್ನುವುದು ಮುಖ್ಯವಲ್ಲ, ಹೇಗಿದ್ದೇವೆ ಎನ್ನುವುದು ಮುಖ್ಯ. ಬಂಧನದಲ್ಲಿರುವವರು ಮುಕ್ತ ಮನಸ್ಸಿನಿಂದ ಇರುತ್ತಾರೆ. ಬಂಧನದಲ್ಲಿರದ ಹಲವರಲ್ಲಿ ಮುಕ್ತರಾಗಿರಲು ಸಾಧ್ಯವಾಗುವುದಿಲ್ಲ ಎಂದು ಅಭಿಪ್ರಾಯಿಸಿದ ಅವರು, ಕರ್ನಾಟಕ ಸಾಹಿತ್ಯ ಅಕಾಡೆಮಿಯ 60 ವರ್ಷಗಳ ಇತಿಹಾಸದಲ್ಲಿಯೇ ಮೊದಲ ಬಾರಿ ಜೈಲಿನಲ್ಲಿ ಸಾಹಿತ್ಯ ಕಮ್ಮಟ ಏರ್ಪಡಿಸಿದ್ದು ಶ್ಲಾಘನೀಯ ಎಂದರು.

ಕವಯಿತ್ರಿ ಡಾ.ಜಹಿದಾ ಮಾತನಾಡಿ, ಮಹಿಳಾ ಕೈದಿಗಳು ತಲೆತಗ್ಗಿಸಿ ಕೂರಬೇಡಿ, ತಲೆಯೆತ್ತಿ ಸಾಹಿತ್ಯ ಓದಿರಿ ಎಂದು ಸಲಹೆ ನೀಡಿದರು. ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ಡಾ.ಚಂದ್ರಕಿರಣ್ ಕುಳವಾಡಿ, ಮೈಸೂರು ಜೈಲಿನಲ್ಲಿ ಶಿಸ್ತು, ಸ್ವಚ್ಛತೆ ಇದೆ. ವಿಶ್ವವಿದ್ಯಾಲಯದಲ್ಲಿ 31 ವರ್ಷಗಳವರೆಗೆ ಪಾಠ ಮಾಡಿದ್ದಕ್ಕಿಂತ ಮೂರು ದಿನಗಳ ಕಮ್ಮಟದಲ್ಲಿ ಮಾತನಾಡಿದ್ದು ಹೆಚ್ಚು ಎನಿಸಿದೆ ಎಂದರು. ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್, ಬಂಧಿಗಳಲ್ಲಿ ಸಾಹಿತ್ಯಾಸಕ್ತಿ ಮೂಡಿಸುವ ನಿಟ್ಟಿನಲ್ಲಿ ವಿನೂತನ ಸಾಹಿತ್ಯ ಕಮ್ಮಟವು ಯಶಸ್ವಿಯಾಗಿದೆ. ಈ ಕಮ್ಮಟವು ಧನಾತ್ಮಕ ಶಕ್ತಿ ನೀಡಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಕಾರಾಗೃಹದ ಸಹಾಯಕ ಅಧೀಕ್ಷಕರಾದ ಮೋಹನ ಕುಮಾರ್, ಎಂ.ದೀಪಾ, ಜೈಲರ್‌ಗಳಾದ ಧರಣೇಶ್, ರೂಪವಾಣಿ, ಸಹಾಯಕ ಜೈಲರ್ ಶಿವಕುಮಾರ್, ಶಿಕ್ಷಕ ಪ್ರೇಮಕುಮಾರ್, ವೀಕ್ಷಕ ಗುರುರಾಜ ಮರೋಲಿ ಮತ್ತಿತರರು ಉಪಸ್ಥಿತರಿದ್ದರು.

ಜೀರ್ಣೋದ್ಧಾರಗೊಂಡ ಉಪ್ಪರಿಗೆ ಬಸವೇಶ್ವರ ದೇವಾಲಯ ಉದ್ಘಾಟನೆ





ಮೈಸೂರಿನ ಶ್ರೀರಾಂಪುರ ಗ್ರಾಮದ ಉಪ್ಪರಿಗೆ ಬಸವೇಶ್ವರ ದೇವಾಲಯದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನೆ ಸಮಾರಂಭದಲ್ಲಿ ಗಣ್ಯರು ಬಸವಣ್ಣನವರ ಫೋಟೋಗೆ ನಮನ ಸಲ್ಲಿಸಿದರು.

ಮೈಸೂರು, ಮೇ 9– ಮೈಸೂರಿನ ಮಾನಂದವಾಡಿ ರಸ್ತೆಯ ಶ್ರೀರಾಂಪುರ ಗ್ರಾಮದ ಉಪ್ಪರಿಗೆ ಬಸವೇಶ್ವರ ದೇವಾಲಯದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನೆ ಅದ್ದೂರಿಯಾಗಿ ನೆರವೇರಿತು.

ಶ್ರೀ ರಾಂಪುರ, ಶಿವಪುರ, ದೇವಯ್ಯನ ಹುಂಡಿ, ಪರಸಯ್ಯನಹುಂಡಿ ಗ್ರಾಮಸ್ಥರ ಸಮ್ಮುಖದಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಭಾಗಿಯಾಗಿದ್ದರು. ಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿಗಳ ಸಾನಿಧ್ಯದಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ದೀಪ ಬೆಳಗುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮಸ್ಥರೆಲ್ಲರೂ ಸೇರಿ ಬಸವೇಶ್ವರರ ದೇವಾಲಯ ಜೀರ್ಣೋದ್ಧಾರ ನಡೆಸಿದ್ದಾರೆ. ಈ ಮೂಲಕ ಬಸವಣ್ಣನವರ ಆಶಯಗಳು ಸಾಕಾರಗೊಳ್ಳಲಿ. ದೇವಸ್ಥಾನ ಗ್ರಾಮದ ನೆಮ್ಮದಿ, ಶಾಂತಿ, ಆಧ್ಯಾತ್ಮಿಕ ಕೇಂದ್ರವಾಗಿರಲಿ. ಬಸವಣ್ಣ ಕಾಯಕ, ದಾಸೋಹದ ಮಹತ್ವವನ್ನು ಜಗತ್ತಿಗೆ ಸಾರಿದ್ದಾರೆ. ಧರ್ಮ, ತತ್ವ, ವಿದ್ಯೆ, ಸೃಜನಶೀಲತೆಯ ಪ್ರಮುಖ ಗುರಿ ಸಮ ಸಮಾಜವನ್ನು ನಿರ್ಮಿಸುವುದು. ಮಹನೀಯರ ತತ್ವಾದರ್ಶವನ್ನು ಕಿಂಚಿತ್ತಾದರೂ ಅನುಸರಿಸಿದರೆ ನಮ್ಮ ಬದುಕು ಹಸನಾಗುತ್ತದೆ ಎಂದರು.

ಸ್ವಾವಲಂಬಿಗಳಾಗಿ ದುಡಿದು ಸಂಪಾದಿಸಿದ್ದರಲ್ಲಿ ಇತರರಿಗೂ ಒಂದಿಷ್ಟು ಹಂಚಬೇಕು. ಇಂತಹ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಬಸವಾದಿ ಶರಣರ ವೈಚಾರಿಕ ಚಿಂತನೆ, ವಿಚಾರಧಾರೆ ಮತ್ತು ವಚನಗಳು ಎಲ್ಲಾ ಸಂದರ್ಭದಲ್ಲೂ ಅನ್ವಯವಾಗುತ್ತದೆ. ಅವರ ಹೆಸರಿನಲ್ಲಿ ಕಾಯಕ, ದಾಸೋಹ ನಿರಂತರವಾಗಿರಬೇಕು. ದೇವಸ್ಥಾನಗಳು ಸಮಾಜಮುಖಿ, ಸೇವಾಭಿಮುಖಿಯಾಗಿದ್ದರೆ ಹೆಚ್ಚು ಸಾರ್ಥಕ ಎಂದು ತಿಳಿಸಿದರು.

ಕುದೇರು ಮಠದ ಶ್ರೀ ಗುರುಶಾಂತ ಸ್ವಾಮಿಗಳು ಮಾತನಾಡಿ, ದೇವಸ್ಥಾನಗಳು ಶಾಂತಿ ಕೇಂದ್ರ. ದೇವಾಲಯಗಳಲ್ಲಿ ದೇವರ ರೂಪದಲ್ಲಿ ಸಮಾಧಾನ, ಶಾಂತಿ, ನೆಮ್ಮದಿ ಪಡೆಯಲು ಪ್ರಯತ್ನಿಸುತ್ತೇವೆ. ಪರಮಾತ್ಮ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇದ್ದಾನೆ. ಅದು ನಾವು ಸಮಾಜದಲ್ಲಿ ಹೇಗೆ ಬದುಕುತ್ತೇವೆ ಎನ್ನುವುದರ ಮೇಲೆ ಅವಲಂಬಿತವಾಗಿದೆ. ಅದು ನಾವು ಮಾಡುವ ಒಳ್ಳೆಯ ಕೆಲಸದಲ್ಲಿ ಅಡಗಿದೆ. ಹಸಿದವರಿಗೆ ಧರ್ಮ, ವಚನ ತಿಳಿಸಿದರೆ ಅರ್ಥವಾಗುವುದಿಲ್ಲ. ಮೊದಲು ಪ್ರಸಾದ ನಂತರ ಬೋಧನೆ. ಹಾಗಾಗಿ ಇಂತಹ ದೇವಾಲಯಗಳು ನಿರಂತರ ದಾಸೋಹ ಕೇಂದ್ರಗಳಾಗಲಿ, ಅನ್ನದಾನದ ಮೂಲಕ ಭಕ್ತರಿಗೆ ಪ್ರಸಾದ ದೊರಕಲಿ ಎಂದು ಆಶಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ಪಟೇಲ್ ಮಂಜುನಾಥ್, ಮಹೇಶ್, ರಾಮಚಂದ್ರ ಕೌಬುದ್ಧಿಯವರು, ಆನಂದ್, ದಿನೇಶ್, ಪಟೇಲ್ ರವಿ, ಅರ್ಚಕರಾದ ಮಂಜುನಾಥ್, ಕೆಂಪಣ್ಣ ಮತ್ತಿತರರು ಉಪಸ್ಥಿತರಿದ್ದರು.

ರೈತರು ವ್ಯವಸಾಯ ಮಾಡುತ್ತಿರುವ ಹಾಲಿ ಭೂಮಿಗೆ ಸಾಗುವಳಿ ಪತ್ರ ನೀಡಲು ಆಗ್ರಹ



ಸಾಗುವಳಿ ಪತ್ರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ದ ಮೈಸೂರು ಜಿಲ್ಲಾ ಸಮಿತಿ ಸದಸ್ಯರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು, ಮೇ9(ಜಿಎ)–ವ್ಯವಸಾಯ ಮಾಡುತ್ತಿರುವ ಭೂಮಿಗೆ ಆಯಾಯ ರೈತರಿಗೆ ಸಾಗುವಳಿ ಪತ್ರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ದ ಮೈಸೂರು ಜಿಲ್ಲಾ ಸಮಿತಿ ಸದಸ್ಯರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

60 ವರ್ಷಗಳಿಂದ ಗೋಮಾಳ, ಗುಂಡು ತೋಪು, ಅರಣ್ಯ ಭೂಮಿಗಳಲ್ಲಿ ಬಡ ಬಗರ್ ಹುಕುಂ ಸಾಗುವಳಿದಾರರು ಉಳುಮೆ ಮಾಡುತ್ತಾ ಜೀವನ ನಡೆಸುತ್ತಿದ್ದಾರೆ. ಬಡ ಸಾಗುವಳಿದಾರರಿಗೆ ಸಾಗುವಳಿ ಪತ್ರ ನೀಡದೆ ಕಾನೂನಿನ ತೊಡಕಿನ ನೆಪ ಹೇಳಿ ವಂಚಿಸಲಾಗುತ್ತಿದೆ. ಆದರೆ, ಕೈಗಾರಿಕೆಗಳಿಗೆ, ಸಂಘ, ಸಂಸ್ಥೆಗಳಿಗೆ ಮಾತ್ರ ರೈತರು ಸಾಗುವಳಿ ಮಾಡುತ್ತಿರುವ ಭೂಮಿ ನೀಡಲಾಗುತ್ತಿದೆ ಆಗ ಅಡ್ಡಿಯಾಗದ ಕಾನೂನು ಬಡ ರೈತರಿಗೆ ಸಾಗುವಳಿ ನೀಡಲು ಅಡ್ಡಿಯಾಗುತ್ತಿರುವುದು ವಿಷಾದನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಸುಗಳಿಗೆ ಗೋಮಾಳ ಇರಬೇಕೆಂಬ ಕಾರಣ ಹೇಳಿ ಸಾಗುವಳಿ ವಂಚಿಸಲಾಗುತ್ತಿದೆ. ಆದರೆ, 100 ಹಸುಗಳಿಗೆ 30 ಎಕರೆ ಜಮೀನು ಬಿಟ್ಟು ಉಳಿದ ಜಮೀನನ್ನು ರೈತರಿಗೆ ನೀಡುವ ಅವಕಾಶವಿದೆ. ಸ್ಥಳೀಯ ಅಧಿಕಾರಿಗಳು ಇದರ ಬಗ್ಗೆ ಗಮನ ನೀಡುತ್ತಿಲ್ಲ. ಮತ್ತೊಂದೆಡೆ ಅರಣ್ಯ ಭೂಮಿಗಳಲ್ಲಿ ಸಾಗುವಳಿಗೆ ಅರ್ಜಿ ಸಲ್ಲಿಸಿ ರೈತರು ವ್ಯವಸಾಯ ಮಾಡುತ್ತಿದ್ದು, ಅರಣ್ಯ ಇಲಾಖೆ ಈಚೆಗೆ ರೈತರಿಗೆ ನೋಟೀಸ್ ನೀಡಿ ಉಳುಮೆ ಮಾಡುತ್ತಿರುವ ಭೂಮಿಗೆ ದಾಖಲೆ ಕೇಳುತ್ತಿದೆ. ಒತ್ತುವರಿ ತೆರವು ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿದರು.

ನಗರದ 10 ಕಿ.ಮೀ ವ್ಯಾಪ್ತಿಯಲ್ಲಿಯೂ ಬಡ ರೈತರು ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಆದರೆ, ಈಚೆಗೆ ನಗರ ವ್ಯಾಪ್ತಿ ವಿಸ್ತರಣೆಯಾಗುತ್ತಿರುವುದು, ನಗರಸಭೆ, ಪುರಸಭೆಗಳು ರಚನೆಯಾಗಿರುವುದರಿಂದ ಈ ರೈತರು ಸಾಗುವಳಿಯಿಂದ ವಂಚಿತರಾಗಿದ್ದಾರೆ. ಬಡ ರೈತರಿಗೆಲ್ಲ ಈ ಭೂಮಿಯೇ ಜೀವನಾಧಾರವಾಗಿರುವುದರಿಂದ ಇವರಿಗೆ ಸಾಗುವಳಿ ಪತ್ರ ನೀಡಬೇಕು. ತಕ್ಷಣವೇ ದರಬಾಸ್ತು ಸಮಿತಿ ರಚಿಸಿ ಬಾಕಿ ಇರುವ ಅರ್ಜಿ ವಿಲೇವಾರಿ ಮಾಡಬೇಕು ಹಾಗೂ ರೈತರ ಜಮೀನುಗಳನ್ನು ಪಕ್ಕ ಪೋಡು ಮಾಡಬೇಕು ಎಂದು ಆಗ್ರಹಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಚಿಕ್ಕಣ್ಣೇಗೌಡ, ಕಾರ್ಯದರ್ಶಿ ಜಗದೀಶ್ ಸೂರ್ಯ, ಚಂದ್ರಶೇಖರ್ ಕೋಟೆ, ಇಂದಿರಾನಗರ ಪ್ರಶಾಂತ್ , ವೀರಭದ್ರಪ್ಪ, ಲೋಕೇಶ್, ಸಣ್ಣನಾಯ್ಕ, ರಾಜಶೇಖರ್, ಪುಟ್ಟರಾಜು, ಚಂದರಾಜು, ಗೋಪಾಲ್, ಕಣಗಾಲು ಲೋಕೇಶ್, ಪುಟ್ಟರಾಜ, ನೂರಾಣಿ, ಚೌಡಮ್ಮ, ಚೆಲುವಮ್ಮ, ರತ್ನ, ಮುಳ್ಳೂರು ಮಹಾದೇವ, ಸಿದ್ದಯ್ಯ ಮಂಜೇಗೌಡ, ಜಯರಾಂ ಭಾಗವಹಿಸಿದ್ದರು.

ಮಹಿಳೆ ವಶ; 26 ಕೆಜಿ ಗಾಂಜಾ ಜಪ್ತಿ



ಸಿಸಿಬಿ ಪೊಲೀಸರು ವಶಪಡಿಸಿಕೊಂಡಿರುವ ಗಾಂಜಾ

ಮೈಸೂರು, ಮೇ 9– ಮೈಸೂರಿನ ಸಿಸಿಬಿ ಪೊಲೀಸರು 26 ಕೆಜಿ ಗಾಂಜಾ ವಶಪಡಿಸಿಕೊಂಡು, ಮಹಿಳೆಯನ್ನು ವಶಕ್ಕೆ ಪಡೆದಿದ್ದಾರೆ.

ನಗರದ ಫೋರಂ ಮಾಲ್ ಬಳಿಯ ಸಮೋಸಾ ಕಾರ್ನರ್ ಸಮೀಪದ ಮನೆಯಲ್ಲಿ ಗಾಂಜಾ ಇಟ್ಟಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಪೊಲೀಸರು, ಸಲ್ಮಾ (50) ಎಂಬುವರನ್ನು ವಶಕ್ಕೆ ಪಡೆದಿದ್ದಾರೆ. ಈ ವೇಳೆ ಬಚ್ಚಿಟ್ಟಿದ್ದ 26 ಕೆಜಿ ಗಾಂಜಾವನ್ನು ಜಪ್ತಿ ಮಾಡಿದ್ದಾರೆ.

ಸಿಸಿಬಿ ಎಸಿಪಿ ಮೊಹಮ್ಮದ್ ಷರೀಫ್ ರಾವತ್ತರ್, ಎಸಿಪಿ ಸತೀಶ್ ಎಚ್.ಪಿ. ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಲೇಪಾಕ್ಷ, ರಾಜು, ಸುಪ್ರಿಯಾ, ಸಿಬ್ಬಂದಿ ದೊಡ್ಡೇಗೌಡ, ಶಿವಣ್ಣ, ಮಧು, ರಮ್ಯಾ, ಅನಿಲ್, ರಾಜು, ರವಿ ಹಾಗೂ ಚಾಲಕ ಶ್ರೀನಿವಾಸ್ ಪಾಲ್ಗೊಂಡಿದ್ದರು.

ಕೆಲ ದಿನಗಳ ಹಿಂದೆ ಲಷ್ಕರ್ ಮೊಹಲ್ಲಾ, ಅಕ್ಕಿಚೌಕ, 2ನೇ ಕ್ರಾಸ್‌ನಲ್ಲಿರುವ ಲಾಡ್ಜ್‌ವೊಂದರ ಬಳಿ ನಿಲ್ಲಿಸಿದ್ದ ಕಾರಿನಲ್ಲಿದ್ದ ಸುಮಾರು 32 ಕೆಜಿ ಗಾಂಜಾವನ್ನು ಸಿಸಿಬಿ ಪೊಲೀಸರು ವಶಪಡಿಸಿಕೊಂಡು, ಒಡಿಶಾ ಮೂಲದ ಇಬ್ಬರನ್ನು ಬಂಧಿಸಿದ್ದರು.

ನಾಳೆ ಮೈಸೂರಲ್ಲಿ 'ದೇಶಕ್ಕಾಗಿ ಬೈಕ್ ರ‍್ಯಾಲಿ"

ಮೈಸೂರು, ಮೇ 9– ಉಗ್ರರನ್ನು ಪೋಷಿಸುತ್ತಿರುವ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸುತ್ತಿರುವ ಭಾರತೀಯ ಸೇನೆಗೆ ನೈತಿಕ ಬೆಂಬಲ ತುಂಬುವ ಉದ್ದೇಶದಿಂದ ಟೀಂ ಮೈಸೂರು ವತಿಯಿಂದ ಮೇ 11ರಂದು ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ.

'ದೇಶಕ್ಕಾಗಿ ಬೈಕ್ ರ‍್ಯಾಲಿ' ಶೀರ್ಷಿಕೆಯಲ್ಲಿ ಅಂದು ಬೆಳಗ್ಗೆ 10.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭಗೊಂಡು ಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ ಚಿಕ್ಕಗಡಿಯಾರದ ವೃತ್ತ, ದೇವರಾಜ ಅರಸು ರಸ್ತೆ ನಾರಾಯಣ ಶಾಸ್ತ್ರೀ ರಸ್ತೆ, ಚಾಮರಾಜ ಜೋಡಿ, ಬಸವೇಶ್ವರ ವೃತ್ತ, ಅಗ್ರಹಾರ ವೃತ್ತದ ಮೂಲಕ ಸಾಗಿ 101 ಗಣಪತಿ ದೇವಸ್ಥಾನದ ಬಳಿ ರ‍್ಯಾಲಿ ಕೊನೆಗೊಳ್ಳಲಿದೆ. ಈ ಬೈಕ್ ರ‍್ಯಾಲಿಯಲ್ಲಿ ದೇಶಭಕ್ತ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ತಮ್ಮೊಂದಿಗೆ ರಾಷ್ಟ್ರಧ್ವಜ ತರಬೇಕು ಎಂದು ಟೀಂ ಮೈಸೂರು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ:9880837370, 7411334789 ಸಂಪರ್ಕಿಸಬಹುದು.

ಭಾರತೀಯ ಸೈನಿಕರಿಗೆ ಜೈಕಾರ




ಉಗ್ರರನ್ನು ಬೆಂಬಲಿಸಿ ಭಾರತದ ಮೇಲೆ ಹಗೆ ಸಾಧಿಸುತ್ತಿರುವ ಪಾಕಿಸ್ತಾನಕ್ಕೆ ತಕ್ಕ ಪ್ರತ್ಯುತ್ತರ ನೀಡುತ್ತಿರುವ ಭಾರತೀಯ ಸೈನಿಕರಿಗೆ ಬೆಂಬಲ ಸೂಚಿಸಿ ಮದ್ದೂರು ತಾಲೂಕಿನ ಕೊಪ್ಪ ಗ್ರಾಮದ ದೇಶಪ್ರೇಮಿ ಮುಸ್ಲಿಂ ಬಾಂಧವರೊಂದಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಘೋಷಣೆ ಕೂಗಿದರು.

ಡಾ. ಮುಕುಂದ ನಿಧನ



ಮೈಸೂರು, ಮೇ 9– ಮೂಲತಃ ನಂಜಗೂಡು ತಾಲೂಕಿನ ಅಲಗಂಚಿ ಗ್ರಾಮದ, ಹಾಲಿ ಕುವೆಂಪುನಗರ ನಿವಾಸಿ ಮುಕುಂದ(82) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 3.30ಕ್ಕೆ ಸ್ವಗ್ರಾಮ ಅಲಗಂಚಿಯ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.05.2025 ಶನಿವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ–2025 ಮತ್ತು ರಾಜಗೋಪುರಕ್ಕೆ ಭೂಮಿಪೂಜೆ, ಬೆಳಗ್ಗೆ 9ಕ್ಕೆ ಅವಭೃತಸ್ನಾನ (ಚಕ್ರಸ್ನಾನ), ಅಮೃತ ಕಳಶಾಭಿಷೇಕ, ಸಂಜೆ 6ಕ್ಕೆ ವಿದ್ವಾನ್ ಆರ್. ರಘು ಮತ್ತು ವೃಂದದವರಿಂದ ಸಂಗೀತ ಕಾರ್ಯಕ್ರಮ, ಸಂಜೆ 8ಕ್ಕೆ ವೈಭವ ಶಯನೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, 3ನೇ ಹಂತ, ಗೋಕುಲಂ.

■ **ಮೈಸೂರು ಲಯನ್ಸ್ ಕ್ಲಬ್ ಆಫ್ ನಿಸರ್ಗ ಮತ್ತು ಮೈಸೂರು ಚೆಸ್ ಸೆಂಟರ್ :** ಕರ್ನಾಟಕ ರಾಜ್ಯ ಅಂಧರ ಚೆಸ್ ಚಾಂಪಿಯನ್‌ಶಿಪ್ ಟೂರ್ನಮೆಂಟ್ ಹಾಗೂ ಕರ್ನಾಟಕ ರಾಜ್ಯ ವಿಶೇಷಚೇತನ ಚೆಸ್ ಸಂಸ್ಥೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಕೆ.ಎಸ್. ರಾಜಣ್ಣ, ಮುಖ್ಯ ಅತಿಥಿಗಳು : ಲಯನ್ ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಅಧ್ಯಕ್ಷ ಮಧುಕರ್, ಉಡುಪ, ಗುರು, ಯಶಸ್ವಿ ಸೋಮಶೇಖರ್, ಡಾ. ರಾಘವೇಂದ್ರ ಪ್ರಸಾದ್, ಮಂಜುನಾಥ್, ಲಯನ್ ರಾಜಶೇಖರ್, ನಾಗೇಶ್, ಸಂದೇಶ್, ಸತೀಶ್, ಎಸ್. ಮೂರ್ತಿ, ಜಯಕುಮಾರ್, ಶ್ರೀನಿವಾಸ್, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ವಿಶ್ವೇಶ್ವರನಗರ, ಬೆಳಗ್ಗೆ 10ಕ್ಕೆ.

■ **ಸ್ವಾಗತ ಸಮಿತಿ – 9ನೇ ಜನರಲ್ ಕಾನ್ಫರೆನ್ಸ್ ಆಫ್ ಆಲ್ ಇಂಡಿಯಾ ಇನ್ಶೂರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್ :** ಸಾಮಾಜಿಕ ಭದ್ರತೆಯಾಗಿ ಸಾರ್ವತ್ರಿಕ ಪಿಂಚಣಿ–ತಕ್ಷಣದ ಅಗತ್ಯ ಕುರಿತು ವಿಚಾರ ಸಂಕಿರಣ, ಭಾಷಣಕಾರರು : ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಮಿಶ್ರಾ, ಕಾರ್ಯದರ್ಶಿ ಕೆ.ಎನ್. ಉಮೇಶ್, ಮಾಜಿ ಉಪಾಧ್ಯಕ್ಷ ಎಸ್.ಕೆ. ಗೀತಾ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳೆಯರ ವಿಶ್ವವಿದ್ಯಾನಿಲಯ ಮಾಜಿ ಉಪ ಕುಲಪತಿ ಶ್ರೀಮತಿ ಸಬೀಹಾ ಭೂಮಿಗೌಡ, ಸ್ಥಳ: ಗಾನಭಾರತಿ ಸಂಗೀತ ಸಭಾ, ವೀಣೆ ಶೇಷಣ್ಣ ಭವನ, ಬೆಳಗ್ಗೆ 10.30ಕ್ಕೆ

■ **ಮಾಲಗತ್ತಿ ದಶಬಲ ಟ್ರಸ್ಟ್, ರೈಟರ್ಸ್ ಅಕಾಡೆಮಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ರಾಜ್ಯ ಮಟ್ಟದ ಕವಿಗೋಷ್ಠಿ, ಕವನ ಸಂಕಲನ ಮತ್ತು ಖಂಡಕಾವ್ಯ ಬಿಡುಗಡೆ ಸಮಾರಂಭ, ಉದ್ಘಾಟನೆ : ಸಾಹಿತಿ ಡಾ. ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ : ದಶಬಲ ಟ್ರಸ್ಟ್ ಉಪಾಧ್ಯಕ್ಷ ಡಾ. ಡಿ.ಕೆ. ರಾಜೇಂದ್ರ, ಖಂಡಕಾವ್ಯದ ಬಿಡುಗಡೆ : ವಿಮರ್ಶಕರಾದ ಡಾ. ಎಂ.ಎಸ್. ಆಶಾದೇವಿ, ಕಾವ್ಯ ಢಮರುಗ ಬಿಡುಗಡೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ.ಎನ್.ಕೆ. ಲೋಲಾಕ್ಷಿ, ಪ್ರಾಸ್ತಾವಿಕ ನುಡಿ : ಡಾ. ನೀ.ಗೂ. ರಮೇಶ್, ಸ್ಥಳ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬಿ.ಎಂ.ಶ್ರೀ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ವಿದ್ವಾನ್ ಟಿ. ನಾರಾಯಣ ಶಾಸ್ತ್ರೀ ಪ್ರತಿಷ್ಠಾನ :** ಗಂಗಾರಾಮ ವೈಭವ, ವೇದಪಾರಾಯಣ ಗಂಗಾಪೂಜೆ ಕುಂಭಮೇಳದ ಇತಿವೃತ್ತ (ವರದಿ), ಭಾರತೀ ಯೋಗಧಾಮದ ಟಿ.ಎನ್. ಪ್ರಭಾಕರ ಮತ್ತು ಶ್ರೀ ವಾಚಸ್ಪತಿ ನಾರಾಯಣ, ವಿಶ್ರಾಂತ ಪ್ರಾಚಾರ್ಯ ವಿದ್ವಾನ್ ಎಂ.ಆರ್. ಕೇಶವಮೂರ್ತಿ ಅವರಿಂದ ಕಾವ್ಯವಾಚನ, ಸಂಗೀತ ಕಲಾವಿದರಾದ ವಿದುಷಿ ಟಿ.ಪಿ. ಸುಭಾಷಿಣಿ ಅವರಿಂದ ವ್ಯಾಖ್ಯಾನ, ಸ್ಥಳ: ಪ್ರವಚನ ಮಂದಿರ, ಪ್ರಸನ್ನ ವಿಶ್ವೇಶ್ವರ ದೇವಾಲಯ, ಚಾಮರಾಜಪುರಂ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಭಾಗೀಯ ರಾಜ್ಯ ಮತ್ತು ಕೇಂದ್ರ ಸರ್ಕಾರಿ, ಅರೆ ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಧಿಕಾರಿಗಳ, ನೌಕರರ ಪರಿಷತ್, ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ :** ಅಭಿನಂದನಾ ಸಮಾರಂಭ, ದಲಿತ ಸಂಘಟನೆಗಳ ಮುಂದಿರುವ ಸವಾಲುಗಳು ಕುರಿತು ವಿಷಯ ಮಂಡನೆ, ಉದ್ಘಾಟನೆ : ವಿಚಾರವಾದಿ ಪ್ರೊ. ಕೆ.ಎಸ್. ಭಗವಾನ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಷಯ ಮಂಡನೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಅಧ್ಯಕ್ಷತೆ : ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಹೆಚ್. ರಾಜು, ಸ್ಥಳ: ದಿಗಂ ಭವನ (ಇಂದ್ರಲೋಕ), ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 879, ಕಥೆ ಹೇಳುವವರು: ಡಾ. ಲಾವಣ್ಯಪ್ರಭ ಕೆ ಎನ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ರಂಗವಾಹಿನಿ, ಚಾಮರಾಜನಗರ, ನೆಲೆ ಹಿನ್ನೆಲೆ, ಡಾ. ರಾಮಮನೋಹರ ಲೋಹಿಯಾ ಟ್ರಸ್ಟ್ :** ಮುಳ್ಳೂರು ನಾಗರಾಜ ರಾಜ್ಯ ಮಟ್ಟದ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ, ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಪ್ರಾಸ್ತಾವಿಕ ನುಡಿ : ಕವಿ ಸುಬ್ಬು ಹೊಲೆಯಾರ್, ಅಧ್ಯಕ್ಷತೆ : ಶಾಸಕ ದರ್ಶನ್ ಧ್ರುವನಾರಾಯಣ್, ಪ್ರಶಸ್ತಿ ಪ್ರದಾನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಗಾಯತ್ರಿ, ಉಪಸ್ಥಿತರು : ಡಾ. ಅಪ್ಪಗೆರೆ ಸೋಮಶೇಖರ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಪ್ರಶಸ್ತಿ ಪುರಸ್ಕೃತರು : ಚಾಂದ್‌ಪಾಷ ಎನ್.ಎಸ್., ಪಿ. ನಂದಕುಮಾರ್, ಮುಖ್ಯ ಅತಿಥಿಗಳು : ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಜಂಟಿ ನಿರ್ದೇಶಕರಾದ ಡಾ. ಲಕ್ಷ್ಮಮ್ಮ, ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ್ ಸೋಸ್ಲೆ, ಪತ್ರಕರ್ತ ರವಿಕೋಟಿ, ರಂಗಕರ್ಮಿ ಕೆ.ಆರ್. ಗೋಪಾಲಕೃಷ್ಣ, ನಾಗೇಶ್‌ರಾಜ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಸ್ಪಿರಿಚ್ಯುಯೆಲ್ ಗ್ಲೋರಿ ಆಫ್ ಶ್ರೀ ರಾಮಕೃಷ್ಣ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಐಇಐ ಕೇರಳ ಸ್ಟೇಟ್ ಸೆಂಟರ್ ಅಧ್ಯಕ್ಷ ಬಾಲಕೃಷ್ಣ ನಾಯರ್ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ :ಡಾ. ಕೇಶವಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಮೇದಾ ಮಂಜುನಾಥ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ: ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ, 4.00 ನಾಟಕ ಬಿದ್ದು ಮಾಲೆಯಾದ ಹೂಗಳು, ರಚನೆ–ಬಿ. ಆರ್. ನಾಗೇಶ್, ನಿರ್ಮಾಣ –ಡಾ. ಬಿ.ಎಂ. ಶರಭೇಂದ್ರಸ್ವಾಮಿ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ–ಕಾಳುಮೆಣಸು ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ–ಪಾಂಡವಪುರ ತಾಲೂಕು ಶಂಭುವನಹಳ್ಳಿಯ ಶಂಕರಸ್ವಾಮಿ ಮತ್ತು ಅವರ ಮಗ ಎಸ್. ಮಂಜುನಾಥ್, ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಸವಿನೆನಪು –ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ – ರತನ್ ಭಾರತಿ–ಗಿಟಾರ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಶನಿವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 24 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಭಾರತ-ಪಾಕಿಸ್ತಾನ ಗಡಿ ಉದ್ವಿಗ್ನತೆ

ಐಪಿಎಲ್ 2025 ಪಂದ್ಯಾವಳಿ ಒಂದು ವಾರ ಮುಂದೂಡಿಕೆ

ನವದೆಹಲಿ, ಮೇ 9– ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿ ಉದ್ವಿಗ್ನತೆ ಹಿನ್ನೆಲೆಯಲ್ಲಿ, ಇಂಡಿಯನ್ ಪ್ರಿಮಿಯರ್ ಲೀಗ್ (ಐಪಿಎಲ್) 2025 ಪಂದ್ಯಾವಳಿಯನ್ನು ಒಂದು ವಾರ ಕಾಲ ಮುಂದೂಡಿದೆ.



ಈ ಕುರಿತು ಅಧಿಕೃತ ಮಾಹಿತಿ ನೀಡಿರುವ ಬಿಸಿಸಿಐ, ಪಂದ್ಯಾವಳಿಯನ್ನು ಮುಂದೂಡುವ ನಿರ್ಧಾರ ಮಾಡಿರುವುದಾಗಿ ಸ್ಪಷ್ಟಪಡಿಸಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ಹೆಚ್ಚಾಗಿದೆ. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ದಲ್ಲಿರುವ ಒಟ್ಟು 9 ಭಯೋತ್ಪಾದಕ ಶಿಬಿರಗಳನ್ನು ಭಾರತೀಯ ಸೇನೆ ಧ್ವಂಸಗೊಳಿಸಿದ ಮೇಲೆ, ಉಭಯ ರಾಷ್ಟ್ರಗಳ ನಡುವಿನ ಗಡಿಯಲ್ಲಿ ನಿರಂತರವಾಗಿ ಗುಂಡಿನ ಚಕಮಕಿ ನಡೆಯುತ್ತಿದೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಪ್ರಸ್ತುತ ನಡೆಯುತ್ತಿದ್ದ ಐಪಿಎಲ್ 2025ರ ಪಂದ್ಯಾವಳಿಯನ್ನು ಒಂದು ವಾರಗಳ ಕಾಲ ಮುಂದೂಡಿ ಬಿಸಿಸಿಐ ಆದೇಶ ಹೊರಡಿಸಿದೆ. ಐಪಿಎಲ್ 2025 ಪಂದ್ಯಾವಳಿ ಬಹುತೇಕ ಪ್ಲೇ ಆಫ್ ಹಂತವನ್ನು ತಲುಪಿತ್ತು. ಆದರೆ ಅಷ್ಟರಲ್ಲಿ ಭಾರತ–ಪಾಕಿಸ್ತಾನ ನಡುವೆ ಸಂಘರ್ಷ ಆರಂಭವಾಯಿತು. ಗಡಿಯಲ್ಲಿ ಅಸಾಮಾನ್ಯ ಪರಿಸ್ಥಿತಿ ಇರುವಾಗ ಪಂದ್ಯಾವಳಿ ಮುನ್ನಡೆಸುವುದು ಸೂಕ್ತವೇ ಎಂಬ ಪ್ರಶ್ನೆ ಎದುರಾಗಿತ್ತು. ಈ ಕುರಿತು ಹಲವು ಬಿಸಿಸಿಐ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ನಿನ್ನೆ (ಮೇ.8) ಹಿಮಾಚಲ ಪ್ರದೇಶದ ಧರ್ಮಶಾಲಾ ಮೈದಾನದಲ್ಲಿ ನಡೆಯ ಬೇಕಿದ್ದ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯವನ್ನು ರದ್ದುಗೊಳಿಸಿ, ಬಿಸಿಸಿಐ ನಿರ್ಧಾರ ಪ್ರಕಟಿಸಿತ್ತು. ಇದೀಗ ಇಡೀ ಪಂದ್ಯಾವಳಿಯನ್ನೇ ಒಂದು ವಾರಗಳ ಕಾಲ ಮುಂದೂಡುವ ನಿರ್ಣಯ ಪ್ರಕಟಿಸಿದೆ.

ಬಿಸಿಸಿಐ ನಿರ್ಣಯದಂತೆ ಐಪಿಎಲ್ 2025 ಪಂದ್ಯಾವಳಿಯ ಬಾಕಿ ಉಳಿದ ಎಲ್ಲಾ 16 ಪಂದ್ಯಗಳು ಒಂದು ವಾರಗಳ ಕಾಲ ಮುಂದೂಡಲ್ಪಟ್ಟಿವೆ. ಇದರಿಂದಾಗಿ ಇಂದು (ಮೇ.9) ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಲಖ್ನೋ ಸೂಪರ್ ಜೈಂಟ್ಸ್ ನಡುವಿನ ಪಂದ್ಯವೂ ತಾತ್ಕಾಲಿಕವಾಗಿ ರದ್ದುಗೊಂಡಿದೆ.

ಮೈಸೂರು ಅರಮನೆ ಆವರಣದಲ್ಲಿ ನಾಗರಿಕ ರಕ್ಷಣಾ ಅಣಕು ಕವಾಯತು ಪೂರ್ವಾಭ್ಯಾಸ

ನೈಜತೆ ಚಿತ್ರಣ ಕಣ್ಣಿಗೆ ಕಟ್ಟಿದ ಎಚ್ಚರಿಕಾ ಕ್ರಮಗಳ ಮಾಕ್ ಡ್ರಿಲ್



ಮೈಸೂರು ಅರಮನೆ ಆವರಣದಲ್ಲಿ ನಾಗರಿಕ ರಕ್ಷಣಾ ಅಣಕು ಕವಾಯತು(ಮಾಕ್ ಡ್ರಿಲ್) ಪೂರ್ವಾಭ್ಯಾಸ ನಡೆಸಲಾಯಿತು.

ಮೈಸೂರು, ಮೇ 9(ಎಂಕೆ)– ಮೈಸೂರಿನಲ್ಲಿ ನಾಳೆ (ಮೇ 10) ನಡೆಯುವ ನಾಗರಿಕ ರಕ್ಷಣಾ ಅಣಕು ಕವಾಯತು(ಮಾಕ್ ಡ್ರಿಲ್) ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಅರಮನೆ ಆವರಣದಲ್ಲಿ ಪೂರ್ವಾಭ್ಯಾಸ ನಡೆಸಲಾಯಿತು.

ಭಾರತ–ಪಾಕಿಸ್ತಾನದ ನಡುವೆ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯಲ್ಲಿ ಹಿನ್ನಲೆ ಕೇಂದ್ರ ಗೃಹ ಸಚಿವಾಲಯದ ನೀಡಿರುವ ಸೂಚನೆ ಮೇರೆಗೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ನೇತೃತ್ವದಲ್ಲಿ ಪೊಲೀಸ್ ಇಲಾಖೆ, ಅಗ್ನಿಶಾಮಕ, ಆರೋಗ್ಯ ಇಲಾಖೆ, ಗೃಹರಕ್ಷಣ ದಳ, ನಗರಪಾಲಿಕೆ, ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿಗಳಿಂದ ಅರಮನೆ ಆವರಣದಲ್ಲಿ ಮಾಕ್ ಡ್ರಿಲ್ ಪೂರ್ವಾಭ್ಯಾಸ ನಡೆಯಿತು.

ಮೈಸೂರಿನ ಪ್ರಮುಖ ಪ್ರವಾಸಿ ತಾಣವೂ ಆದ ವಿಶ್ವ ಪ್ರಸಿದ್ಧ ಮೈಸೂರು ಅರಮನೆ ಸುತ್ತಮುತ್ತ ಸಂಶಯಾಸ್ಪದ ಹೆಲಿಕಾಪ್ಟರ್ ಹಾರಾಡುತ್ತಿದ್ದು, ಅರಮನೆ ಆವರಣದಲ್ಲಿ ಬಾಂಬ್‌ಗಳನ್ನು ಹಾಕಲಾಗುತ್ತಿದೆ ಎಂಬ ತುರ್ತು ಸಂದೇಶ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಬಂದ ಕೂಡಲೇ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ, ಅಗ್ನಿಶಾಮಕ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಕೂಡಲೇ ಎಚ್ಚೆತ್ತುಕೊಂಡು

■ 6ನೇ ಪುಟಕ್ಕೆ


ಗಡಿಯುದ್ಧಕ್ಕೂ ಪಾಕ್ ಅಪ್ರಚೋದಿತ ಶೆಲ್, ಡ್ರೋನ್ ದಾಳಿ

ಭಾರತೀಯ ಸೇನೆಯಿಂದ ತಕ್ಕ ಪ್ರತ್ಯುತ್ತರ



● 20ಕ್ಕೂ ಹೆಚ್ಚು ನಗರಗಳತ್ತ ನುಗ್ಗಿಬಂದ ನೂರಾರು ಡ್ರೋನ್‌ಗಳು ಧ್ವಂಸ ● ಧಾರ್ಮಿಕ ಕೇಂದ್ರಗಳು, ಜನವಸತಿ ನೆಲೆಯತ್ತ ಪಾಕ್ ಶೆಲ್ ದಾಳಿ ● ಮುಂದುವರೆದ ಭೂಸೇನೆಗಳ ಭಾರೀ ಗುಂಡಿನ ಚಕಮಕಿ





ಪಾಕಿಸ್ತಾನದ ನಿರಂತರ ಡ್ರೋನ್‌ಗಳನ್ನು ಭಾರತೀಯ ಸೇನೆ ಸಮರ್ಥವಾಗಿ ಹೊಡೆದುರುಳಿಸಿದೆ.

ನವದೆಹಲಿ, ಮೇ 9– ಗುರುವಾರ ರಾತ್ರಿಯಿಂದ ಮುಂಜಾನೆವರೆಗೆ ಪಾಕಿಸ್ತಾನದ ಅಪ್ರಚೋದಿತ ದಾಳಿಗೆ ಪ್ರತಿಯಾಗಿ ಭಾರತೀಯ ಸೇನೆ ಆ ದೇಶದ ಒಳಗೆ ನುಗ್ಗಿ ಪ್ರಮುಖ ಸೇನಾ ನೆಲೆಗಳನ್ನು ಧ್ವಂಸಗೊಳಿಸಿತ್ತು. ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್, ಪ್ರಮುಖ ನಗರವಾದ ಲಾಹೋರ್, ವಾಣಿಜ್ಯ ನಗರಿ ಕರಾಚಿ ಮುಂತಾದೆಡೆ ಭಾರತೀಯ ವಾಯುಸೇನೆ ಹಾಗೂ ನೌಕಾಸೇನೆ ಕ್ಷಿಪಣಿ ಹಾಗೂ ಡ್ರೋನ್‌ಗಳ ಮೂಲಕ ದಾಳಿ ನಡೆಸಿ, ಭಾರೀ ಪ್ರಮಾಣದ ಹಾನಿಯುಂಟು ಮಾಡಿತ್ತು. ಇಷ್ಟಾದರೂ ಬುದ್ಧಿ ಕಲಿಯದ ರಣಹೇಡಿ ಪಾಕ್, ಶುಕ್ರವಾರ ರಾತ್ರಿ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ವಾಯುನೆಲೆ ಹಾಗೂ ವಸತಿ ಪ್ರದೇಶಗಳ ಮೇಲೆ ಡ್ರೋನ್ ಮತ್ತು ಶೆಲ್ ದಾಳಿ ನಡೆಸುವ ಮೂಲಕ ಭಂಡತನ ಪ್ರದರ್ಶಿಸಿದೆ.

ಮಹಿಳೆ ಸಾವು: ಪಾಕಿಸ್ತಾನ ಹಾರಿಸಿದ ಬಹುತೇಕ ಎಲ್ಲಾ ಡ್ರೋನ್‌ಗಳನ್ನು ಭಾರತೀಯ ವಾಯು ಸೇನೆಯು ವಾಯು ರಕ್ಷಣಾ ವ್ಯವಸ್ಥೆ ಮೂಲಕ ಛಿದ್ರಗೊಳಿಸಿ, ಪಾಕ್‌ನ ಗುರಿಯನ್ನು ವಿಫಲಗೊಳಿಸಿದೆ. ಆದರೆ ಪಾಕ್ ಶೆಲ್ ದಾಳಿಗೆ ಪ್ರತ್ಯುತ್ತರವಾಗಿ ಭೂಸೇನೆ ನಿರಂತರ ವಿರೋಚಿತ ಹೋರಾಟ ನಡೆಸುತ್ತಿದ್ದು, ಭಾರತದ ಭಾಗದಲ್ಲಿ ಕೆಲವೆಡೆ ಕಟ್ಟಡಗಳಿಗೆ ಹಾನಿಯಾಗಿದ್ದರೆ ಮಹಿಳೆಯೋರ್ವರು ಮೃತಪಟ್ಟಿದ್ದಾರೆ. ಅದೇ ವೇಳೆ ಪಾಕ್ ಸೈನಿಕರು ಹಲವರು ಗಾಯಗೊಂಡಿರಬಹುದು ಇಲ್ಲವೇ ಮೃತಪಟ್ಟಿರಬಹುದು ಎಂದು ಹೇಳಲಾಗುತ್ತಿದೆಯಾದರೂ ಅದರ ವಿವರಗಳು ಲಭ್ಯವಾಗಿಲ್ಲ.

ನಿನ್ನೆ ಪಾಕಿಸ್ತಾನದ ನಗರಗಳ ಮೇಲೆ ಭಾರತದ ವಾಯುಸೇನೆ ಮತ್ತು ನೌಕಾ ಸೇನೆ ದಾಳಿ ನಡೆಸಿದರೆ, ಗಡಿಭಾಗದಲ್ಲಿ ಭೂಸೇನೆ ಪಾಕ್‌ಗೆ ತಕ್ಕ ಪ್ರತ್ಯುತ್ತರ ನೀಡಿತ್ತು. ಆದರೆ ಇಂದು ಭಾರತದ ಗಡಿಭಾಗದಲ್ಲಿ ವಾಯುಸೇನೆ ಹಾಗೂ ಭೂಸೇನೆ ಮಾತ್ರ ಹೋರಾಟದಲ್ಲಿ

■ 6ನೇ ಪುಟಕ್ಕೆ

ಓಮರ್ ಅಬ್ದುಲ್ಲಾ ನಿವಾಸದ ಬಳಿ ಭಾರೀ ಸ್ಫೋಟದ ಸದ್ದು

ಜಮ್ಮುವಿನ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ನಿವಾಸದ ಬಳಿಯೇ ಭಾರತ ಮತ್ತು ಪಾಕಿಸ್ತಾನ ಸೈನಿಕರ ಕದನ ನಡೆದಿದ್ದು, ಕೆಲ ನಿಮಿಷಗಳ ಕಾಲ ಭಾರೀ ಸ್ಫೋಟದ ಶಬ್ದ ಪದೇ ಪದೇ ಕೇಳಿ ಬಂದಿದೆ. ಈ ಭಾಗದಲ್ಲಿ ಪಾಕಿಸ್ತಾನವು ಶೆಲ್ ಬಳಸುತ್ತಿದ್ದು, ಭಾರತೀಯ ಸೈನಿಕರು ಕೂಡ ಫಿರಂಗಿಗಳಿಂದ ಪ್ರತ್ಯುತ್ತರ ನೀಡುತ್ತಿದ್ದಾರೆ. ತಮ್ಮ ನಿವಾಸದ ಬಳಿ ಕದನ ನಡೆದಿರುವುದನ್ನು ಖಚಿತಪಡಿಸಿರುವ ಜಮ್ಮು ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರು, 'ನಾನಿರುವ ಸ್ಥಳದ ಬಳಿಯೇ ಭಾರೀ ಸ್ಫೋಟದ ಶಬ್ಧಗಳು ಕೇಳಿಬರುತ್ತಿವೆ ಬಹುಶಃ ಇದು ಶೆಲ್ ದಾಳಿ ಶಬ್ಧ ಇರಬಹುದು' ಎಂದು ಟ್ವೀಟ್ ಮಾಡಿದ್ದು, ಜಮ್ಮು ಮತ್ತು ಸುತ್ತಮುತ್ತಲಿನಲ್ಲಿರುವ ಪ್ರತಿಯೊಬ್ಬರೂ ಕೆಲವು ಗಂಟೆಗಳವರೆಗೂ ಮನೆಯಲ್ಲೇ ಇರಿ ಅಥವಾ ಹೊರಗಿರುವವರು ನಿಮಗೆ ಆರಾಮದಾಯಕವಾಗಿರುವ ಸ್ಥಳದಲ್ಲೇ ಇರಿ, ವದಂತಿಗಳನ್ನು ನಂಬಬೇಡಿ, ಆಧಾರರಹಿತ ಅಥವಾ ದೃಢೀಕರಿಸದ ಸುದ್ದಿಗಳನ್ನು ಹಬ್ಬಿಸಬೇಡಿ ನಾವು ಎಲ್ಲರೂ ಒಟ್ಟಾಗಿ ಈ ಪರಿಸ್ಥಿತಿಯನ್ನು ಎದುರಿಸೋಣ ಎಂದು ಅವರು ಮನವಿ ಮಾಡಿದ್ದಾರೆ.

ಮೂರು ವಿಭಾಗದ ಸೇನಾ ಮುಖ್ಯಸ್ಥರೊಂದಿಗೆ ಪ್ರಧಾನಿ ಮೋದಿ ಮೂರು ಗಂಟೆ ಸಭೆ

ಆಪರೇಷನ್ ಸಿಂಧೂರ ಪ್ರಗತಿ ಮಾಹಿತಿ ಸಂಗ್ರಹ



ರಕ್ಷಣಾ ಸಚಿವರು ಹಾಗೂ ಸೇನಾ ಮುಖ್ಯಸ್ಥರೊಂದಿಗೆ ಪ್ರಧಾನಿ ಮೋದಿ ಶುಕ್ರವಾರ ಸುದೀರ್ಘ ಮೂರು ಗಂಟೆಗಳ ಕಾಲ ಸಭೆ ನಡೆಸಿದರು.

ನವದೆಹಲಿ, ಮೇ 9– ಗಡಿ ಭಾಗದಲ್ಲಿ ಪಾಕ್ ಕುಚೇಷ್ಟೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಎರಡೂ ದೇಶಗಳ ನಡುವೆ ಉದ್ಭವಿಸಿರುವ ಸಂಘರ್ಷ ಪರಿಸ್ಥಿತಿಯನ್ನು ಅವಲೋಕಿಸಲು ಪ್ರಧಾನಿ ನರೇಂದ್ರ ಮೋದಿ ಸೇನೆಯ ಮೂರೂ ವಿಭಾಗದ ಮುಖ್ಯಸ್ಥರೊಂದಿಗೆ ಸಮಾಲೋಚನೆ ನಡೆಸಿದರು.

ಕಳೆದ 3 ದಶಕಗಳಲ್ಲಿ ಇದೇ ಮೊದಲ ಬಾರಿಗೆ ಎರಡು ದೇಶಗಳ ಸಂಬಂಧ ತೀರಾ ಹದಗೆಟ್ಟಿದ್ದು, ಯುದ್ಧದ ಕಾರ್ಮೋಡ ಆವರಿಸಿದೆ. ಈ ಪರಿಸ್ಥಿತಿಯಲ್ಲಿ ಪಾಕಿಸ್ತಾನದ ದಾಳಿಯನ್ನು ಎದುರಿಸಬಹುದಾದ ಪರಿಣಾಮಕಾರಿ ಕ್ರಮಗಳ ಬಗ್ಗೆ ಮೋದಿ ಚರ್ಚೆ ನಡೆಸಿದರು.

ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ. 22ರಂದು ಉಗ್ರರು ದಾಳಿ ನಡೆಸಿ 26 ಮಂದಿ ಪ್ರವಾಸಿಗರನ್ನು ಹತ್ಯೆಗೈದರು. ಇದರ ವಿರುದ್ಧ ಪ್ರತೀಕಾರ ತೀರಿಸಿಕೊಂಡ ಭಾರತ ಮೇ 7ರಂದು ಪಾಕ್‌ನ ಉಗ್ರ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಭಯೋತ್ಪಾದಕರನ್ನು ಮಾತ್ರ ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಲಾಗಿದೆ ಎಂದು ಭಾರತ ಸ್ಪಷ್ಟನೆ ನೀಡಿತ್ತಾದರೂ ಪಾಕ್ ಕದನ ವಿರಾಮ ಉಲ್ಲಂಘಿಸಿ ಭಾರತದ ಹಲವು

■ 6ನೇ ಪುಟಕ್ಕೆ

ಶ್ರೀನಗರ ವಿಮಾನ ನಿಲ್ದಾಣದಲ್ಲಿ ಭಾರೀ ಸ್ಫೋಟ

ಶ್ರೀನಗರದ ವಿಮಾನ ನಿಲ್ದಾಣದಲ್ಲಿ ಇಂದು ರಾತ್ರಿ ಭಾರೀ ಸ್ಫೋಟ ಸಂಭವಿಸಿದೆ ಪಾಕಿಸ್ತಾನ ಡ್ರೋನ್ ದಾಳಿ ನಡೆಸಿರಬಹುದು ಎಂದು ಹೇಳಲಾಗುತ್ತಿದೆ ಈಗಾಗಲೇ ವಿಮಾನ ನಿಲ್ದಾಣವನ್ನು ಬಂದ್ ಮಾಡಲಾಗಿದ್ದು, ಬ್ಲಾಕ್‌ಔಟ್ ಘೋಷಿಸಲಾಗಿತ್ತು. ಆದರೆ ಪಾಕಿಸ್ತಾನ ನಿರಂತರವಾಗಿ ಡ್ರೋನ್ ಹಾಗೂ ಶೆಲ್ ದಾಳಿಯನ್ನು ಈ ಭಾಗದಲ್ಲಿ ನಡೆಸುತ್ತಲೇ ಇದೆ.

ಭಾರತದ 36 ಕಡೆ 400 ಮಿಸೈಲ್‌ನಿಂದ ಪಾಕ್ ದಾಳಿ

ಕರ್ನಲ್ ಸೋಫಿಯಾ ಖುರೇಷಿ ಮಾಹಿತಿ

ನವದೆಹಲಿ, ಮೇ 9– ಭಾರತದ 36 ಕಡೆ 400 ಮಿಸೈಲ್ ಬಳಸಿಕೊಂಡು ಗುರುವಾರ ರಾತ್ರಿ ಪಾಕಿಸ್ತಾನ ದಾಳಿ ನಡೆಸಿದೆ ಎಂದು ಕರ್ನಲ್ ಸೋಫಿಯಾ ಖುರೇಷಿ ಅಧಿಕೃತ ಮಾಹಿತಿ ನೀಡಿದ್ದಾರೆ.

ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಯೋತ್ಪಾದಕರ ವಿರುದ್ಧ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ನಡೆಯುತ್ತಿದ್ದು, ವಿದೇಶಾಂಗ ಸಚಿವಾಲಯ ಹಾಗೂ ರಕ್ಷಣಾ ಸಚಿವಾಲಯ ಶುಕ್ರವಾರ ನಡೆಸಿದ ಜಂಟಿ ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುವಾರ



ರಾತ್ರಿ 8ರಿಂದ 9 ಗಂಟೆಗೆ ಆರಂಭವಾಗಿ ಮಧ್ಯರಾತ್ರಿವರೆಗೂ ಭಾರತದ ಮೇಲೆ ಪಾಕಿಸ್ತಾನ ನಿರಂತರ ದಾಳಿ ನಡೆಸಿದೆ. 36 ಕಡೆ 300ರಿಂದ 400 ಪಾಕ್ ಡ್ರೋನ್ ಮಿಸೈಲ್ ದಾಳಿ ಮಾಡಿದೆ. ಪಾಕ್‌ನ ಎಲ್ಲಾ ಮಿಸೈಲ್‌ಗಳನ್ನು ನಾಶ ಮಾಡಲಾಗಿದೆ. ಅಲ್ಲದೇ ಪಾಕಿಸ್ತಾನ ಎಲ್‌ಒಸಿಯಲ್ಲಿ ಗುಂಡಿನ ದಾಳಿ ಮಾಡಿದೆ. ಪಂಜಾಬ್, ಭಟಿಂಡಾ ಸೇನಾ ನೆಲೆ ಮೇಲೆ ಪಾಕ್ ದಾಳಿಗೆ ಯತ್ನಿಸಿದೆ ಎಂದರು.

ಪಾಕಿಸ್ತಾನ ತನ್ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಸ್ಥಗಿತ ಮಾಡಿಲ್ಲ. ಪಾಕಿಸ್ತಾನ, ಭಾರತದ ಏರ್ ಸ್ಟೇಷನ್‌ಗಳ ಮೇಲೆ ದಾಳಿ ಮಾಡಲು ಯತ್ನಿಸಿದೆ. ತನ್ನ ನಾಗರಿಕ ವಿಮಾನ ಬಳಸಿಕೊಂಡು ಬೇಜವಾಬ್ದಾರಿತನ ತೋರಿದೆ. ಈ ಮೂಲಕ ಪಾಕಿಸ್ತಾನ ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘನೆ ಮಾಡಿದೆ. ಆದರೆ ಭಾರತ ನಾಗರಿಕರಿಗೆ

■ 6ನೇ ಪುಟಕ್ಕೆ

ಮಕ್ಕಳಿಗೆ 'ಸಿಂಧೂರ' ಹೆಸರಿಡಲು ಪೈಪೋಟಿ

ಪಟ್ನಾ, ಮೇ.9– ಮೇ 7ರಂದು ಜನಿಸಿದ ಮಕ್ಕಳಿಗೆ 'ಸಿಂಧೂರ', 'ಸಿಂಧೂರಿ', 'ಸಿಂಧೂ' ಎಂದು ಹೆಸರಿಡಲು ದೇಶದ ವಿವಿಧೆಡೆ ಪೋಷಕರು ಪೈಪೋಟಿಗೆ ಬಿದ್ದಿದ್ದಾರೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ ನೆಲೆಗಳ ಮೇಲೆ ಭಾರತದ ಸಶಸ್ತ್ರ ಪಡೆಗಳು ಮೇ 7ರಂದು ನಡೆಸಿದ್ದ ಕ್ಷಿಪಣಿ ದಾಳಿಗೆ 'ಆಪರೇಷನ್ ಸಿಂಧೂರ್' ಎಂದು ಹೆಸರಿಡಲಾಗಿತ್ತು. ಹೀಗಾಗಿ ಮೇ 7ರಂದು ಜನಿಸಿದ ಮಕ್ಕಳಿಗೆ ಇದಕ್ಕೆ ಸಾಮ್ಯವಿರುವ ಹೆಸರನ್ನಿಡಲು ಪೋಷಕರು ಮುಗಿಬಿದ್ದಿದ್ದಾರೆ.

ಬಿಹಾರದ ಮುಜಾಫರ್‌ಪುರ ಜಿಲ್ಲೆಯ ಕಾಂಟಿ ನಿವಾಸಿ ಸುಷ್ಮಿತಾ ದೇವಿ ಅವರು ಮೇ 7ರಂದು ಜನಿಸಿದ ತಮ್ಮ ಮೊಮ್ಮಗನಿಗೆ 'ಸಿಂಧೂರ' ಎಂದು ಹೆಸರಿಟ್ಟಿದ್ದಾರೆ. ಮೊಮ್ಮಗ ಬೆಳೆದು ದೊಡ್ಡವನಾಗುತ್ತಿದ್ದಂತೆ ತನ್ನ ಹೆಸರಿನ ಹಿನ್ನೆಲೆ ತಿಳಿದುಕೊಳ್ಳುತ್ತಾನೆ. ಪಾಕಿಸ್ತಾನದಲ್ಲಿನ ಭಯೋತ್ಪಾದಕರ ನೆಲೆಗಳನ್ನು ಭಾರತ ನಾಶಪಡಿಸಲು 'ಸಿಂಧೂರ್' ಕಾರ್ಯಾಚರಣೆ ನಡೆಸಿದ ದಿನದಂದು ತಾನು ಹುಟ್ಟಿದ್ದು ಎಂಬುದನ್ನು ತಿಳಿದುಕೊಳ್ಳುವ ಮೂಲಕ, ತನ್ನ ಹೆಸರಿನ ಮಹತ್ವವನ್ನು ಅರಿಯುತ್ತಾನೆ. ನನ್ನ ಮೊಮ್ಮಗ ವಿದ್ಯಾಭ್ಯಾಸ ಮುಗಿಸಿದ ಬಳಿಕ ಸಮವಸ್ತ್ರ ಧರಿಸಿ ದೇಶಕ್ಕೆ ಸೇವೆ ಸಲ್ಲಿಸಬೇಕು ಎಂದು ಬಯಸುತ್ತೇನೆ ಎಂದು ಅವರು ಹೇಳಿದ್ದಾರೆ.

ಭಾರತ–ಪಾಕ್ ಯುದ್ಧ ಪರಿಸ್ಥಿತಿ

ರಾಷ್ಟ್ರೀಯ ಸುರಕ್ಷತಾ ದೃಷ್ಟಿಯಿಂದ ರಾಜ್ಯಗಳಿಗೆ ಕೇಂದ್ರದ ಕಟ್ಟುನಿಟ್ಟಿನ ಸೂಚನೆ

● ಸಂವಿಧಾನದ 352ನೇ ವಿಧಿ ಅನ್ವಯ ಮುಖ್ಯ ಕಾರ್ಯದರ್ಶಿಗಳಿಗೆ ಕೇಂದ್ರ ಸಲಹೆ–ಸೂಚನೆ ● ರಾಷ್ಟ್ರೀಯ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಕೆಲ ಮಾರ್ಗಸೂಚಿ ಅನುಸರಿಸಲು ಸುತ್ತೋಲೆ

ಬೆಂಗಳೂರು, ಮೇ 9(ಕೆಎಂಶಿ)– ಭಾರತ–ಪಾಕಿಸ್ತಾನ ನಡುವಿನ ದಾಳಿ–ಪ್ರತಿದಾಳಿಯಿಂದ ಎರಡೂ ರಾಷ್ಟ್ರಗಳ ಗಡಿಭಾಗದಲ್ಲಿ ಉಂಟಾಗಿರುವ ಉದ್ವಿಗ್ನತೆ ಹಿನ್ನೆಲೆಯಲ್ಲಿ ಕರ್ನಾಟಕ ಸೇರಿದಂತೆ ದೇಶಾದ್ಯಂತ ಸುರಕ್ಷತಾ ಕ್ರಮಗಳ ದೃಷ್ಟಿಯಿಂದ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಸಲಹೆ–ಸೂಚನೆ ನೀಡಿದೆ.

ಸಂವಿಧಾನದ 352ನೇ ವಿಧಿಯನ್ವಯ ಕೇಂದ್ರ ಈ ಅಧಿಕಾರ ಚಲಾಯಿಸುವ ಕುರಿತು ಎಲ್ಲಾ ರಾಜ್ಯ ಸರ್ಕಾರಗಳ ಮುಖ್ಯಕಾರ್ಯದರ್ಶಿಗಳಿಗೆ ಸುತ್ತೋಲೆ ಹೊರಡಿಸಿದೆ.

ಸುತ್ತೋಲೆಯಲ್ಲಿ ಸೂಚಿಸಿರುವ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

ಭಾರತದ ಗಡಿ ರಾಜ್ಯಗಳಾದ ಜಮ್ಮು–ಕಾಶ್ಮೀರ, ಪಂಜಾಬ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯೇತರ ಆಡಳಿತವಿದ್ದು, ರಾಜಾಸ್ತಾನ ಹಾಗೂ ಹರಿಯಾಣದಲ್ಲಿ ಬಿಜೆಪಿ ಆಡಳಿತ ಇದೆ.

ಯುದ್ಧದಂತಹ ಉದ್ವಿಗ್ನತೆ ಸಂದರ್ಭದಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ಯಾವುದೇ ತುರ್ತು ತೀರ್ಮಾನಗಳನ್ನು ಕೇಂದ್ರ ಕೈಗೊಳ್ಳಬೇಕಿರುವುದರಿಂದ ತಾತ್ಕಾಲಿಕವಾಗಿ ಸಂವಿಧಾನದ 352ನೇ ವಿಧಿಯನ್ವಯ ರಾಜ್ಯಗಳ ಆಡಳಿತದ ಮೇಲೆ ಹಿಡಿತ ಸಾಧಿಸಲು ಮುಂದಾಗಿದೆ. ಕೇಂದ್ರದ ಈ ಸೂಚನೆಯಿಂದ ರಾಜ್ಯಗಳ ಆಡಳಿತಕ್ಕೆ ಯಾವುದೇ ಅಡ್ಡಿ ಉಂಟಾಗದು, ಆದರೆ, ರಾಷ್ಟ್ರೀಯ ಸುರಕ್ಷತಾ ವಿಷಯದಲ್ಲಿ ಅಂತಿಮ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರ ಕೇಂದ್ರದ್ದಾಗಿರುತ್ತದೆ.

ಬ್ಯಾಂಕ್‌ನಲ್ಲಿ ಭಾರೀ ಮೊತ್ತದ ಹಣ ವಹಿವಾಟಿಗೆ ನಿರ್ಬಂಧ: ಬ್ಯಾಂಕ್‌ನಲ್ಲಿನ ಭಾರೀ ಮೊತ್ತದ ಠೇವಣಿ ಹಾಗೂ ಮೊಬಲಗು ರವಾನೆ ಅಥವಾ ಬಳಕೆ ಕೇಂದ್ರದ ಅನುಮತಿಯಿಲ್ಲದೆ ಸಾಧ್ಯವಿಲ್ಲ. ಉಳಿದಂತೆ ಕೇಂದ್ರ ಗುಪ್ತಚರ ಇಲಾಖೆ ನೀಡಿರುವ ಸೂಚನೆಗಳನ್ನು ರಾಜ್ಯ ಸರ್ಕಾರಗಳು ಚಾಚೂ ತಪ್ಪದೆ ಪಾಲಿಸಲು ನಿರ್ದೇಶಿಸಿದೆ.

ಈ ಕಟ್ಟೆಚ್ಚರದ ಸುತ್ತೋಲೆಯಲ್ಲಿ ರಕ್ಷಣಾ ಸ್ಥಾವರಗಳು ಹಾಗೂ ಪ್ರಮುಖ ಕಟ್ಟಡಗಳ ಸುರಕ್ಷತೆಗೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯಗಳ ಎಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲಾಡಳಿತಗಳಿಗೆ ತಿಳಿಸಲಾಗಿದೆ.

ಇದರೊಂದಿಗೆ ವಿದೇಶಿ ರಾಜತಾಂತ್ರಿಕ ಕಚೇರಿಗಳು, ಜಿಲ್ಲಾಡಳಿತ ಕಟ್ಟಡಗಳು, ವಿಜ್ಞಾನ ಸಂಶೋಧನಾ ಕೇಂದ್ರಗಳು, ವಿಮಾನ ನಿಲ್ದಾಣಗಳು, ಜಲಾಶಯಗಳು, ಉಪಗ್ರಹ ಕೇಂದ್ರಗಳು, ಜಲವಿದ್ಯುತ್ ಹಾಗೂ ಶಾಖೋತ್ಪನ್ನ ಸ್ಥಾವರಗಳ ರಕ್ಷಣೆಗೆ ಪ್ರಾಮುಖ್ಯತೆ ನೀಡುವಂತೆ ಸೂಚಿಸಲಾಗಿದೆ.

ಪ್ರಮುಖ ಉದ್ಯಮ, ಸ್ಥಳಗಳಲ್ಲಿ ಭದ್ರತೆ: ಸಾಫ್ಟ್‌ವೇರ್ ಕಂಪನಿಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕೇಂದ್ರಗಳು, ಪೈಪ್‌ಲೈನ್ ಕೇಂದ್ರಗಳು, ಜನಸಂದಣಿಯ ಶಾಪಿಂಗ್ ಮಾಲ್‌ಗಳು, ಸ್ಟಾರ್ ಹೋಟೆಲ್‌ಗಳು, ವಸತಿ ಕಟ್ಟಡಗಳು, ಭಾರೀ ಕೈಗಾರಿಕೆಗಳು, ದೇವಾಲಯ,



ಮಸೀದಿ, ಚರ್ಚ್‌ಗಳು ಸೇರಿದಂತೆ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ತೀವ್ರ ಸುರಕ್ಷತೆಗೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ತಿಳಿಸಲಾಗಿದೆ.

ಅಲ್ಲದೆ, ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗಿರುವ, ಭಯೋತ್ಪಾದಕ ಕೃತ್ಯಗಳಂತಹ ಪ್ರಕರಣಗಳಲ್ಲಿ ಭಾಗಿಯಾದವರು, ಶಿಕ್ಷೆಗೊಳಗಾದವರು, ಬಾಂಬ್ ತಯಾರಿಕೆ ಮತ್ತು ಬಾಂಬ್ ಸ್ಫೋಟ ಮೂಲಕ ಭಯೋತ್ಪಾದನೆ ಕೃತ್ಯಗಳಲ್ಲಿ ಭಾಗಿಯಾದವರ ಮೇಲೆ ನಿಗಾ ವಹಿಸಬೇಕು.

ಸ್ಫೋಟಕ ವಸ್ತುಗಳು ಹಾಗೂ ಡಿಟೊನೇಟರ್‌ಗಳಂತಹ ಉಪಕರಣಗಳನ್ನು ಸಿದ್ಧಪಡಿಸುವ ಸ್ಥಳಗಳು, ಮೂಲ ಭೂತವಾದ ಕೃತ್ಯಗಳಲ್ಲಿ ಭಾಗಿಯಾದ ಹಾಗೂ ಸಮಾಜದಲ್ಲಿ ಭಯಭೀತಿ ಉಂಟುಮಾಡುವ ದುಷ್ಟಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಆದೇಶದಲ್ಲಿ ತಿಳಿಸಲಾಗಿದೆ.

ದೇಶ ವಿರೋಧಿ ಭಾಷಣ, ಘೋಷಣೆ ಸಲ್ಲದು: ಭಾರತ ವಿರೋಧಿ ಭಾಷಣ ಮಾಡುವ, ದೇಶದ್ರೋಹಿ ಘೋಷಣೆಗಳ ಮೂಲಕ ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುವ, ಸಾಮಾಜಿಕ ಜಾಲತಾಣಗಳಲ್ಲಿ ಭಯೋತ್ಪಾದನಾ ಚಟುವಟಿಕೆ ಸುದ್ದಿಗಳನ್ನು ಹಂಚಿಕೊಳ್ಳುವ ಪ್ರಕರಣಗಳಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮಕ್ಕೆ ಸೂಚಿಸಲಾಗಿದೆ.

ಅಪರಿಚಿತರ ಬಗ್ಗೆ ಎಚ್ಚರ: ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಂಚಿಕೊಳ್ಳುವವರು,

■ 6ನೇ ಪುಟಕ್ಕೆ

ರಾಜ್ಯದಲ್ಲಿ ಸ್ಲೀಪರ್ ಸೆಲ್‌ಗಳ ಮೇಲೆ ನಿಗಾ

ಬೆಂಗಳೂರು, ಮೇ 9– ಆಪರೇಷನ್ ಸಿಂಧೂರ್ ಬೆನ್ನಲ್ಲೇ ದೇಶದ ಗಡಿಯಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣ ಆಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮತ್ತು ಗೃಹ ಇಲಾಖೆ ಮುಂದಾಗಿದೆ.

ಈ ನಿಟ್ಟಿನಲ್ಲಿ ರಾಜ್ಯದಲ್ಲಿರುವ ಭಯೋತ್ಪಾದಕರ ಸ್ಲೀಪರ್ ಸೆಲ್‌ಗಳ ಮೇಲೆ ನಿಗಾ ಇಡಲು ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಗಡಿಯಲ್ಲಿ ಯುದ್ಧದ ಪರಿಸ್ಥಿತಿ ನಿರ್ಮಾಣ ಆಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಭಯೋತ್ಪಾದಕರ ಸ್ಲೀಪರ್ ಸೆಲ್‌ಗಳು ಸಕ್ರಿಯವಾಗುವ ಆತಂಕ ಇದೆ. ಸೂಕ್ಷ್ಮ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಭಯೋತ್ಪಾದಕ ಕೃತ್ಯ ಎಸಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಇಂತಹ ಸ್ಲೀಪರ್ ಸೆಲ್‌ಗಳ ಮೇಲೆ ನಿಗಾ ಇಡುವಂತೆ ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ನಡೆಸಿದ್ದ ಆರೋಪದಲ್ಲಿ ಈ ಹಿಂದೆ ಕೆಲವರನ್ನು ಬಂಧನಕ್ಕೆ ಒಳಪಡಿಸಲಾಗಿತ್ತು. ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಕೆಲವರು ಜೈಲಿನಿಂದ ಬಿಡುಗಡೆ ಆಗಿದ್ದಾರೆ. ಇನ್ನು ಜೈಲಿನಲ್ಲಿ ಇರುವ ದುಷ್ಕರ್ಮಿಗಳು ತಮ್ಮ ನೆಟ್‌ವರ್ಕ್ ಜಾಲವನ್ನು ಇಂತಹ ಸಂದರ್ಭದಲ್ಲಿ ಸಕ್ರಿಯಗೊಳಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ ಪೊಲೀಸ್ ಇಲಾಖೆ ಹಾಗೂ ಗುಪ್ತಚರ ಇಲಾಖೆಗೆ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಿದ್ದಾರೆ.

ಜಿಲ್ಲಾ ಎಸ್‌ಪಿಗಳಿಗೆ ಸೂಚನೆ: ಈಗಾಗಲೇ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಈ ಕುರಿತಾಗಿ ಸೂಚನೆಗಳನ್ನು ನೀಡಿದ್ದಾರೆ. ಅನುಮಾನ ಇರುವ ಸ್ಲೀಪರ್ ಸೆಲ್‌ಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ಅವರುಗಳ ಮೇಲೆ ನಿಗಾ ಇಡುವಂತೆ ಸೂಚನೆ ನೀಡಲಾಗಿದೆ.

■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪತ್ನಿ : ಏನು ಬೇರೆ ಊರಿಗೆ ವರ್ಗ ಮಾಡಿ ಎಂದು ಕೇಳಿದ್ದೀರಾ. ಏಕೆ?

ಪತಿ : ಮತ್ತೇನು ಮಾಡಲಿ? ಈ ಊರಲ್ಲಿ ಯಾರೂ ಸಾಲ ಕೊಡುತ್ತಿಲ್ಲ!!!

ಮೈಸೂರು ಮಿತ್ರ

ಶನಿವಾರ, 10 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಪ್ರಯತ್ನ ಎಂಬುದು ಬೀಜದ ಹಾಗೆ, ಬಿತ್ತುತ್ತಲೇ ಇರಿ, ಚಿಗುರಿದರೆ ಮರವಾಗಲಿ, ಇಲ್ಲವೆಂದರೆ ಮಣ್ಣಲ್ಲಿ ಗೊಬ್ಬರವಾಗಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೇವರು ವರ ಕೊಟ್ಟರೂ ಪೂಜಾರಿ ಕೊಡಲೊಲ್ಲ.

ನಿಮ್ಮ ಪತ್ರಗಳು

■ ಮಾರ್ಕ್ಸ್‌ವೊಂದೇ ಮಾನದಂಡವಲ್ಲ...!

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಕಡಿಮೆ ಅಂಕ ಗಳಿಸಿದವರು ಅಥವಾ ಫೇಲಾದವರು ಯಾರು ಸಹ ಎದೆಗುಂದಬೇಕಿಲ್ಲ ಹಾಗೂ ಧೃತಿಗೆಡಬೇಕಿಲ್ಲ.

ಏಕೆಂದರೆ ಇಂತಹ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕಗಳಿಸುವುದೇ ದೊಡ್ಡ ಸಾಧನೆಯಲ್ಲ...! ನನ್ನ ಪ್ರಕಾರ ಜೀವನದಲ್ಲಿ ಅತ್ಯುತ್ತಮವಾದ ಬದುಕು ಕಟ್ಟಿಕೊಳ್ಳುವುದೇ ನಿಜವಾದ ಸಾಧನೆ.

ಹಾಗಾಗಿ ಪರೀಕ್ಷೆಯಲ್ಲಿ ಫೇಲಾಗಲಿ ಇಲ್ಲವೆ ಕಡಿಮೆ ಅಂಕ ಬರಲಿ ಯಾರು ಸಹ ಧೃತಿಗೆಡಬೇಡಿ. ಜೊತೆಗೆ ಅಪ್ಪಿತಪ್ಪಿಯೂ ಆತ್ಮಹತ್ಯೆ ಮಾಡಿಕೊಳ್ಳುವಂತಹ ಕೆಟ್ಟ ನಿರ್ಧಾರಗಳನ್ನಂತು ಮಾಡಲೇಬೇಡಿ. ಅದರಂತಹ ಕೆಟ್ಟ ನಿರ್ಧಾರ ಮತ್ತೊಂದಿಲ್ಲ. ಏಕೆಂದರೆ ನಮ್ಮ ಜೀವನ ರೂಪಿಸಿಕೊಳ್ಳಲು "ಮಾರ್ಕ್ಸ್ ಒಂದೇ ಮಾನ ದಂಡವಲ್ಲ" ಬರೀ ಮಾರ್ಕ್ಸ್‌ಗಳಷ್ಟೆ ನಮ್ಮ ಬದುಕನ್ನ ನಿರ್ಧರಿಸುತ್ತವೆ ಎಂಬುದಂತೂ ಶುದ್ದ ಸುಳ್ಳು, ಅದೊಂದು ಭ್ರಮೆಯಷ್ಟೆ.....! ಇತಿಹಾಸದ ಪುಟಗಳನ್ನ ತಿರುಗಿಸಿ ನೋಡಿದಾಗ ಮಹನೀಯರು, ಸಾಧಕರು, ಆದರ್ಶನೀಯವಾದ ವ್ಯಕ್ತಿಗಳಲ್ಲಿ ಅನೇಕ ಜನ ಹಲವು ಪರೀಕ್ಷೆಗಳಲ್ಲಿ ಫೇಲಾದವರೆ. ಹಾಗಾಗಿ ಯಾರು ಸಹ ಚಿಂತಿಸಬೇಡಿ. ಜೊತೆಗೆ ಯಾವುದೇ ದುಡುಕಿನ ನಿರ್ಧಾರಗಳನ್ನಂತೂ ತೆಗೆದುಕೊಳ್ಳಬೇಡಿ.

"ಈಸ ಬೇಕು ಇದ್ದು ಜಯಿಸಬೇಕು" ಎನ್ನುವ ಹಾಗೆ ಧೈರ್ಯವಾಗಿ ಬದುಕಿ, ಎಲ್ಲದಕ್ಕೂ ಮುನ್ನುಗಿ ಇರುವ ಅವಕಾಶಗಳನ್ನ ಸದುಪಯೋಗಪಡಿಸಿಕೊಂಡು ನೀವು ಸಹ ಅದ್ಭುತವಾದ ಸಾಧನೆಗಳನ್ನ ಮಾಡುವಂತವರಾಗಿ.

ತಂದೆ-ತಾಯಿ, ಬಂಧು ಬಳಗ, ಗುರು-ಹಿರಿಯರು ಯಾರೇ ಆಗಲಿ ಮಕ್ಕಳ ವ್ಯಕ್ತಿತ್ವವನ್ನು ಅವರು ಪಡೆದ ಮಾರ್ಕ್ಸ್‌ನಿಂದ ಮಾತ್ರ ಅಳೆಯಬೇಡಿ. ಮಾರ್ಕ್ಸ್ ಒಂದೇ ಎಲ್ಲದಕ್ಕೂ ಮಾನದಂಡವಲ್ಲ ಎಂಬ ಸತ್ಯವನ್ನ ಪ್ರತಿಯೊಬ್ಬರು ಅರಿತು ಹೆಚ್ಚು ಅಂಕ ಪಡೆದವರುಗಳಂತೆಯೇ, ಕಡಿಮೆ ಅಂಕ ಪಡೆದವರನ್ನು ಸಹ ಪ್ರೋತ್ಸಾಹಿಸಿ ಸಮಾಜದಲ್ಲಿ ಉತ್ತಮವಾದ ಬದುಕು ಕಟ್ಟಿಕೊಂಡು ಒಳ್ಳೆಯ ಪ್ರಜೆಯಾಗಿ ಆತ್ಮವಿಶ್ವಾಸದಿಂದ ಬದುಕಲು ಮಾರ್ಗದರ್ಶನ ನೀಡಿ.

-ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾಲೂಕು

■ ಗೊಬ್ಬಳಿಮರ ತಂಗುದಾಣದ ದುಸ್ಥಿತಿ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ. ನಗರದ ಗೊಬ್ಬಳಿಮರ ತಂಗುದಾಣದ ಮೇಲ್ಛಾವಣಿಯಿಂದ ಮಳೆಯ ನೀರು ಸುರಿದು ತಂಗುದಾಣದ ಒಳಗೆ ಮತ್ತು ಪ್ರಯಾಣಿಕರು ಕುಳಿತುಕೊಳ್ಳುವ ಆಸನದ ಮೇಲೆ ನೀರು ನಿಲ್ಲುತ್ತಿದೆ. ಇನ್ನೇನು ಮಳೆಗಾಲ ಆರಂಭವಾಗುತ್ತಿದ್ದು, ಈ ತಿಂಗಳ ಅಂತ್ಯದಲ್ಲಿ ಮುಂಗಾರು ಪ್ರಾರಂಭವಾಗುವ ಸಾಧ್ಯತೆಗಳಿವೆ. ಈ ತಂಗುದಾಣದಲ್ಲಿ ಯಾವಾಗಲೂ ಜನರಿರುತ್ತಾರೆ. ಇಲ್ಲಿ ಬೆಳಕಿನ ಸೌಲಭ್ಯವಿರುವುದಿಲ್ಲ ಮತ್ತು ಸ್ವಚ್ಛತೆಯೂ ಇಲ್ಲ. ತಂಗುದಾಣದ ಒಳಗೆ ಮತ್ತು ಅಕ್ಕಪಕ್ಕದಲ್ಲಿ ಕಸದ ರಾಶಿ ರಾರಾಜಿಸುತ್ತಿದೆ. ಆದ ಕಾರಣ ಸಂಬಂಧಪಟ್ಟ ನಗರ ಪಾಲಿಕೆ ಅಧಿಕಾರಿಗಳು ದಯಮಾಡಿ ಇತ್ತ ಗಮನಹರಿಸಿ ಅನಾಹುತಗಳು ಸಂಭವಿಸುವ ಮುನ್ನ ತಂಗುದಾಣದ ದುರಸ್ತಿಗೆ ಮತ್ತು ಸ್ವಚ್ಛತೆಗೆ ಕ್ರಮ ಕೈಗೊಂಡು, ಬೆಳಕಿನ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಈ ಮೂಲಕ ಮನವಿ.

- ಸರೋಜಮ್ಮ, ಮೈಸೂರು.

■ ರೈಲ್ವೆ ವಸತಿ ನಿಲಯದ ಜಾಗದಲ್ಲಿ ಕಸದ ರಾಶಿ



ಮಾನ್ಯರೆ,

ಮೈಸೂರಿನ ಕೆಆರ್‌ಎಸ್ ಮುಖ್ಯ ರಸ್ತೆಯ ರಾಮಕೃಷ್ಣ ಅಧ್ಯಾತ್ಮ ಕೇಂದ್ರದ ಪಾದಚಾರಿ ಮಾರ್ಗದ ಬಳಿ ಟೀಮ್ ಮೈಸೂರು ತಂಡದವರು ಗಿಡಗಳನ್ನು ನೆಟ್ಟು ಪೋಷಣೆ ಮಾಡುತ್ತ ಬಂದಿರುವರು. ಆದರೆ ರೈಲ್ವೆ ವಸತಿ ನಿಲಯದವರ ಜಾಗದಲ್ಲಿ ನಿತ್ಯ ಕಸ ತಂದು ಬಿಸಾಡುವ ಕೆಲಸವಾಗುತ್ತಿದೆ. ನಾವು ಗಿಡಗಳಿಗೆ ನೀರು ಹಾಕಲು ಹೋದಾಗ ನಮ್ಮ ಎದುರೇ ಅಲ್ಲಿರುವ ಕನ್ನಡ ಭಾಷೆ ಬಾರದ ದಿನಗೂಲಿ ನೌಕರರು ಉಳಿದ ಆಹಾರ ಗಳನ್ನು ಗಿಡದ ಬಳಿ ಬಿಸಾಡಿದರು. ಹಲವಾರು ಬಾರಿ ಅವರ ವ್ಯವಸ್ಥಾಪಕರಿಗೆ ಹೇಳುತ್ತಾ ಬಂದರು ಕಸ ಸುರಿಯುವುದು ನಿಂತಿಲ್ಲ. ಹಾಗಾಗಿ ಸಂಬಂಧಪಟ್ಟ ನಗರಪಾಲಿಕೆಯ ಅರೋಗ್ಯ ಅಧಿಕಾರಿಗಳು ಇತ್ತ ಗಮನಹರಿಸಿ ಸ್ವಚ್ಛತೆಯನ್ನು ಕಾಪಾಡುವುದರ ಜೊತೆಗೆ ನಗರ ಸೌಂದರ್ಯ ಹೆಚ್ಚಿಸಲು ಕ್ರಮವಹಿಸಿ. ಹಾಗೂ ಸಾಂಕ್ರಾಮಿಕ ರೋಗಗಳು ಉತ್ಪಾದನೆ ಆಗದಂತೆ ತುರ್ತಾಗಿ ಕ್ರಮ ವಹಿಸಲು ಸ್ಥಳೀಯ ನಾಗರಿಕರ ಪರವಾಗಿ ಕಳಕಳಿಯಿಂದ ವಿನಂತಿಸುತ್ತೇವೆ.

-ಶ್ರೀಕಂಠಮೂರ್ತಿ, ಮೈಸೂರು.

■ ಸ್ಪರ್ಧಾತ್ಮಕ ಪರೀಕ್ಷೆಗಳು ಪಾರದರ್ಶಕವಾಗಿರಲಿ

ಮಾನ್ಯರೆ,

ರಾಜ್ಯ ಸರ್ಕಾರ ವಿವಿಧ ಇಲಾಖೆಯ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಇತ್ತೀಚಿನ ದಿನಗಳಲ್ಲಿ ನಡೆಸಲಾಗುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳು ಪಾರದರ್ಶಕವಾಗಿ ನಡೆಯುತ್ತಿಲ್ಲವೆಂಬ ಅನುಮಾನ ಸಾರ್ವಜನಿಕರಲ್ಲಿದೆ. ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗುವುದು, ಉತ್ತರ ಪತ್ರಿಕೆಗಳನ್ನು ಬದಲಾಯಿಸುವುದು, ಪ್ರಶ್ನೆಗಳ ಅನುವಾದದಲ್ಲಿನ ಪ್ರಮಾದಗಳು, ಪರೀಕ್ಷೆ ನಡೆದ ನಂತರ ರಾತ್ರೋರಾತ್ರಿ ಹಣ ಮತ್ತು ರಾಜಕೀಯ ಪ್ರಭಾವ ಇರುವ ಅಭ್ಯರ್ಥಿಗಳ ಕೈಯ್ಯಲ್ಲಿ ಉತ್ತರ ಬರೆಸುವುದು, ಕಳೆದ 5 ವರ್ಷಗಳ ಹಿಂದೆ ಪಿಎಸ್‌ಐ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಹಗರಣಗಳು, ಇತ್ತೀಚಿನ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಇದು ಸರ್ಕಾರಕ್ಕೆ ತಿಳಿಯದ ವಿಷಯವೇನಲ್ಲ. ಆದರೆ ಇದರಿಂದ ನಿಜವಾಗಿಯೂ ತೊಂದರೆಯಾಗುತ್ತಿರುವುದು ಪ್ರತಿಭಾವಂತ ಮತ್ತು ಬಡ ವಿದ್ಯಾರ್ಥಿಗಳಿಗೆ. ಈ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸರ್ಕಾರ ಯಾವ ಉದ್ದೇಶಕ್ಕಾಗಿ ನಡೆಸುತ್ತಿದೆ ಎಂಬುದೇ ಅನುಮಾನಾಸ್ಪದವಾಗಿದೆ.

ನಿನ್ನೆಯಿಂದ ರಾಜ್ಯದಲ್ಲಿ ನಡೆಯುತ್ತಿರುವ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಎ ಮತ್ತು ಬಿ ವೃಂದದ ಮುಖ್ಯ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದಾಗಿ ಬೆಂಗಳೂರಿನಲ್ಲಿ ಕೆಲವು ಪರೀಕ್ಷಾರ್ಥಿಗಳೇ ಶಂಕೆ ವ್ಯಕ್ತಪಡಿಸಿದ್ದಾರೆ. ಹೀಗಾದರೆ ಸ್ಪರ್ಧಾತ್ಮಕ ಪರೀಕ್ಷೆಗಳು ಕೇವಲ ಕಾಟಾಚಾರಕ್ಕೆ ಎಂಬಂತೆ ಸರ್ಕಾರ ನಡೆಸುತ್ತಿದೆ ಎನ್ನುವಂತಾಗಿದೆ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ನಮ್ಮ ಪುರಾಣ ಪಾತ್ರಗಳು ಪ್ರಚಲಿತ!!

ನಮ್ಮ ದೇಶದ ಪುರಾಣ, ಪುಣ್ಯ ಕಥೆಗಳಲ್ಲಿ ರಾಮಾಯಣ, ಮಹಾಭಾರತ ಮಹಾ ಕಾವ್ಯಗಳು ಜನ ಮಾನಸದಲ್ಲಿ ಬೆರೆತು ಹೋಗಿವೆ. ಭಾಗವತ, ವೇದ-ಉಪನಿಷತ್‌ಗಳೂ ಈ ದೇಶದ ಅಸ್ಮಿತೆಗಳು. ಅದರಲ್ಲೂ ರಾಮಾಯಣ, ಮಹಾಭಾರತಕ್ಕೂ ನಮ್ಮೂರಿಗೂ ಎಂದೆಂದಿಗೂ ಬಿಡಿಸಲಾರದ ನಂಟಿದೆ ಎಂದು ಭಾರತದ ಬಹುಭಾಗದ ಜನರು ಈಗಲೂ ಹೇಳುತ್ತಾರೆ. ಅಲ್ಲಲ್ಲಿ ಈಗಲೂ ಇವುಗಳ ಪ್ರವಚನ ನಡೆಯುತ್ತದೆ. ಅವುಗಳಿಗೆ ಸಂಬಂಧಿಸಿದಂತೆ ನೂರಾರು ಹಾಡುಗಳು, ಲಾವಣಿಗಳು, ಜನಪದ ಗೀತೆಗಳು ಪ್ರಚಲಿತದಲ್ಲಿವೆ. ಯಾವುದೇ ಊರಿಗೆ ಹೋದರೂ ಅಲ್ಲಿ ಒಂದು ರಾಮಮಂದಿರ ಇದ್ದೇ ಇದೆ. ಅನೇಕ ಗ್ರಾಮಗಳಲ್ಲಿ ಸಂಜೆಯಾಗುತ್ತಿದ್ದಂತೆ ಜನರು ರಾಮ ಮಂದಿರಗಳಿಗೆ ತೆರಳಿ ಭಜನೆಗಳನ್ನು ಮಾಡುತ್ತಾರೆ. ತಮಗೂ ರಾಮಾಯಣ, ಮಹಾಭಾರತಕ್ಕೂ ಸಂಬಂಧವಿದೆ ಎಂದು ಜನರು ಬಲವಾಗಿ ನಂಬಿದ್ದಾರೆ. ಇವೆರಡರಲ್ಲಿ ಜೀವನ ಮೌಲ್ಯಗಳಿವೆ ಎಂದು ಜನರು ನಂಬಿಯಾಗಿದೆ. ಅದರಲ್ಲೂ ಮಹಾಭಾರತದಲ್ಲಿ ಇಲ್ಲದಿರುವ ವಿಷಯವೇ ಇಲ್ಲ, ಈಗಿನ ಎಲ್ಲಾ ಘಟನೆಗಳು ಮಹಾಭಾರತದ ಸನ್ನಿವೇಶಕ್ಕೆ ಹೋಲಿಕೆಯಾಗುತ್ತದೆ ಎಂದು ಜನರು ಭಾವಿಸುತ್ತಾರೆ. ಅಂತಹ ಮೋಡಿ ಈ ಮಹಾ ಕಾವ್ಯಗಳಿಗೆ ಇದೆ. ಇತ್ತೀಚೆಗೆ ರಾಮಾಯಣ, ಮಹಾಭಾರತದ ವ್ಯಾಖ್ಯಾನ, ಗಾಯನ ಎಲ್ಲೆಲ್ಲಿಯೂ ನಡೆಯುತ್ತಿದೆ.


ನಮ್ಮಲ್ಲಿ ಅನೇಕರು ಈ ಮಹಾಕಾವ್ಯಗಳನ್ನು ಓದಿಲ್ಲ, ಕೆಲವರು ಅವು ಕಟ್ಟು ಕಥೆಗಳು ಎಂದು ಹೇಳುತ್ತಾ ಆ ಬಗ್ಗೆ ತಾತ್ಸಾರ ಮನೋಭಾವ ತಾಳಿದ್ದಾರೆ. ಆದರೆ, ಆಶ್ಚರ್ಯ ಎಂದರೆ ಅದರಲ್ಲಿ ಬರುವ ಅನೇಕ ಪಾತ್ರಗಳ ವಿಶೇಷತೆಯನ್ನು ಬಹಳಷ್ಟು ಜನ ಈಗಲೂ ನೆನೆಸಿಕೊಳ್ಳುತ್ತಾರೆ. ಇದು ಕೇವಲ ಜನರು ಮಾತ್ರ ಉಚ್ಚರಿಸುತ್ತಾರೆ ಎಂದಲ್ಲ. ಸರ್ಕಾರಗಳೂ ರಾಮಾಯಣ, ಮಹಾಭಾರತದ ನುಡಿಗಟ್ಟುಗಳನ್ನು ಸಂದರ್ಭ-ಸನ್ನಿವೇಶಾನುಸಾರ ಬಳಸುತ್ತಾ ಬಂದಿವೆ. ಇಂತಹ ನೂರಾರು ನುಡಿಗಟ್ಟುಗಳು ಈಗ ಬಳಕೆಯಲ್ಲಿವೆ. ಇದು ಕೇವಲ ಕನ್ನಡದಲ್ಲಿ ಮಾತ್ರವಲ್ಲ, ಎಲ್ಲಾ ದೇಶ ಭಾಷೆಗಳಲ್ಲಿ ಇವು ಹಾಸುಹೊಕ್ಕಾಗಿವೆ. ಅವುಗಳನ್ನು ಅವಲೋಕಿಸಿದಾಗ ಮುದ ನೀಡುತ್ತವೆ. ಪುಳಕಿತಗೊಳಿಸುತ್ತವೆ.

ರಾಮಬಾಣ: ಈ ಪದ ಸರ್ವೇಸಾಮಾನ್ಯವಾಗಿ ಬಳಕೆಯಲ್ಲಿವೆ. ಆ ರಾಮನು ಇಟ್ಟ ಬಾಣದ ಗುರಿಯು ಎಂದೂ ತಪ್ಪಿಲ್ಲ, ಎಂದೆಂದೂ ತಪ್ಪೊಲ್ಲ...' ಹಾಡನ್ನು ನಾವು ಕೇಳಿದ್ದೇವೆ. ರಾಮನು



ಬಾಣವನ್ನು ಬಿಟ್ಟರೆ ಅದು ಎಂದಿಗೂ ಗುರಿ ತಪ್ಪುತ್ತಿರಲಿಲ್ಲ. ಹಿಂದಿನ ಕಾಲದ ಯುದ್ಧಗಳಲ್ಲಿ ಬಳಕೆಯಾಗುತ್ತಿದ್ದ ಕೆಲವು ಅಸ್ತ್ರಗಳಿಗೆ ಪ್ರತ್ಯಾಸ್ತ್ರಗಳಿದ್ದವು. ಉದಾಹರಣೆಗೆ, ಆಗ್ನೇಯಾಸ್ತ್ರಕ್ಕೆ ವರುಣಾಸ್ತ್ರ, ಸರ್ಪಾಸ್ತ್ರಕ್ಕೆ ಗರುಡಾಸ್ತ್ರ ಇತ್ಯಾದಿ. ಆದರೆ ಕೆಲವು ಅಸ್ತ್ರಗಳಿಗೆ ಪ್ರತ್ಯಾಸ್ತ್ರಗಳೇ ಇರಲಿಲ್ಲ. ಅಂತಹುದರಲ್ಲಿ ರಾಮಬಾಣ ಒಂದು. ರಾಮನ ಬಾಣಕ್ಕೆ ಪ್ರತ್ಯಾಸ್ತ್ರವೇ ಇರಲಿಲ್ಲ. ಹಾಗಾಗಿ ಅದು ಗುರಿ ಮುಟ್ಟಿ ಮಾಡಬೇಕಾದ್ದನ್ನು ಮಾಡಿಯೇ ತೀರುತ್ತಿತ್ತು. ಇಂದು ನಮ್ಮ ಸಮಾಜದಲ್ಲಿ ಕೆಲವು ಖಾಯಿಲೆಗಳಿಗೆ ನೀಡುವ ಔಷಧವನ್ನು ಇದು ಆ ಖಾಯಿಲೆಗೆ ರಾಮಬಾಣ ಎಂದೇ ಕರೆಯುತ್ತಾರೆ. ಅಂದರೆ ಸೂಕ್ತ ಮದ್ದು ಎಂಬಲ್ಲಿ ಈ ನುಡಿಗಟ್ಟು ಬಳಕೆಯಾಗುತ್ತದೆ.

ಲಕ್ಷ್ಮಣ ರೇಖೆ: ಯಾವುದೇ ಒಂದು ನಿಬಂಧನೆಯನ್ನು ದಾಟಬಾರದು. ಹಾಗೊಮ್ಮೆ ದಾಟಿದರೆ ಸಂಕಷ್ಟ ಕಟ್ಟಿಟ್ಟ ಬುತ್ತಿ ಎಂಬುದಕ್ಕೆ ಲಕ್ಷ್ಮಣ ರೇಖೆ ಪದ ಬಳಕೆಯಲ್ಲಿದೆ. ರಾಮಾಯಣದಲ್ಲಿ ಮಾರೀಚನು ರಾವಣನ ಸೂಚನೆಯ ಮೇರೆಗೆ ಮಾಯಾಜಿಂಕೆಯ ವೇಷದಲ್ಲಿ ಬಂದಾಗ ರಾಮ ಅದನ್ನು ಸೀತೆಗಾಗಿ ಹಿಡಿದು ತರಲು ಹೋಗುತ್ತಾನೆ. ಕೊನೆಗೆ ರಾಮನ ಧ್ವನಿ ಅನುಕರಿಸುವ ರೀತಿಯಲ್ಲಿ 'ಹಾ ಸೀತಾ, ಹಾ ಲಕ್ಷ್ಮಣ' ಎಂಬ ಕೂಗು ಕೇಳಿದಾಗ ಸೀತೆ, ಲಕ್ಷ್ಮಣನನ್ನು ರಾಮನ ರಕ್ಷಣೆಗೆ ತೆರಳುವಂತೆ ಒತ್ತಾಯ ಮಾಡುತ್ತಾಳೆ. ಅದು ಮಾಯಾಜಾಲ ಎಂದು ಲಕ್ಷ್ಮಣನಿಗೆ ಗೊತ್ತಿದ್ದರೂ




ಅವನು ಸೀತೆಯ ಮಾತಿಗೆ ಕಟ್ಟು ಬಿದ್ದು ಹೋಗಬೇಕಾಗುತ್ತದೆ. ಹಾಗೆ ತಾನು ಹೋದರೆ ಸೀತೆಗೆ ಅಪಾಯ ಬಂದೊದಗಬಾರದು ಎಂಬ ಕಾರಣಕ್ಕೆ ಆ ಗುಡಿಸಲಿನ ಸುತ್ತಾ ವರ್ತುಲಾಕಾರದ ಗೆರೆ ಎಳೆದು, ಸೀತೆ ಅದರಿಂದ ಹೊರ ಬರದಂತೆ ಸೂಚಿಸಿ ತೆರಳುತ್ತಾನೆ. ಆ ಗೆರೆಯ ಒಳಗಿದ್ದರೆ ಸುರಕ್ಷತೆ. ಯಾರೂ ಅದನ್ನು ಭೇದಿಸಿ ಒಳಬರಲಾರರು ಎಂಬ ಕಾರಣಕ್ಕೆ ಲಕ್ಷ್ಮಣ ಗೆರೆ ಎಳೆದಿದ್ದ. ಆದರೆ, ಇದನ್ನು ಅರಿತ ರಾವಣ ಉಪಾಯದಿಂದ ಸೀತೆ ಅದರಿಂದ ಹೊರ ಬರುವಂತೆ ಮಾಡಿ ಆಕೆಯನ್ನು ಅಪಹರಿಸುತ್ತಾನೆ. ಆಕೆ ಆ ಗೆರೆಯ ಒಳಗೇ ಇದ್ದಿದ್ದರೆ ಅಪಹರಣವಾಗುತ್ತಿರಲಿಲ್ಲ. ಅಂತಹ ಮಹಾಶಕ್ತಿ ಆ ಗೆರೆಗಿತ್ತು. ಇಂದು ಸಹ ಒಂದು ಮಿತಿಯನ್ನು ದಾಟಬಾರದು ಎಂಬುದಕ್ಕೆ 'ಲಕ್ಷ್ಮಣ ರೇಖೆ' ಪದದ ಬಳಕೆ ಮಾಡುತ್ತೇವೆ.

ಸುಗ್ರೀವಾಜ್ಞೆ: ಸುಗ್ರೀವನ ಆಜ್ಞೆಯನ್ನು ಯಾರೂ ಮೀರುವಂತಿರಲಿಲ್ಲ. ಹಾಗೆ ಉಲ್ಲಂಘನೆ ಮಾಡಿದರೆ ಅವರನ್ನು ಕಠಿಣವಾಗಿ ಶಿಕ್ಷಿಸಲಾಗುತ್ತಿತ್ತು. ಸೀತೆಯನ್ನು ಹುಡುಕಲು ತನ್ನ ವಾನರ ಸೈನ್ಯವನ್ನು ನಾನಾ



ದಿಕ್ಕುಗಳಿಗೆ ಕಳುಹಿಸುವಾಗ ಎಲ್ಲ ವಾನರರೂ ಆ ಕಾರ್ಯದಲ್ಲಿ ಭಾಗವಹಿಸಬೇಕು ಎಂದು ಸುಗ್ರೀವ ಆದೇಶ ಹೊರಡಿಸಿದ. ಅದರಂತೆ ಎಲ್ಲಾ ವಾನರರೂ ಹಾಜರಿದ್ದು, ಯಾವ ತಂಡ ಯಾವ ದಿಕ್ಕಿಗೆ ಹೋಗಬೇಕು ಎಂದು ನಿರ್ಧರಿಸಿ ಮೂವತ್ತು ದಿನಗಳೊಳಗೆ ವಾಪಸ್ಸು ಬಂದು ವರದಿ ಮಾಡಬೇಕು. ಇಲ್ಲದಿದ್ದರೆ ಅಂತಹವರಿಗೆ ಕಠೋರ ಶಿಕ್ಷೆ ಕಾದಿದೆ ಎಂದು ಸುಗ್ರೀವ ಕಟ್ಟಾಜ್ಞೆ ಹೊರಡಿಸಿದ್ದ. ಹೇಳಿದ. ಅದನ್ನು ಎಲ್ಲ ವಾನರ ತಂಡಗಳು ಪಾಲಿಸಬೇಕಾಗಿತ್ತು. ಇಲ್ಲದಿದ್ದರೆ ಮರಣದಂಡನೆಯಂತಹ ಶಿಕ್ಷೆ ವಿಧಿಸಲಾಗುತ್ತಿತ್ತು. ಅದು ಕಟ್ಟುನಿಟ್ಟಿನ ಆಜ್ಞೆಯಾಗಿತ್ತು. ಅದನ್ನು ಈಗಲೂ ಸುಗ್ರೀವಾಜ್ಞೆ ಎಂದು ಕರೆಯಲಾಗುತ್ತದೆ. ಸುಗ್ರೀವಾಜ್ಞೆ; ಯಾರೂ ಮೀರುವಂತಿಲ್ಲ. ಕಟ್ಟುನಿಟ್ಟಾಗಿ ಪಾಲನೆ ಮಾಡುವುದು. ಅದು ಒಂದು ರೀತಿ ಕರ್ತವ್ಯ ಈ ಪದವನ್ನು ಈಗಲೂ ಬಳಸಲಾಗುತ್ತದೆ. ಸರ್ಕಾರಗಳು ಅನಿವಾರ್ಯ ಆದೇಶಗಳನ್ನು ಹೊರಡಿಸುವುದುಂಟು. ಅದೇ ಸುಗ್ರೀವಾಜ್ಞೆ, ಅದನ್ನು ಎಲ್ಲರೂ ತಪ್ಪದೇ ಪಾಲಿಸಬೇಕು ಎಂಬುದು ಇದರ ಅರ್ಥ.

ಅಳಿಲು ಸೇವೆ: ರಾಮಾಯಣದಲ್ಲಿ ವಾನರರು ಲಂಕೆಗೆ ಸಮುದ್ರ ಸೇತು



ನಿರ್ಮಾಣದಲ್ಲಿ ತೊಡಗಿರುವಾಗ, ಅದನ್ನು ಕಂಡ ಒಂದು ಪುಟ್ಟ ಅಳಿಲು ತಾನೂ ಇದರಲ್ಲಿ ಭಾಗಿಯಾಗಿ, ಏನಾದರೂ ಸಹಾಯ ಮಾಡಬೇಕು ಎಂದು ನಿರ್ಧರಿಸಿ, ನೀರಿನಲ್ಲಿ ಮುಳುಗಿ ಮರಳಲ್ಲಿ ಹೊರಳಾಡಿ, ತನ್ನ ಮೈಗೆ ಅಂಟಿದ ಮರಳನ್ನ ಆ ಸೇತುವೆಯ ಹಾದಿಯಲ್ಲಿ ಮೈಕೊಡವುತ್ತಾ ಸಾಗುತ್ತದೆ. ಅದರಿಂದ ದೊಡ್ಡ ಸಹಾಯವಾಗದಿದ್ದರೂ, ಅದು ತನ್ನದು ಕಾಣಿಕೆ ಇರಲಿ ಎಂದು ತೀರ್ಮಾನಿಸಿ, ಶ್ರೀರಾಮನ ಗಮನ ಸೆಳೆಯಿತು. ರಾಮನು ಅದನ್ನು ಪ್ರೀತಿಯಿಂದ ಸವರಿದಾಗ ಅದರ ಮೇಲೆ ಮೂರು ಗೆರೆಗಳು ಮೂಡಿತು ಎಂದು ಕಥೆ ಹೇಳುತ್ತದೆ. ಇಂದಿಗೂ ದೊಡ್ಡದಾಗಿ ನೆರವು, ಕೊಡುಗೆ ನೀಡಲು ಸಾಧ್ಯವಾಗದಿದ್ದರೂ ಕೊಂಚ ಸಹಾಯ ಮಾಡಿದರೆ ಅದು ನನ್ನಿಂದಾಗುವ ಅಳಿಲು ಸೇವೆ ಎಂದು ಹೇಳುತ್ತೇವೆ.


ನೀಲ ನಕ್ಷೆ: ರಾಮಾಯಣದಲ್ಲಿ ಲಂಕೆಗೆ ಸೇತುವೆ ಕಟ್ಟುವ ಸಮಯದಲ್ಲಿ ವಾನರ ವೀರರಾದ ನಳ-ನೀಲ ಎಂಬುವರು ನಕ್ಷೆ ತಯಾರಿಸುವ ಜವಾಬ್ದಾರಿ ಹೊರುತ್ತಾರೆ. ಅದರಲ್ಲಿ ನೀಲ ಎಂಬ ವಾನರ,



ನಕ್ಷೆ ತಯಾರಿಸಿದ್ದು, ಅದರನುಸಾರ ಸುಭದ್ರ ಹಾಗೂ ದೃಢವಾದ ಸೇತುವೆ ನಿರ್ಮಾಣ ಸಾಧ್ಯವಾಗುತ್ತದೆ. ಅವನನ್ನು ಅಂದಿನ ಶ್ರೇಷ್ಠ ವಾಸ್ತುಶಿಲ್ಪಿ ಎಂದು ಕರೆಯಲಾಗುತ್ತದೆ. ಅವನ ನಕ್ಷೆಯನ್ನು ನೀಲನಕ್ಷೆ ಎಂದು ಕರೆಯಲಾಗುತ್ತದೆ. ಇದು ಇಂಗ್ಲಿಷಿನಲ್ಲಿ Blue Print ಎಂದು ಕರೆಯಲಾಗುತ್ತದೆ. ಇಂದು ಸ್ವಲ್ಪ ಅಪಭ್ರಂಶಗೊಂಡು ನೀಲಿ ನಕ್ಷೆ ಎಂಬುದಾಗಿ ಕರೆಯಲಾಗುತ್ತದೆ.

> ❝ ಯಾವುದೇ ಊರಿಗೆ ಹೋದರೂ ಅಲ್ಲಿ ಒಂದು ರಾಮಮಂದಿರ ಇದ್ದೇ ಇದೆ. ಅನೇಕ ಗ್ರಾಮಗಳಲ್ಲಿ ಸಂಜೆಯಾಗುತ್ತಿದ್ದಂತೆ ಜನರು ರಾಮ ಮಂದಿರಗಳಿಗೆ ತೆರಳಿ ಭಜನೆಗಳನ್ನು ಮಾಡುತ್ತಾರೆ. ತಮಗೂ ರಾಮಾಯಣ, ಮಹಾಭಾರತಕ್ಕೂ ಸಂಬಂಧವಿದೆ ಎಂದು ಜನರು ಬಲವಾಗಿ ನಂಬಿದ್ದಾರೆ. ಇವೆರಡರಲ್ಲಿ ಜೀವನ ಮೌಲ್ಯಗಳಿವೆ ಎಂದು ಜನರು ನಂಬಿಯಾಗಿದೆ. ಅದರಲ್ಲೂ ಮಹಾಭಾರತದಲ್ಲಿ ಇಲ್ಲದಿರುವ ವಿಷಯವೇ ಇಲ್ಲ, ಈಗಿನ ಎಲ್ಲಾ ಘಟನೆಗಳು ಮಹಾಭಾರತದ ಸನ್ನಿವೇಶಕ್ಕೆ ಹೋಲಿಕೆಯಾಗುತ್ತದೆ ಎಂದು ಜನರು ಭಾವಿಸುತ್ತಾರೆ.

ಭೀಷ್ಮ ಪ್ರತಿಜ್ಞೆ : ಮಹಾಭಾರತದಲ್ಲಿ ಗಮನ ಸೆಳೆಯುವ ಪ್ರಮುಖ ಪಾತ್ರ ಭೀಷ್ಮನದ್ದು. ಗಂಗೆ ಮತ್ತು ಶಂತನು ಮಹಾರಾಜನಿಗೆ ಜನಿಸಿದ ಮಗ ದೇವವ್ರತ. ಆತ ಕುರು ವಂಶದಲ್ಲಿಯೇ ಅತ್ಯಂತ ಪರಾಕ್ರಮಿ. ಗಂಗೆ ಯಿಂದ ಬೇರ್ಪಟ್ಟ ಬಳಿಕ




ಶಂತನು ಮಹಾರಾಜ, ಸುಂದರಿ ಸತ್ಯವತಿಯಲ್ಲಿ ಅನುರಕ್ತನಾಗುತ್ತಾನೆ. ಆದರೆ ಆಕೆಯು ಕೆಲವು ನಿಬಂಧನೆ ಗಳನ್ನು ವಿಧಿಸುತ್ತಾಳೆ. ಅವು ತನ್ನ ಮಗ ದೇವವ್ರತನ ಹಿತಕ್ಕೆ ಧಕ್ಕೆ ತರುವಂತಹುದ್ದಾಗಿರುತ್ತದೆ. ಇದನ್ನು ಅರಿತ ಭೀಷ್ಮ ತಾನು ಬ್ರಹಚಾರಿಯಾಗಿಯೇ ಉಳಿಯುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಅದನ್ನು ಕೊನೆಯವರೆಗೂ ಸಾಧಿಸಿ ತೋರಿಸುತ್ತಾನೆ. ಈ ಕಾರಣ ದಿಂದ ನಾವು ಯಾರಾದರೂ ಒಂದು ದೃಢ ನಿಶ್ಚಯಕ್ಕೆ ಬಂದರೆ ಅದನ್ನು 'ಭೀಷ ಪ್ರತಿಜ್ಞೆ' ಎಂದು ಹೇಳುತ್ತೇವೆ.

ದೂರ್ವಾಸ ಕೋಪ: ಲೋಕ ಕಲ್ಯಾಣಾರ್ಥ ಸಾಮಾನ್ಯವಾಗಿ ಋಷಿಮುನಿಗಳು ತಪಸ್ಸು ಮಾಡುವವರೆಂದು ಪ್ರತೀತಿ. ಆದರೆ, ಕೆಲವು ಮುನಿಗಳು ಮಹಾ ಕೋಪಿಷ್ಠರು. ಅಂತಹವರಲ್ಲಿ ನಮಗೆ ಭೃಗು, ವಿಶ್ವಾಮಿತ್ರ, ದೂರ್ವಾಸ ಇತ್ಯಾದಿ ಹೆಸರುಗಳು ಪುರಾಣ-ಪುಣ್ಯ ಕಥೆಗಳಲ್ಲಿ ಕಾಣಬರುತ್ತವೆ. ಅದರಲ್ಲೂ ದೂರ್ವಾಸರ ಕೋಪ ಜಗತ್ಪ್ರಸಿದ್ಧವಾದುದು. ಒಮ್ಮೆ ದೂರ್ವಾಸರು ದುರ್ಯೋಧನನ ಮಾತಿಗೆ ಕಟ್ಟುಬಿದ್ದು ವನವಾಸದಲ್ಲಿದ್ದ ಪಾಂಡವರ ಬಳಿ ಶಿಷ್ಯ ಸಮೇತರಾಗಿ ಊಟಕ್ಕೆ ಬರುತ್ತಾರೆ. ಅಷ್ಟರಲ್ಲಿ ಪಾಂಡವರು ಆ ದಿನದ ಆಹಾರ ಸೇವಿಸಿ, ನಂತರ ಅಕ್ಷಯ ಪಾತ್ರೆಯ ಶುಚಿಗೊಳಿಸಿಡಲಾಗಿರುತ್ತದೆ. ದಿನಕ್ಕೆ ಒಮ್ಮೆ ಮಾತ್ರ ಅಕ್ಷಯ ಪಾತ್ರೆ ಆಹಾರ ನೀಡುತ್ತದೆ. ಇದು ಗೊತ್ತಿದ್ದೇ ಅಂತಹ ಸಮಯದಲ್ಲಿ ದೂರ್ವಾಸರು ಶಿಷ್ಯರೊಡನೆ ಊಟಕ್ಕೆ ಬಂದಿರುತ್ತಾರೆ. ಅವರಿಗೆ ಆಹಾರ ನೀಡದಿದ್ದರೆ ಕೋಪಗೊಂಡು ಶಾಪ ಕೊಡುತ್ತಾರೆ ಎಂದು ದುರ್ಯೋಧನ ಭಾವಿಸಿದ್ದ. ಆದರೆ ಶ್ರೀಕೃಷ್ಣನ



ಉಪಾಯದಿಂದ ಸಮಸ್ಯೆ ಬಗೆಹರಿಯುತ್ತದೆ. ಇಲ್ಲದಿದ್ದರೆ ದೂರ್ವಾಸರ ಶಾಪಕ್ಕೆ ಪಾಂಡವರು ಬಲಿಯಾಗಬೇಕಾಗಿತ್ತು. ಇದನ್ನು ಇಂದಿಗೂ ದೂರ್ವಾಸ ಕೋಪ ಎಂದೇ ಕರೆಯಲಾಗುತ್ತದೆ. ಯಾರಿಗಾದರೂ ತುಂಬಾ ಕೋಪ ಬಂದರೆ ನಿಂದು ದೂರ್ವಾಸ ಕೋಪ ಎಂದು ಕರೆಯಲಾಗುತ್ತದೆ.

ಕುಂಭಕರ್ಣ ನಿದ್ದೆ: ರಾವಣನ ತಮ್ಮ ಕುಂಭಕರ್ಣ ನಿದ್ದೆಗೆ ಹೆಸರುವಾಸಿ. ಅವನು ಒಮ್ಮೆ ಮಲಗಿದರೆ ತಿಂಗಳು-ವರ್ಷಾನುಗಟ್ಟಲೆ ಮಲಗುತ್ತಿದ್ದ. ಅವನನ್ನು ಮಧ್ಯದಲ್ಲಿ ಏಳಿಸುವುದು ಬಹಳ ಕಷ್ಟ.




ಅವನು ಎದ್ದ ಕೂಡಲೇ ಮಣಗಟ್ಟಲೆ ಆಹಾರ ಕೊಡಬೇಕಾಗಿತ್ತು. ಒಮ್ಮೆ ಎದ್ದರೆ ಮತ್ತೆ ತಿಂಗಳುಗಟ್ಟಲೆ ಅವನು ನಿದ್ರೆ ಮಾಡುತ್ತಿರಲಿಲ್ಲ. ಹೀಗಾಗಿ ಇಂದಿಗೂ ಯಾರಾದರೂ ಹೆಚ್ಚು ನಿದ್ರೆ ಮಾಡುತ್ತಿದ್ದರೆ ಅವರನ್ನು ಕುಂಭಕರ್ಣನಿಗೆ ಹೋಲಿಸಲಾಗುತ್ತದೆ.

ಸತ್ಯಹರಿಶ್ಚಂದ್ರ: ಹರಿಶ್ಚಂದ್ರ ಸೂರ್ಯವಂಶದ ರಾಜ. ರಾಮನಿಗಿಂತ ಹಿಂದೆ ಭಾರತವನ್ನು ಆಳಿದವನು. ಅವನು ರಾಮನ ವಂಶದವನೇ. ಅವನು ಸತ್ಯಕ್ಕೆ ಹೆಸರುವಾಸಿ. ಪ್ರಾಣ ಬೇಕಾದರೂ ಬಿಟ್ಟೇನು, ಆದರೆ ಸುಳ್ಳು ಮಾತ್ರ ಹೇಳುವುದಿಲ್ಲ ಎಂಬುದು ಅವನ ನಿಯಮ. ಇಂತಹ ಸತ್ಯ ಪರಿಪಾಲನೆಗಾಗಿಯೇ ತನ್ನ ರಾಜ್ಯ, ಹೆಂಡತಿ, ಮಗ ಎಲ್ಲವನ್ನೂ ಕಳೆದುಕೊಂಡರೂ ಅವನು



ಸತ್ಯದ ಮಾರ್ಗ ಬಿಡಲಿಲ್ಲ. ಹಾಗಾಗಿ ಇಂದು ಯಾರಾದರೂ ಸತ್ಯ ನುಡಿಯುವ ಮುಂದಾದರೆ ಅವರನ್ನು ಹರಿಶ್ಚಂದ್ರನಿಗೆ ಹೋಲಿಕೆ ಮಾಡಲಾಗುತ್ತದೆ. ಇದನ್ನು ಕೆಲವರು ಅಪಹಾಸ್ಯಕ್ಕೂ ಬಳಸಿ, ಇಂದು ಹಾಗೆ ಸತ್ಯ ಹೇಳಿಕೊಂಡು ಬದುಕಲಾಗುವುದಿಲ್ಲ ಎಂದು ಅಪಹಾಸ್ಯ ಮಾಡುವುದುಂಟು.

ನಳಪಾಕ: ನಳಮಹಾರಾಜನ ಕಥೆ ಮಹಾಭಾರತದಲ್ಲಿ ಬರುತ್ತದೆ. ನಳ-ದಮಯಂತಿ, ಪತಿ-ಸತಿಯರು. ದಮಯಂತಿ ಅಸಾಧಾರಣ ಸುಂದರಿ. ಆಕೆಯನ್ನು ಮದುವೆಯಾಗಲು ನಳ ದೇವತೆಗಳ



ಸಹಾಯ ಅಪೇಕ್ಷಿಸುತ್ತಾನೆ. ಅವನು ದೇವತೆಗಳ ಅನುಗ್ರಹ ಸಂಪಾದಿಸಿ ಪಾಕ ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ. ಅವನ ಪಾಕಪರಿಣಿತಿ ವಿಶ್ವವಿಖ್ಯಾತ ವಾದದ್ದು. ಇಂದು ಯಾರಾದರೂ ಒಳ್ಳೆಯ ಅಡುಗೆ ಮಾಡಿದರೆ ನಿಂದು 'ನಳಪಾಕ' ಕಣಯ್ಯ ಎಂದು ಹೇಳಲಾಗುತ್ತದೆ. ಇಂತಹ ನೂರಾರು ನುಡಿಗಟ್ಟುಗಳು ಇಂದು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಕಂಡು ಬರುತ್ತವೆ. ಅವುಗಳ ಅರ್ಥ ಗೊತ್ತಿಲ್ಲದಿದ್ದರೂ ಸಾಂದರ್ಭಿಕವಾಗಿ ನುಡಿಗಟ್ಟನ್ನು ಬಳಸುತ್ತೇವೆ.

ಪಾಲಿಕೆ ಆಯುಕ್ತರಿಂದ ಎನ್‌ಆರ್ ಕ್ಷೇತ್ರದ ಬೀದಿ ದೀಪಗಳ ಪರಿಶೀಲನೆ

ಮೈಸೂರು, ಮೇ 9(ಆರ್‌ಕೆ)- ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಅವರು ಗುರುವಾರ ಮೈಸೂರಿನ ಎನ್.ಆರ್.ಕ್ಷೇತ್ರದ ವಿವಿಧ ಭಾಗಗಳಲ್ಲಿ ಬೀದಿ ದೀಪಗಳ ಪರಿಶೀಲನೆ ನಡೆಸಿದರು.

ಎಫ್‌ಟಿಎಸ್ ಸರ್ಕಲ್‌ನಿಂದ ರಾತ್ರಿ 7 ಗಂಟೆಯಿಂದ ಆರಂಭವಾಗಿ ಫೌಂಟನ್ ಸರ್ಕಲ್ ಮೂಲಕ ರಾಜೇಂದ್ರನಗರ ರಸ್ತೆಯ ಬೀದಿ ದೀಪಗಳನ್ನು ಕೆಪಾಸಿಟಿ ಅಡಿಷನ್‌ನಲ್ಲಿ ಹೊಸದಾಗಿ ಅಳವಡಿಸುವಂತೆ ಎಲೆಕ್ಟ್ರಿಕಲ್ ಇಂಜಿನಿಯರ್‌ಗಳಿಗೆ ಸೂಚಿಸಿದರು.

ನಂತರ ಹಳೇ ಕೆಸರೆ ಕುರಿಮಂಡಿ ಸರ್ಕಲ್‌ನಿಂದ ಪುಷ್ಪಾಶ್ರಮ ರಿಂಗ್ ರಸ್ತೆ, ಸಾತಗಳ್ಳಿ ಬಸ್ ಡಿಪೋವರೆಗೆ ಬೀದಿ ದೀಪ ಅಳವಡಿಸುವುದು, ಸಾತಗಳ್ಳಿ ಬಸ್ ಡಿಪೋದಿಂದ ಉದಯಗಿರಿ ಸರ್ಕಲ್ ವರೆಗೆ ರಿಂಗ್ ರಸ್ತೆಯಲ್ಲಿ ಬೀದಿ ದೀಪ ಅಳವಡಿಸಲು ಟೆಂಡರ್ ಕರೆಯುವಂತೆ



ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಅವರು ಗುರುವಾರ ಎನ್.ಆರ್. ಕ್ಷೇತ್ರದಲ್ಲಿ ಬೀದಿ ದೀಪಗಳ ಪರಿಶೀಲನೆ ಮಾಡಿದರು.

ಸೂಚನೆ ನೀಡಿದ ಆಸಿಫ್ ಅಮ್ಮ, ಉದಯಗಿರಿ ಸೂರ್ಯನಾರಾಯಣ ದೇವಸ್ಥಾನದ ಬಳಿ ಹಾನಿಗೊಂಡಿರುವ ಕೇಬಲ್ ದುರಸ್ತಿಗೊಳಿಸಿ ಬೀದಿ ದೀಪ ಅಳವಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಲ್‌ಇಡಿ ಬಲ್ಬ್ ಅಳವಡಿಸಿರುವ ಇ-ಸ್ಮಾರ್ಟ್ ಎನರ್ಜಿ ಸೆಲ್ಯೂಷನ್ಸ್ ಸಂಸ್ಥೆಗೆ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡುವಂತೆಯೂ ಕಮಿಷ್ನರ್ ಇದೇ ಸಂದರ್ಭ ಸೂಚಿಸಿದರು.

82 ವರ್ಷಗಳ ಹಿಂದೆಯೂ ಮೈಸೂರಲ್ಲಿ ವಾಯು ದಾಳಿ ಮುನ್ನೆಚ್ಚರಿಕೆ ವಹಿಸಲಾಗಿತ್ತು!

ಮೈಸೂರು, ಮೇ 9(ಆರ್‌ಕೆ)-ಭಾರತ-ಪಾಕಿಸ್ತಾನ ನಡುವೆ ಹಾಲಿ ಸಂಘರ್ಷದಿಂದಾಗಿ ನಾಗರಿಕರ ರಕ್ಷಣೆಗೆ ದೇಶದಾದ್ಯಂತ ಮಾಕ್ ಡ್ರಿಲ್ ನಡೆಸಲಾಗುತ್ತಿದೆ. ಆದರೆ, 82 ವರ್ಷಗಳ ಹಿಂದೆಯೂ ಮೈಸೂರಲ್ಲಿ ವಾಯು ದಾಳಿ ಮುನ್ನೆಚ್ಚರಿಕೆ (Air Raid Precautions) ನೀಡಲಾಗಿತ್ತು.

ಏಆರ್‌ಪಿ ನಿಯಂತ್ರಕರಾಗಿದ್ದ ಬಿ.ಎಸ್. ರಾಘವೇಂದ್ರ ರಾವ್ ಅವರು 1943ರ ಸೆಪ್ಟೆಂಬರ್ ಮಾಹೆಯಲ್ಲಿ ನೋಟಿಸ್ ಜಾರಿ ಮಾಡಿ ಮೈಸೂರು ನಗರದಲ್ಲಿ ಸೈರನ್ ಸದ್ದು ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿತ್ತು.

ಪ್ರತೀ ತಿಂಗಳ ಮೊದಲು ಮತ್ತು 3ನೇ ಶನಿವಾರಗಳಂದು ಟೆಸ್ಟ್ ವಾರ್ನಿಂಗ್ ಸಿಗ್ನಲ್ ಅನ್ನು ಮಧ್ಯಾಹ್ನ 3 ಗಂಟೆಗೆ ನೀಡಲಿದ್ದು, ರೈಡರ್ಸ್ ಪಾಸ್ಡ್ ಸಿಗ್ನಲ್ ಸಂಜೆ 3.05 ಗಂಟೆಗೆ ಸದ್ದು ಮಾಡಲಿವೆ. 1943ರ ಸೆಪ್ಟೆಂಬರ್ 4ರಂದು ಮಧ್ಯಾಹ್ನ 3 ಗಂಟೆಗೆ ಮೊದಲ ಸೈರನ್ ಟೆಸ್ಟ್ ಮಾಡಲಾಗುವುದು. ಸಾರ್ವಜನಿಕರು ಈ ಸೈರನ್ ಸದ್ದಿನಿಂದ ಗಾಬರಿಯಾಗುವ ಅಗತ್ಯವಿಲ್ಲ ಎಂದು ನೋಟಿಸ್‌ನಲ್ಲಿ ಜಾಗೃತಿ ಮೂಡಿಸಲಾಗಿತ್ತು.

ಇದೀಗ ಆಪರೇಷನ್ ಸಿಂಧೂರ್ ಹಿನ್ನೆಲೆಯಲ್ಲಿ ನಾಳೆ (ಮೇ 10) ಸಂಜೆ 4 ಗಂಟೆಗೆ ಮೈಸೂರಿನ ಅರಮನೆ ಆವರಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿರುವ ನಾಗರಿಕ ರಕ್ಷಣಾ ಕಾರ್ಯದ ಅಣುಕು ಪ್ರದರ್ಶನ (ಮಾಕ್ ಡ್ರಿಲ್)ದಲ್ಲಿ ಅಗ್ನಿ ಶಾಮಕ ಠಾಣೆ ಸೈರನ್ ಬಳಸಲಾಗುತ್ತಿದೆಯೇ ಹೊರತು, ಏಆರ್‌ಪಿ ಸೈರನ್ ಅನ್ನು ಬಳಸುತ್ತಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ಸ್ಪಷ್ಟಪಡಿಸಿದ್ದಾರೆ.

ಮಾಕ್ ಡ್ರಿಲ್ ವೇಳೆ ಮೈಸೂರು ನಗರದ ವಿವಿಧ ಸ್ಥಳಗಳಲ್ಲಿ ಫೈರ್ ಸೈರನ್‌ನಿಂದ ಸದ್ದು ಮಾಡಲು ಚಿಂತಿಸಲಾಗಿತ್ತು. ಆದರೆ, ಸಾರ್ವಜನಿಕರು ಆತಂಕಗೊಳ್ಳುತ್ತಾರೆಂಬ ಕಾರಣಕ್ಕೆ ಅರಮನೆ ಆವರಣಕ್ಕೆ ಮಾತ್ರ ಸೀಮಿತಗೊಳಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಅಮಾಯಕರ ಟಾರ್ಗೆಟ್ ಮಾಡಿದ ಪಾಕಿಸ್ತಾನ



ಗಡಿಯಲ್ಲಿ 10,000 ಮಂದಿ ಸ್ಥಳಾಂತರ


ಜಮ್ಮು, ಮೇ 9– ಭಾರತೀಯ ರಕ್ಷಣಾ ಪಡೆಗಳ ದಾಳಿಗೆ ತತ್ತರಿಸಿರುವ ಪಾಪಿ ಪಾಕಿಸ್ತಾನ ಗಡಿ ಮೀರಿ ಭಾರತದ ಮೇಲೆ ದಾಳಿ ಮಾಡುತ್ತಿದೆ. ಸೇನೆ ವಿರುದ್ಧ ಸೆಣಸಲಾಗದ ಪಾಕ್ ಶೆಲ್ ದಾಳಿ ನಡೆಸಿ, ಅಮಾಯಕರ ಟಾರ್ಗೆಟ್ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಗಡಿ ಜಿಲ್ಲೆಗಳಾದ ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ, ಹರಿಯಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ತುರ್ತು ಪರಿಸ್ಥಿತಿ ಹೇರಲಾಗಿದೆ. ಜಮ್ಮು ಕಾಶ್ಮೀರದಲ್ಲಿ ಬೆಳಗ್ಗಿನವರೆಗೂ ಬ್ಲಾಕ್‌ಔಟ್ ಘೋಷಿಸಲಾಗಿತ್ತು ಭಾರತ ಮತ್ತು ಪಾಕ್ ನಡುವೆ ಉದ್ವಿಗ್ನತೆ ಹೆಚ್ಚಿದ ಬೆನ್ನಲ್ಲೇ ಗಡಿ ಗ್ರಾಮಗಳಿಂದ ಸುಮಾರು 10,000 ನಿವಾಸಿಗಳನ್ನು ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ. ಈ ಹೊತ್ತಿನಲ್ಲೇ ಪಾಕ್ ಅಮಾಯಕರನ್ನ ಗುರಿಯಾಗಿಸಿ ಶೆಲ್ ದಾಳಿ ನಡೆಸಿದೆ. ಪಾಕ್ ದಾಳಿಯಿಂದ ಪೂಂಚ್ ಜಿಲ್ಲೆ ಮಾತ್ರವಲ್ಲದೆ, ಉರಿ, ಬಾರಾಮುಲ್ಲಾ, ಕರ್ನಾ, ತಂಗ್ಧರ್, ಮೆಂಧರ್ ಸೇರಿದಂತೆ ವಿವಿಧೆಡೆ ನಾಗರಿಕರ ಮನೆ ಮಳಿಗೆಗಳು ಹಾನಿಗೊಳಗಾಗಿವೆ.

ಹೀಗಾಗಿ ಪಾಕಿಸ್ತಾನಕ್ಕೆ ಸೈನ್ಯದ ಜೊತೆ ಹೋರಾಡುವ ಶಕ್ತಿ ಇಲ್ಲ–ಅದಕ್ಕೆ ನಾಗರಿಕರ ಮೇಲೆ ದಾಳಿ ಮಾಡುತ್ತಿದೆ –ಬೆಳಗ್ಗೆ 4–30 ಕ್ಕೂ ಸ್ಫೋಟದ ಸದ್ದು ಕೇಳಿದೆ ಎಂದು ಜಮ್ಮುವಿನ ನಾಗರಿಕರು ಆಕ್ರೋಶ ಹೊರಹಾಕಿದ್ದಾರೆ.

ಜಮ್ಮು ಕಾಶ್ಮೀರದ ಶಾಲಾ ಕಾಲೇಜುಗಳು ಬಂದ್: ಭಾರತ–ಪಾಕಿಸ್ತಾನ ಸಂಘರ್ಷದ ಹಿನ್ನಲೆಯಲ್ಲಿ ಜಮ್ಮು ಕಾಶ್ಮೀರದ ಎಲ್ಲಾ ಶಾಲಾ ಕಾಲೇಜುಗಳು ಇಂದು ಕೂಡ ಬಂದ್ ಆಗಲಿದೆ. ಸುರಕ್ಷೆಗೆ ಹೆಚ್ಚಿನ ಕ್ರಮ ವಹಿಸಲಾಗಿದೆ

ಪಾಕ್ ಮಿಲಿಟರಿ ಕಂಟೋನ್ಮೆಂಟ್‌ಗಳೇ ಶಿಫ್ಟ್: ಭಾರತೀಯ ರಕ್ಷಣಾ ಪಡೆಗಳ ದಿಟ್ಟ ಉತ್ತರಕ್ಕೆ ಕಕ್ಕಾಬಿಕ್ಕಿಯಾಗಿರುವ ಪಾಕಿಸ್ತಾನದ ಸಿಂಧ್, ಪಂಜಾಬ್ ಕಂಟೋನ್ಮೆಂಟ್‌ಗಳಲ್ಲಿ ಭೀತಿ ಹೆಚ್ಚಾಗಿದೆ. ಹೀಗಾಗಿ ಮಿಲಿಟರಿ ಕಂಟೋನ್ಮೆಂಟ್‌ಗಳನ್ನು ಸಾಮೂಹಿಕವಾಗಿ ಸ್ಥಳಾಂತರ ಮಾಡಿಕೊಳ್ಳುತ್ತಿದೆ.

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ ಸ್ಫೋಟಿಸುವುದಾಗಿ ಬೆದರಿಕೆ



ನವದೆಹಲಿ, ಮೇ.9– ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನದ ವಿರುದ್ಧ ನಡೆಸುತ್ತಿರುವ ಆಪರೇಷನ್ ಸಿಂದೂರ್‌ಗೆ ಪ್ರತೀಕಾರವಾಗಿ ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣವನ್ನು ಸ್ಫೋಟಿಸುವುದಾಗಿ ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಅಸೋಸಿಯೇಷನ್ (ಡಿಡಿಸಿಎ)ಗೆ ಬೆದರಿಕೆ ಬಂದಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣಕ್ಕೆ ಶುಕ್ರವಾರ ಬೆಳಿಗ್ಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದು, ಪೊಲೀಸ್ ದೂರು ದಾಖಲಾಗಿದೆ ಎಂದು ಡಿಡಿಸಿಎಯ ಉನ್ನತ ಅಧಿಕಾರಿಯೊಬ್ಬರು ಐಎಎನ್‌ಎಸ್‌ಗೆ ತಿಳಿಸಿದ್ದಾರೆ.

ನಿಮ್ಮ ಕ್ರೀಡಾಂಗಣದಲ್ಲಿ ಬಾಂಬ್ ಸ್ಫೋಟ ನಡೆಯಲಿದೆ. ಭಾರತದಲ್ಲಿ ಪಾಕಿಸ್ತಾನದ ಸ್ಲೀಪರ್ ಸೆಲ್ ಸಕ್ರಿಯವಾಗಿದೆ. ಈ ಸ್ಫೋಟವು ಆಪರೇಷನ್ ಸಿಂದೂರ್‌ಗೆ ನಮ್ಮ ಪ್ರತೀಕಾರವಾಗಲಿದೆ ಎಂದು ಮೇಲ್‌ನಲ್ಲಿ ಹೇಳಲಾಗಿದೆ. ಭೀಕರ ಭಯೋತ್ಪಾದಕ ದಾಳಿಯ ನಂತರ ಭಾರತೀಯ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ವೇಗಿ ಮೊಹಮ್ಮದ್ ಶಮಿ ಅವರಿಗೆ ಇಮೇಲ್ ಮೂಲಕ ಜೀವ ಬೆದರಿಕೆ ಬಂದಿತ್ತು

ಭಾರತ-ಪಾಕ್ ಸಂಘರ್ಷದ ನಡುವೆ ಇಬ್ಬರು ಶಂಕಿತ ಜೆಎಂಬಿ ಉಗ್ರರ ಬಂಧನ

ಕೊಲ್ಕತ್ತ, ಮೇ.9– ನಿಷೇಧಿತ ಜಮಾತುಲ್ಲಾ ಮುಜಾ ಹಿದ್ದೀನ್ ಬಾಂಗ್ಲಾದೇಶ ಸಂಘಟನೆಯ ಇಬ್ಬರು ಶಂಕಿತ ಉಗ್ರರನ್ನು ಬೀರ್ ಭೂಮ್ ಜಿಲ್ಲೆಯಲ್ಲಿ ಪಶ್ಚಿಮ ಬಂಗಾಳ ವಿಶೇಷ ಕಾರ್ಯ ಪಡೆ ಪೊಲೀಸರು ಬಂಧಿಸಿರುವುದಾಗಿ ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಬಂಧಿತರನ್ನು ಅಜ್ಮೋಲ್ ಹೊಸೈನ್ ಮತ್ತು ಸಾಹೇಬ್ ಅಲಿ ಖಾನ್ ಎಂದು ಗುರುತಿಸಲಾಗಿದೆ. ಅವರನ್ನು ಮೇ.8 ಮತ್ತು 9ರ ಮಧ್ಯರಾತ್ರಿ ನಲ್ಹಾಟಿ ಮತ್ತು ಮುರಾರೈ ಪ್ರದೇಶಗಳಿಂದ ಬಂಧಿಸಲಾಯಿತು ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ. ಬಂಧಿತರು ಭಯೋತ್ಪಾದಕ ಸಂಘಟನೆ ಸೇರಲು ಮುಸ್ಲಿಂ ಯುವಕರನ್ನು ನೇಮಿಸಿಕೊಳ್ಳುವಲ್ಲಿ ಮತ್ತು ಪ್ರೇರೇಪಿಸುವಲ್ಲಿ ತೊಡಗಿದ್ದರು ಮತ್ತು ಅವರನ್ನು ಭಾರತದ ವಿರುದ್ಧ ಯುದ್ಧ ಮಾಡುವ ಉದ್ದೇಶದೊಂದಿಗೆ ಮೂಲಭೂತೀಕರಣ ಮಾಡಲಾಗುತಿತ್ತು ಎಂದು ಅವರು ತಿಳಿಸಿದ್ದಾರೆ.

ಈ ಹಿಂದೆ ಜಿಹಾದಿ ಚಟುವಟಿಕೆ ಗಳನ್ನು ನಡೆಸಲು ಬಾಂಗ್ಲಾದೇಶ ದಾಟಲು ಯತ್ನಿಸಿದ್ದ ಹೊಸೈನ್ ಉಪಖಂಡದ ಇತರ ಭಾಗಗಳಲ್ಲಿ ಸಂಪರ್ಕ ಹೊಂದಿದ್ದಾನೆ. ಇವರಿಬ್ಬರು ವಿಧ್ವಂಸಕ ಚಟುವಟಿಕೆಗಳಿಗಾಗಿ ಬಂದೂಕುಗಳು ಮತ್ತು ಸ್ಫೋಟಕಗಳನ್ನು ಸಂಗ್ರಹಿಸಲು ಪ್ರಯತ್ನಿಸಿ ದ್ದಾರೆಯೇ ಎಂಬುದರ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಬಂಧಿತರನ್ನು ರಾಮ್ ಪುರಹಟ್‌ನ ಸಹಾಯಕ ಮುಖ್ಯ ನ್ಯಾಯಿಕ ಮ್ಯಾಜಿ ಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ.

ಉನ್ನತ ಮಿಲಿಟರಿ ಅಧಿಕಾರಿಗಳ ಜೊತೆ ಅಮಿತ್ ಶಾ ಸಭೆ



ನವದೆಹಲಿ, ಮೇ.9– ಭಾರತ ಮತ್ತು ಪಾಕಿಸ್ತಾನ ನಡುವಿನ ಮಿಲಿಟರಿ ಸಂಘರ್ಷದ ಹಿನ್ನೆಲೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರು ಇಂದು ಭಾರತದ ಪಾಕಿಸ್ತಾನ ಗಡಿ ಮತ್ತು ದೇಶದ ವಿಮಾನ ನಿಲ್ದಾಣಗಳಲ್ಲಿನ ಪ್ರಸ್ತುತ ಪರಿಸ್ಥಿತಿಯನ್ನು ಪರಿಶೀಲಿಸಿದರು. ಈ ಸಭೆಗೂ ಕೆಲವು ಗಂಟೆಗಳ ಮೊದಲು, ಗಡಿ ಭದ್ರತಾ ಪಡೆ ಜಮ್ಮುವಿನ ಭಾರತ–ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿಯಲ್ಲಿ ನುಸುಳಲು ಯತ್ನಿಸುತ್ತಿದ್ದ ಏಳು ಉಗ್ರರನ್ನು ಕೊಂದು, ಪಾಕಿಸ್ತಾನ ರೇಂಜರ್‌ಗಳ ಪೋಸ್ಟ್ ಅನ್ನು ಸಹ ನಾಶಪಡಿಸಿದೆ ಎಂದು ಹೇಳಿತ್ತು.

ಭಾರತ–ಪಾಕಿಸ್ತಾನ ಗಡಿಯಲ್ಲಿನ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸುವುದರ ಜೊತೆಗೆ, ದೇಶಾದ್ಯಂತ ವಿಮಾನ ನಿಲ್ದಾಣಗಳಲ್ಲಿ ಭದ್ರತೆಯನ್ನು ಹೆಚ್ಚಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆಯೂ ಶಾ ಮಾಹಿತಿ ಪಡೆದರು. ಗಡಿ ಭದ್ರತಾ ಪಡೆ ಭಾರತ–ಪಾಕಿಸ್ತಾನ ಗಡಿಯನ್ನು ಕಾಯುತ್ತದೆ. ಕೇಂದ್ರ ಕೈಗಾರಿಕಾ ಭದ್ರತಾ ಪಡೆ ದೇಶದ ವಿಮಾನ ನಿಲ್ದಾಣಗಳು, ಮೆಟ್ರೋ ಜಾಲಗಳು ಮತ್ತು ಇತರ ಪ್ರಮುಖ ಸ್ಥಾಪನೆಗಳ ಭದ್ರತೆಯ ಜವಾಬ್ದಾರಿಯನ್ನು ಹೊಂದಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್, ಗುಪ್ತಚರ ಬ್ಯೂರೋ ನಿರ್ದೇಶಕ ತಪನ್ ದೇಕಾ ಮತ್ತು ಬಿಎಸ್‌ಎಫ್, ಸಿಐಎಸ್‌ಎಫ್ ಮತ್ತು ನಾಗರಿಕ ವಿಮಾನ ಯಾನ ಭದ್ರತಾ ಬ್ಯೂರೋದ ಮಹಾ ನಿರ್ದೇಶಕರು ಶಾ ಅವರೊಂದಿಗೆ ನಡೆದ ಸಭೆಯಲ್ಲಿ ಭಾಗವಹಿಸಿದ್ದರು. ಬುಧವಾರ ಭಾರತವು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಹಲವಾರು ಸ್ಥಳಗಳಲ್ಲಿ ದಾಳಿ ನಡೆಸಿತು. ಗುರುವಾರ ಪಾಕಿಸ್ತಾನವು ಭಾರತೀಯ ಸೇನಾ ನೆಲೆಗಳ ಮೇಲೆ ದಾಳಿ ಮಾಡಲು ಯತ್ನಿಸಿತ್ತು ಆದರೆ ಭಾರತೀಯ ಪಡೆಗಳು ಅದನ್ನು ವಿಫಲಗೊಳಿಸಿದ್ದವು. ಈ ಘಟನೆಯಿಂದಾಗಿ ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ

ಬಿಎಸ್‌ಎಫ್‌ನಿಂದ ಸಾಂಬಾದಲ್ಲಿ 7 ಮಂದಿ ಜೈಶ್ ಉಗ್ರರ ಹತ್ಯೆ



ನವದೆಹಲಿ, ಮೇ 9– ಅಕ್ರಮವಾಗಿ ಭಾರತಕ್ಕೆ ನುಸುಳುತ್ತಿದ್ದ ಜೈಶ್–ಎ–ಮೊಹಮ್ಮದ್ ಸಂಘಟನೆಯ 7 ಉಗ್ರರನ್ನು ಜಮ್ಮು ಮತ್ತು ಕಾಶ್ಮೀರದ ಸಾಂಭಾದಲ್ಲಿ ಭಾರತದ ಗಡಿ ಭದ್ರತಾ ಪಡೆ ಹೊಡೆದುರುಳಿಸಿದೆ.


ಹಲವು ಗಂಟೆಗಳ ಕಾಲ ನಡೆದ ದಾಳಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತಾರಾಷ್ಟ್ರೀಯ ಗಡಿಯಲ್ಲಿ ಪ್ರಮುಖ ಒಳನುಸುಳುವಿಕೆ ಪ್ರಯತ್ನವನ್ನು ಬಿಎಸ್‌ಎಫ್ ವಿಫಲಗೊಳಿಸಿದೆ.

ಅಂತಾರಾಷ್ಟ್ರೀಯ ಗಡಿಯನ್ನು ಅಕ್ರಮವಾಗಿ ಪ್ರವೇಶಿಸಲು ಯತ್ನಿಸುತ್ತಿದ್ದಾಗ ಬಿಎಸ್‌ಎಫ್ ಯೋಧರು ಗುಂಡಿಕ್ಕಿ ಕೊಂದಿದ್ದಾರೆ ಈ ಮಾಹಿತಿಯನ್ನು ಬಿಎಸ್‌ಎಫ್ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ.

ಜಮ್ಮು, ರಾಜಸ್ಥಾನ ಮತ್ತು ಪಂಜಾಬ್‌ನ ಅಮೃತಸರ ಸೇರಿ ಭಾರತದ 15 ನಗರಗಳನ್ನು ಗುರಿಯಾಗಿಸಿ ಪಾಕಿಸ್ತಾನ ಗುರುವಾರ ರಾತ್ರಿ ಮಿಸೈಲ್, ಡ್ರೋನ್ ದಾಳಿ ನಡೆಸಿತ್ತು. ಭಾರತೀಯ ಸೇನೆ ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಿದೆ. ಪಾಕ್‌ನ ಎಲ್ಲಾ ಮಿಸೈಲ್‌ಗಳನ್ನು ಸೇನೆಯು ಹೊಡೆದುರುಳಿಸಿದೆ.

ನಮ್ಮ ಸೊಸೆಯಿಂದ ಊರಿಗೆ, ರಾಜ್ಯಕ್ಕೆ ಗೌರವ: ಸೋಫಿಯಾ ಬಗ್ಗೆ ಮಾವ ಹೆಮ್ಮೆಯ ಮಾತು

ಬೆಳಗಾವಿ, ಮೇ 9– 'ಆಪರೇಷನ್ ಸಿಂದೂರ್' ಕುರಿತು ಪ್ರಪಂಚಕ್ಕೆ ಎಳೆಎಳೆಯಾಗಿ ಮಾಹಿತಿ ಕೊಟ್ಟಿರುವ ನಮ್ಮ ಸೊಸೆ ಸೋಫಿಯಾ ಖುರೇಷಿ ಧೈರ್ಯ ನೋಡಿ ನಮಗೆ ಹೆಮ್ಮೆಯಾಯಿತು. ನಮ್ಮ ಊರು, ಕರ್ನಾಟಕದ ಬಗ್ಗೆ ಗೌರವ ಬಂತು.



ಗೌಸ್ ಸಾಬ್

ನಮ್ಮ ಮಕ್ಕಳು ಇಂದು ಹೆಮ್ಮೆ ಪಡುವಂತಹ ಕೆಲಸ ಮಾಡಿದ್ದಾರೆ ಎಂದು ಸೋಫಿಯಾ ಅವರ ಮಾವ ಗೌಸ್ ಬಾಗೇವಾಡಿ ಹೆಮ್ಮೆಯಿಂದ ಹೇಳಿದರು.

ನನ್ನ ಮಗ ಮತ್ತು ಸೊಸೆ ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಅವರಿಬ್ಬರಿಗೂ ಪರಿಚಯ ಆಗಿ ಇಬ್ಬರು ಪ್ರೀತಿಸಿ ಬಳಿಕ ಮನೆಯವರ ಒಪ್ಪಿಗೆ ಪಡೆದು 2015ರಲ್ಲಿ ಗುಜರಾತ್ ರಾಜ್ಯದ ವಡೋದರಾದಲ್ಲಿ ವಿವಾಹವಾದರು. 'ಆಪರೇಷನ್ ಸಿಂದೂರ್' ಕುರಿತು ನಾನು ಸೊಸೆ ಜೊತೆಗೆ ಮಾತನಾಡಿಲ್ಲ. ಮಗನ ಜೊತೆಗೆ ಮಾತನಾಡಿದ್ದೇನೆ. ಆತನೇ ನಮಗೆ ಎಲ್ಲ ಮಾಹಿತಿ ಹೇಳಿದ. ನಮ್ಮ ಮನೆ ಮಂದಿಗೆ ಯಾರಿಗೂ ನಿದ್ದೆ ಹತ್ತಿಲ್ಲ. ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಭಯೋತ್ಪಾದಕರಂತಹ ಮೂರ್ಖರು ಯಾರೂ ಇಲ್ಲ. ಧರ್ಮ ನೋಡಿ ಹತ್ಯೆ ಮಾಡುವ



ಕೆಲಸ ಅವರು ಮಾಡಿದರು. ನನ್ನ ಮಗ ಮರಡಿಮಠ ಗ್ರಾಮದಲ್ಲಿ ಕನ್ನಡ ಮಾಧ್ಯಮದಲ್ಲಿ ಕಷ್ಟಪಟ್ಟು ಓದಿ ಕರ್ನಲ್ ಆಗಿದ್ದಾರೆ. ದೇಶಕ್ಕಾಗಿ ಸೇವೆ ಸಲ್ಲಿಸುತ್ತಿರುವ ನಮ್ಮ ಮಕ್ಕಳ ಬಗ್ಗೆ ನಮಗೆ ಹೆಮ್ಮೆಯಿದೆ ಎಂದರು.

ಪಾಕಿಸ್ತಾನದ ಮೇಲೆ ದಾಳಿ ನಡೆಸಿದ ಆಪರೇಷನ್ ಸಿಂದೂರ್ ಬಗ್ಗೆ ನಮ್ಮ ಸೊಸೆ ಕರ್ನಲ್ ಸೋಫಿಯಾ ಖುರೇಶಿಗೆ ಜೋಳದ ರೊಟ್ಟಿ ಹಾಗೂ ನಾಟಿ ಕೋಳಿ ತುಂಬಾ ಇಷ್ಟ, ಅವರ ಧೀರತನದ ಬಗ್ಗೆ ನಮಗೆ ಹೆಮ್ಮೆ ಇದೆ. ಕೊಣ್ಣೂರ ಗ್ರಾಮಕ್ಕೆ ಸೊಸೆ ಮತ್ತು ಮಗ ಬರುತ್ತಾರೆ. ಇಲ್ಲಿ ಬಂದಾಗ ಅರಾಮಾಗಿ ಇರುತ್ತಾರೆ. ನನ್ನ ಸೊಸೆಗೆ ಜವಾರಿ ರೊಟ್ಟಿ, ಕೋಳಿ ಬಹಳ ಇಷ್ಟ ನಿಮ್ಮ ಊರು ಚೆನ್ನಾಗಿದೆ ಅಂತಾ ಹೇಳುತ್ತಿರುತ್ತಾರೆ. ನಮ್ಮ ಆರೋಗ್ಯದ ಬಗ್ಗೆಯೂ ಸೊಸೆ ಕಾಳಜಿ ವಹಿಸುತ್ತಾರೆ. ರಂಜಾನ್ ಹಬ್ಬಕ್ಕೆ ಬರಬೇಕಿತ್ತು, ಬರಲಿಲ್ಲ. ಬಕ್ರೀದ್ ಹಬ್ಬಕ್ಕೆ ಬರುತ್ತಾರೆ ಎಂದರು.

ಆಪರೇಷನ್ ಸಿಂಧೂರ್ ಬಗ್ಗೆ ತಿಳಿಸಿದ್ದು ಬೆಳಗಾವಿ ಸೊಸೆ: ಜಮ್ಮು–ಕಾಶ್ಮೀರದ ಪಹಲ್ಗಾಮ್‌ದಲ್ಲಿ 26 ಭಾರತೀಯರ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂದೂರ್ ಕಾರ್ಯಾಚರಣೆ ಕುರಿತು ಜಗತ್ತಿಗೆ ಎಳೆ ಎಳೆಯಾಗಿ ಬಿಚ್ಚಿಟ್ಟ ಕರ್ನಲ್ ಸೋಫಿಯಾ ಖುರೇಷಿ ಅವರು ಬೆಳಗಾವಿ ಸೊಸೆ ಎನ್ನುವುದು ಹೆಮ್ಮೆಯಾಗಿದೆ



ಪಾಕಿಸ್ತಾನಕ್ಕೆ ಮರ್ಮಾಘಾತ ಸ್ವತಂತ್ರ ಘೋಷಿಸಿಕೊಂಡ ಬಲೂಚ್





ಮಾನ್ಯತೆಗಾಗಿ ಯುಕೆಗೆ ಪತ್ರ

ಇಸ್ಲಾಮಾಬಾದ್, ಮೇ 9–ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಬಲೂಚ್ ಬರಹಗಾರ ಮೀರ್ ಯಾರ್ ಬಲೂಚ್ ಅವರು ಪಾಕಿಸ್ತಾನದಿಂದ ಬಲೂಚಿಸ್ತಾನದ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ್ದಾರೆ. ನವದೆಹಲಿಯಲ್ಲಿ ಬಲೂಚ್ ರಾಯಭಾರ ಕಚೇರಿಯನ್ನು ತೆರೆಯಲು ಅವಕಾಶ ನೀಡಬೇಕೆಂದು ಅವರು ಭಾರತ ಸರ್ಕಾರವನ್ನು ಕೋರಿದ್ದಾರೆ. ಬಲೂಚ್ ಜನರ ಪರವಾಗಿ ವಕಾಲತ್ತು ವಹಿಸುವವರಿಗೆ ಮಿರ್ ಯಾರ್ ಬಲೂಚ್ ಆಹ್ವಾನ ನೀಡಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಹಲವಾರು ಪೋಸ್ಟ್‌ಗಳಲ್ಲಿ ಈ ಘೋಷಣೆ ಮಾಡಿದ್ದಾರೆ. ಬಲೂಚಿಸ್ತಾನಕ್ಕೆ ಶಾಂತಿ ಪಾಲನಾ ಪಡೆಗಳನ್ನು ಕಳುಹಿಸುವಂತೆ ಅವರು ವಿಶ್ವಸಂಸ್ಥೆಯನ್ನು ವಿನಂತಿಸಿದ್ದು ಪಾಕಿಸ್ತಾನಿ ಸೈನ್ಯವು ಆ ಪ್ರದೇಶವನ್ನು ತೊರೆಯಬೇಕೆಂದು ಒತ್ತಾಯಿಸಿದರು.

100ಕ್ಕೂ ಹೆಚ್ಚು ಅನಿಲ ಬಾವಿಗಳಿರುವ ಡೇರಾ ಬುಗ್ತಿಯಲ್ಲಿರುವ ಪಾಕಿಸ್ತಾನದ ಅನಿಲ ನಿಕ್ಷೇಪಗಳ ಮೇಲೆ ಬಲೂಚ್ ಸ್ವಾತಂತ್ರ್ಯ ಹೋರಾಟಗಾರರು ದಾಳಿ ಮಾಡಿದ್ದರು ಎಂದು ಮಿರ್ ಯಾರ್ ಬಲೂಚ್ ಹೇಳಿಕೊಂಡಿದ್ದಾರೆ. ಉಗ್ರ ಘೋಷಿತ ಪಾಕಿಸ್ತಾನದ ಪತನ ಹತ್ತಿರವಾಗುತ್ತಿದ್ದಂತೆ ಘೋಷಣೆ ಹೊರಡುವ ಸಾಧ್ಯತೆಯಿದೆ. ನಾವು ನಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ್ದೇವೆ ಮತ್ತು ದೆಹಲಿಯಲ್ಲಿ ಬಲೂಚಿಸ್ತಾನದ ಅಧಿಕೃತ ಕಚೇರಿ ಮತ್ತು ರಾಯಭಾರ ಕಚೇರಿಯನ್ನು ತೆರೆಯಲು ಅನುಮತಿಸುವಂತೆ ಭಾರತವನ್ನು ವಿನಂತಿಸುತ್ತೇವೆ ಎಂದು ಅವರು ತಮ್ಮ ಒಂದು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಅಂತರರಾಷ್ಟ್ರೀಯ ಬೆಂಬಲವನ್ನು ಕೋರಿ ಅವರು, ಬಲೂಚಿಸ್ತಾನ್ ಪ್ರಜಾಸತ್ತಾತ್ಮಕ ಗಣರಾಜ್ಯದ ಸ್ವಾತಂತ್ರ್ಯವನ್ನು ಗುರುತಿಸಲು ಮತ್ತು ಮಾನ್ಯತೆಯನ್ನು ಬೆಂಬಲಿಸಲು ಎಲ್ಲಾ ಯುಎನ್ ಸದಸ್ಯ ರಾಷ್ಟ್ರಗಳ ಸಭೆಯನ್ನು ಕರೆಯಲು ನಾವು ವಿಶ್ವಸಂಸ್ಥೆಯನ್ನು ಒತ್ತಾಯಿಸುತ್ತೇವೆ ಎಂದು ಹೇಳಿದ್ದಾರೆ. ಕರೆನ್ಸಿ ಮತ್ತು ಪಾಸ್‌ಪೋರ್ಟ್ ಮುದ್ರಣಕ್ಕಾಗಿ ಕೋಟ್ಯಾಂತರ ಡಾಲರ್ ಹಣವನ್ನು ಬಿಡುಗಡೆ ಮಾಡಬೇಕು. ಬಲೂಚಿಸ್ತಾನಕ್ಕೆ ಶಾಂತಿಪಾಲಕರನ್ನು ತಕ್ಷಣವೇ ಕಳುಹಿಸುವಂತೆ ಮೀರ್ ಯಾರ್ ಬಲೂಚ್ ವಿಶ್ವಸಂಸ್ಥೆಯನ್ನು ವಿನಂತಿಸಿದ್ದಾರೆ.

ವಿಶ್ವಸಂಸ್ಥೆಯು ತನ್ನ ಶಾಂತಿ ನಿಯೋಗವನ್ನು ತಕ್ಷಣವೇ ಬಲೂಚಿಸ್ತಾನಕ್ಕೆ ಕಳುಹಿಸಬೇಕೆಂದು ಮತ್ತು ಪಾಕಿಸ್ತಾನದ ಆಕ್ರಮಣಕಾರಿ ಪಡೆಗಳು ಬಲೂಚಿಸ್ತಾನದ ಪ್ರದೇಶಗಳು, ವಾಯುಪ್ರದೇಶ ಮತ್ತು ಸಮುದ್ರಗಳನ್ನು ಖಾಲಿ ಮಾಡುವಂತೆ ನಾವು ಒತ್ತಾಯಿಸುತ್ತೇವೆ ಎಂದು ಅವರು ಹೇಳಿದರು.

ಸ್ವದೇಶಕ್ಕೆ ಮರಳುವಂತೆ ಪಾಕಿಸ್ತಾನಿ ಪ್ರಜೆಗಳಿಗೆ ಕೇಂದ್ರ ಸರ್ಕಾರ ಕಟ್ಟಾಜ್ಞೆ

ಭಾರತದಲ್ಲೇ ಮೂವರು ಮಕ್ಕಳೊಂದಿಗೆ ಉಳಿಯಲು ಮೈಸೂರು ಮೂಲದ ಮಹಿಳೆ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ತಿರಸ್ಕೃತ

ಮೈಸೂರು, ಮೇ.9(ಬಿಎಲ್ ಯು) ಪಾಕಿಸ್ತಾನದ ವ್ಯಕ್ತಿಯನ್ನು ಮದುವೆಯಾಗಿರುವ ಮೈಸೂರು ಮೂಲದ ಮಹಿಳೆ ತನ್ನ ಮೂವರು ಮಕ್ಕಳೊಂದಿಗೆ ಪಾಕಿಸ್ತಾನಕ್ಕೆ ವಾಪಸಾಗಲು ಬಲವಂತದ ಕ್ರಮ ಕೈಗೊಳ್ಳದೆ, ಭಾರತದಲ್ಲೇ ವಾಸ್ತವ್ಯ ಮುಂದುವರೆಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ. ಉಮಾ ನೇತೃತ್ವದ ರಜಾ ಕಾಲದ ನ್ಯಾಯಪೀಠ ಅರ್ಜಿ ವಜಾಗೊಳಿಸಿ ಕಾರಣವನ್ನು ಸ್ಪಷ್ಟಪಡಿಸಿದೆ

ಮೈಸೂರಿನ ರಾಜೀವ್ ನಗರದ ರಂಷಾ ಜಹಾನ್, ಪಾಕಿಸ್ತಾನದ ಬಲೂಚಿಸ್ತಾನ ಮೂಲದ ಮೊಹಮ್ಮದ್ ಫಾರೂಕ್ ಎಂಬಾತನನ್ನು ಕಳೆದ 10 ವರ್ಷದ ಹಿಂದೆ ಮದುವೆಯಾಗಿದ್ದರು. ರಂಷಾ ದಂಪತಿಗೆ ಕುಮಾರಿ ಬಿಬಿ ಯಾಮಿನಾ (8), ಮೊಹಮ್ಮದ್ ಮುದಾಸೀರ್ (4) ಹಾಗೂ ಮೊಹಮ್ಮದ್ ಯೂಸುಫ್ (3) ಮಕ್ಕಳಿದ್ದಾರೆ. ಮೂವರು ಮಕ್ಕಳಿಗೆ ಪಾಕಿಸ್ತಾನದ ಪೌರತ್ವ ನೀಡಿದ್ದ ಅಲ್ಲಿನ ಸರ್ಕಾರ ರಂಷಾ ಜಹಾನ್‌ಗೆ ಪೌರತ್ವ ನೀಡಲು ನಿರಾಕರಿಸಿತ್ತು.

ಆದರೆ, ಪತಿ ಜೊತೆಗಿನ ಕೌಟುಂಬಿಕ



ರಂಷಾ ಜಹಾನ್

ಕಲಹದ ಹಿನ್ನೆಲೆಯಲ್ಲಿ ರಂಷಾ ಮೂವರು ಮಕ್ಕಳೊಂದಿಗೆ ಜನವರಿ 24, 2025 ರಂದು ಭಾರತಕ್ಕೆ ಹಿಂತಿರುಗಿ ತವರು ಮನೆ ಸೇರಿದ್ದರು.

ಆದರೆ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನದ ಭಯೋತ್ಪಾದಕರು 26 ಪ್ರವಾಸಿಗರ ಮಾರಣ ಹೋಮ ನಡೆಸಿದ ನಂತರ ಭಾರತದಲ್ಲಿರುವ ಎಲ್ಲಾ ಪಾಕಿಸ್ತಾನದ ಪ್ರಜೆಗಳು ತಮ್ಮ ದೇಶಕ್ಕೆ ವಾಪಾಸಾಗಬೇಕೆಂದು ಕೇಂದ್ರ ಸರ್ಕಾರ ಕಟ್ಟಾಜ್ಞೆ ವಿಧಿಸಿತ್ತು.

ಈ ಹಿನ್ನೆಲೆಯಲ್ಲಿ ಪಾಕಿಸ್ತಾನಕ್ಕೆ ಹೋಗದಂತೆ ತಮ್ಮ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದೆ ಭಾರತದಲ್ಲೇ ವಾಸ್ತವ್ಯ ಮುಂದುವರೆಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ರಂಷಾ ಜಹಾನ್ ಮತ್ತು ಮಕ್ಕಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಇದಕ್ಕೆ ಆಕ್ಷೇಪಣೆ ಸಲ್ಲಿಸಿದ ಕೇಂದ್ರ ಸರ್ಕಾರದ ಪರ ವಕೀಲ ಡಿಎಸ್ ಜಿ ಶಾಂತಿ ಭೂಷಣ್, ರಂಷಾ ಅವರ ಅರ್ಜಿಗೆ ಮಾನ್ಯತೆ ನೀಡದಂತೆ ಮತ್ತು ಕೇಂದ್ರ ಸರ್ಕಾರದ ತೀರ್ಮಾನದ ಮಹತ್ವವನ್ನು ವಿವರಿಸಿದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ, ರಂಷಾ ಮತ್ತು ಮೂವರು ಮಕ್ಕಳ ಅರ್ಜಿಯನ್ನು ವಜಾಗೊಳಿಸಿದರು. ಪಾಕಿಸ್ತಾನದ ಪ್ರಜೆಗಳ ವೀಸಾ ರದ್ದತಿ ಮಾಡಿ ಅವರ ದೇಶಕ್ಕೆ ಹೋಗುವಂತೆ ಏಪ್ರಿಲ್ 25 ರಂದು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಭಾರತ ಒಕ್ಕೂಟವು ಭದ್ರತೆಯ ಕುರಿತಾದ ಸಂಪುಟ ಸಮಿತಿಯ ಮೂಲಕ ಭಾರತದ ಪ್ರಜೆಗಳ ಹಿತಾಸಕ್ತಿ ಕಾಪಾಡಲು ಪ್ರಜ್ಞಾಪೂರ್ವಕವಾದ ದಿಟ್ಟ ಕ್ರಮ ಕೈಗೊಂಡಿದೆ. ಈ ವಿಚಾರದಲ್ಲಿ ನ್ಯಾಯಾಲಯ ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅಲ್ಲದೆ ಪಾಕಿಸ್ತಾನಕ್ಕೆ ಹೋಗದೆ ಭಾರತದಲ್ಲೇ ಇರಲು ನಿಮ್ಮ ಪರವಾಗಿ ಅನುಕೂಲಕರವಾದ ಆದೇಶ ನೀಡಲು ಯಾವುದೇ ಕಾರಣ ಸಿಗುತ್ತಿಲ್ಲ ಎಂದು ಸ್ಪಷ್ಟನೆ ನೀಡಿ, ರಂಷಾ ಮತ್ತು ಮಕ್ಕಳ ಅರ್ಜಿಯನ್ನು ನ್ಯಾಯಮೂರ್ತಿ ಉಮಾ ವಜಾ ಮಾಡಿದ್ದಾರೆ.

ಅತ್ತ ಪಾಕಿಸ್ತಾನ ಸೇರಿಸುತ್ತಿಲ್ಲ, ಇತ್ತ ಭಾರತದಲ್ಲೇ ಇರಲು ಸ್ಥಳೀಯ ಸರ್ಕಾರ, ಕೋರ್ಟ್ ಅವಕಾಶ ನೀಡುತ್ತಿಲ್ಲ

ಮೂವರು ಮಕ್ಕಳೊಂದಿಗೆ ರಂಷಾಜಹಾನ್‌ಗೆ ಪಾಕಿಸ್ತಾನ ಪ್ರವೇಶಕ್ಕೆ ಅವಕಾಶ ನೀಡುತ್ತಿಲ್ಲ. ಹೋಗಲಿ ಭಾರತದಲ್ಲೇ ವಾಸ್ತವ್ಯ ಹೂಡಲು ಸ್ಥಳೀಯ ಸರ್ಕಾರ ಮತ್ತು ಹೈಕೋರ್ಟ್ ಒಪ್ಪುತ್ತಿಲ್ಲ. ಇದರಿಂದ ಮಕ್ಕಳೊಂದಿಗೆ ತಾನು ಎಲ್ಲಿಗೆ ಹೋಗಬೇಕೆಂದು ರಂಷಾ ಜಹಾನ್ ಚಿಂತೆಗೆ ಬಿದ್ದಿದ್ದಾರೆ.

ಪಹಲ್ಗಾಮ್ ಪ್ರಕರಣದ ತರುವಾಯ ಕೇಂದ್ರ ಸರ್ಕಾರದ ನಿರ್ದೇಶನದ ಹಿನ್ನೆಲೆಯಲ್ಲಿ ಪಾಕಿಸ್ತಾನಕ್ಕೆ ತೆರಳಲು ರಂಷಾ ತನ್ನ ಮೂವರು ಮಕ್ಕಳೊಂದಿಗೆ ಪಂಜಾಬ್‌ನ ಅಮೃತ್‌ಸರ್‌ನಲ್ಲಿರುವ ಭಾರತ ಮತ್ತು ಪಾಕಿಸ್ತಾನದ ಗಡಿ ವಾಘಾಗೆ ತೆರಳಿದ್ದರು.

ಆದರೆ ಪಾಕಿಸ್ತಾನದ ಪೌರತ್ವವಿರುವ ಮೂವರು ಮಕ್ಕಳಿಗೆ ಮಾತ್ರ ಪ್ರವೇಶ ನೀಡುತ್ತೇವೆ. ಆದರೆ ಪಾಕಿಸ್ತಾನದ ಪೌರತ್ವವಿಲ್ಲದ ನಿಮಗೆ ಪ್ರವೇಶ ನೀಡುವುದಿಲ್ಲ ಎಂದು ವಾಘಾ ಗಡಿಯಲ್ಲಿರುವ ಪಾಕಿಸ್ತಾನದ ಅಧಿಕಾರಿಗಳು ಸ್ಪಷ್ಟಪಡಿಸಿದರು.

ಮೂವರು ಮಕ್ಕಳನ್ನು ತಂದೆ ಮೊಹಮ್ಮದ್ ಫಾರೂಕ್‌ಗೆ ಒಪ್ಪಿಸಿ ತಾನು ಭಾರತದಲ್ಲೇ ಉಳಿಯಲು ರಂಷಾ ಜಹಾನ್ ಫೋನ್ ಮೂಲಕ ಪತಿಯನ್ನು ಸಂಪರ್ಕಿಸುತ್ತಿದ್ದರು. ಆದರೆ ಪತಿ ದೂರವಾಣಿ ಕರೆ ಸ್ವೀಕರಿಸಲೇ ಇಲ್ಲ. ಆ ವೇಳೆ ಪಾಕಿಸ್ತಾನದ ಅಧಿಕಾರಿಗಳು ಕೂಡ ಮೊಹಮ್ಮದ್ ಪಾರೂಕ್‌ಗೆ ದೂರವಾಣಿ ಕರೆ ಮಾಡಿದರೂ ಆತ ಕರೆ ಸ್ವೀಕರಿಸಲಿಲ್ಲ. ಇದರಿಂದ ರಂಷಾ ಜಹಾನ್ ತನ್ನ ಮೂವರು ಮಕ್ಕಳೊಂದಿಗೆ ತವರು ಮೈಸೂರಿಗೆ ವಾಪಾಸ್ಸಾದರು.

ನಂತರ ಪಾಕಿಸ್ತಾನದ ವೀಸಾಗಾಗಿ ಬೆಂಗಳೂರಿನ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಅರ್ಜಿ ಸಲ್ಲಿಸಿದರು. ಇದೇ ವೇಳೆ ಭಾರತದಲ್ಲೇ ವಾಸ್ತವ್ಯ ಮುಂದುವರೆಸಲು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ನ್ಯಾಯಾಲಯ ರಂಷಾ ಜಹಾನ್ ಅರ್ಜಿ ವಜಾಗೊಳಿಸಿದೆ.

ಈಗ ಪಾಕಿಸ್ತಾನ ಪ್ರವೇಶ ನೀಡದ ಕಾರಣ, ಭಾರತದಲ್ಲೇ ಉಳಿಯಲು ಇಲ್ಲಿನ ಸರ್ಕಾರ ಮತ್ತು ನ್ಯಾಯಾಲಯ ಆದೇಶ ನೀಡದಿರುವ ಹಿನ್ನೆಲೆಯಲ್ಲಿ ತಾನು ಎಲ್ಲಿ ಹೋಗಬೇಕು ಎಂದು ತೋಚದೆ ರಂಷಾ ಜಹಾನ್ ಅತಂತ್ರ ಸ್ಥಿತಿಯಲ್ಲಿದ್ದಾರೆ.

ಭಾರತದ ವಿರೋಧದ ನಡುವೆಯೂ

ಪಾಕ್‌ಗೆ 19,000 ಕೋಟಿ ಸಾಲ ಕೊಟ್ಟ ಐಎಂಎಫ್

ನವದೆಹಲಿ, ಮೇ 9– ಭಾರತದ ವಿರೋಧದ ನಡುವೆಯೂ ಪಾಕಿಸ್ತಾನಕ್ಕೆ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) 19 ಸಾವಿರ ಕೋಟಿ ಸಾಲವನ್ನು ಮಂಜೂರು ಮಾಡಿದೆ.

ರಾಜ್ಯ ಪ್ರಾಯೋಜಿತ ಭಯೋತ್ಪಾದನೆಗೆ ಹಣಕಾಸಿನ ನೆರವು ಎಂದು ಭಾರತ ಕಳವಳ ವ್ಯಕ್ತಪಡಿಸಿದೆ. ಅಲ್ಲದೇ ಪಾಕಿಸ್ತಾನಕ್ಕೆ ಸಾಲ ನೀಡುವ ಸಂಬಂಧ ಮತದಾನದಿಂದ ಭಾರತ ದೂರ ಉಳಿಯಿತು. ಪುನರಾವರ್ತಿತ ಆರ್ಥಿಕ ಬಿಕ್ಕಟ್ಟುಗಳು ಮತ್ತು ಹಿಂದಿನ ಐಎಂಎಫ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಕಳಪೆ ದಾಖಲೆಯಿಂದ ಗುರುತಿಸಲ್ಪಟ್ಟ ಇಎಫ್‌ಎಫ್ ಕಾರ್ಯಕ್ರಮದ ಅಡಿಯಲ್ಲಿ ಪಾಕಿಸ್ತಾನದ ಪ್ರಗತಿಯನ್ನು ಐಎಂಎಫ್ ಪರಿಶೀಲಿಸಿದ ನಂತರ ಈ ಅನುಮೋದನೆ ನೀಡಲಾಗಿದೆ. ಹಿಂದಿನ ಐಎಂಎಫ್ ಸಾಲಗಳನ್ನು ಪರಿಣಾಮಕಾರಿಯಾಗಿ ಬಳಸುವಲ್ಲಿ ಪಾಕಿಸ್ತಾನದ ನಿರಂತರ ವೈಫಲ್ಯದ ಬಗ್ಗೆ ಭಾರತ ಎಚ್ಚರಿಕೆ ನೀಡಿತ್ತು. ನಿಧಿಯ ಕಾರ್ಯಕ್ರಮ ವಿನ್ಯಾಸಗಳು ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳು ದೇಶದ ಆರ್ಥಿಕ ಮತ್ತು ರಾಜಕೀಯ ವಾಸ್ತವಗಳಿಗೆ ಹೊಂದಿಕೊಳ್ಳುತ್ತವೆಯೇ ಎಂದು ಪ್ರಶ್ನಿಸಿತ್ತು.

ಯೋಧರ ಶೌರ್ಯಕ್ಕೆ ಸಲಾಂ; ನಾವೂ ರೆಡಿ ಎಂದ ಮಾಜಿ ಸೈನಿಕರು

ಮೈಸೂರು, ಮೇ 9– ಪಹಲ್ಗಾಮ್ ಉಗ್ರರ ದಾಳಿಗೆ ಪ್ರತೀಕಾರವಾಗಿ 'ಆಪರೇಷನ್ ಸಿಂಧೂರ್' ಮುಂದುವರೆಸಿರುವ ಭಾರತೀಯ ಸೇನೆಯ ಶೌರ್ಯವನ್ನು ಮೈಸೂರಿನ 'ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ' ಶ್ಲಾಘಿಸಿದೆ.

ಸಂಘದ ಆವರಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಮೌನಾಚಾರಣೆ ಮೂಲಕ ಇತ್ತೀಚೆಗೆ ಪಹಲ್ಗಾಮ್‌ನಲ್ಲಿ ಪ್ರಾಣತ್ಯಾಗ ಮಾಡಿದ ಪ್ರವಾಸಿಗರ ಆತ್ಮಕ್ಕೆ ಚಿರಶಾಂತಿ ಕೋರಿ, ಉಗ್ರರ ದುಷ್ಕೃತ್ಯವನ್ನು ಅತ್ಯಂತ ಕಠಿಣವಾಗಿ ಖಂಡಿಸಲಾಯಿತು.

ಉಗ್ರರ ಹುಟ್ಟಡಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ದಿಟ್ಟ ನಿರ್ಧಾರ ಹಾಗೂ ಭಾರತೀಯ ಸೇನೆಯ ಶೌರ್ಯ, ನಿಖರ ಕಾರ್ಯಾಚರಣೆಯನ್ನು ಒಕ್ಕೊರಳಿನಿಂದ ಪ್ರಶಂಸಿಸಲಾಯಿತು. ಅಲ್ಲದೆ ನಾವೆಲ್ಲರೂ ಯುದ್ಧಭೂಮಿಯಲ್ಲಿ ಶತ್ರುಗಳ ವಿರುದ್ಧ ಹೋರಾಟಕ್ಕೆ ಸಿದ್ಧರಿದ್ದು, ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿಕೊಡಬೇಕೆಂದು ಇದೇ ವೇಳೆ ಒತ್ತಾಯಿಸಲಾಯಿತು.

ಸಂಘದ ಅಧ್ಯಕ್ಷ ಕಂಜಿತಂಡ ಕೆ.ಅಯ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಂಟಿ ಕಾರ್ಯದರ್ಶಿ ಚಂಡೀರ ಕೆ.ಬಸಪ್ಪ ಸೇರಿದಂತೆ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

ಡಿಂಕಾ ಡೈರಿಗೆ ಡಿ.ಇ.ಕಲಿ ಗಣೇಶ್ ಅಧ್ಯಕ್ಷ, ಸೌಮ್ಯಾ ಕುಮಾರ್ ಉಪಾಧ್ಯಕ್ಷರಾಗಿ ಆಯ್ಕೆ



ಪಾಂಡವಪುರ ತಾಲೂಕಿನ ಡಿಂಕಾ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ ಡಿ.ಇ.ಕಲಿ ಗಣೇಶ್, ಉಪಾಧ್ಯಕ್ಷ ಸೌಮ್ಯಾ ಕುಮಾರ್ ಅವರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅಭಿನಂದಿಸಿದರು.

ಪಾಂಡವಪುರ, ಮೇ 9– ತಾಲೂಕಿನ ಡಿಂಕಾ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಡಿ.ಇ.ಕಲಿ ಗಣೇಶ್ ಹಾಗೂ ಸೌಮ್ಯಾ ಕುಮಾರ್ ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಹಿಂದಿನ ಅಧ್ಯಕ್ಷ ಗಿರೀಶ್, ಉಪಾಧ್ಯಕ್ಷ ಕೃಷ್ಣಶೆಟ್ಟಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ ಶುಕ್ರವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕಲಿ ಗಣೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಸೌಮ್ಯಾ ಕುಮಾರ್ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಡಿ.ಇ.ಕಲಿ ಗಣೇಶ್, ಉಪಾಧ್ಯಕ್ಷರಾಗಿ ಸೌಮ್ಯಾ ಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ನಿರ್ಮಲ ಘೋಷಿಸಿದರು.

ಅಧ್ಯಕ್ಷ ಡಿ.ಇ.ಕಲಿ ಗಣೇಶ್ ಮಾತನಾಡಿ, ನಮ್ಮ ನಾಯಕ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದದಿಂದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ, ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ ಪಡೆದು ಸಂಘದ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಡಿಂಕಾ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘವು ಜಿಲ್ಲೆಗೆ ಮಾದರಿಯಾಗಿ ಕೆಲಸ ಮಾಡುತ್ತಿದೆ. ತಾಲೂಕಿನಲ್ಲಿಯೇ ಅಧಿಕ ಹಾಲು ಉತ್ಪಾದನೆ ಮಾಡುತ್ತಿದೆ, ಮನ್‌ಮುಲ್ ಒಕ್ಕೂಟದಿಂದ ಸಂಘಕ್ಕೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡಲಾಗುವುದು ಎಂದು ಭರವಸೆ ನೀಡಿದರು.

ನಿರ್ದೇಶಕರಾದ ಡಿ.ವಿ.ಶಿವಣ್ಣ, ಗಿರೀಶ್, ಕೃಷ್ಣಶೆಟ್ಟಿ, ಮಹದೇವಪ್ಪ, ಡಿ.ಎಂ.ಇಂದ್ರೇಶ್, ಮಹೇಶ್, ರಮಾದೇವಿ, ಶಿವಲಿಂಗಪ್ಪ, ಶ್ರೀನಿವಾಸಯ್ಯ, ಪ್ರೇಮಮ್ಮ, ಡಿ.ಎಂ.ಪುಟ್ಟೇಗೌಡ, ಕಾರ್ಯದರ್ಶಿ ಡಿ.ಎಂ.ಶಿವಪ್ಪ, ಕೇಶವಮೂರ್ತಿ, ಶೇಖರಪ್ಪ ಈರಪ್ಪಾಜಿ, ಮಾದಯ್ಯ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷ ಜಯಣ್ಣ, ಕಾರ್ಯದರ್ಶಿ ಹರೀಶ್, ಸೋಮಣ್ಣ, ರಾಜ್ಯ ಯುವ ಘಟಕ ನಿರ್ದೇಶಕ ದರ್ಶನ್, ಹಾಗನಹಳ್ಳಿ ಸುರೇಶ್, ನಿವೃತ್ತ ಶಿಕ್ಷಕ ಡಿ.ಕೆ.ಕಲ್‌ವೀರಪ್ಪ ಸೇರಿದಂತೆ ಡಿಂಕಾ ಗ್ರಾಮದ ಮುಖಂಡರು, ಯಜಮಾನರು ಹಾಜರಿದ್ದರು.

ಶಾಲಾ–ಕಾಲೇಜು ದುಬಾರಿ ಶುಲ್ಕಕ್ಕೆ ಬ್ರೇಕ್ ಹಾಕಿ

ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಕಿರಂಗೂರು ಪಾಪು ಒತ್ತಾಯ

ಮಂಡ್ಯ, ಮೇ 9– ಖಾಸಗಿ ಶಾಲೆಗಳ ದುಬಾರಿ ಶುಲ್ಕ ನಿಯಂತ್ರಣ ಮಾಡಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇರುವ ಡೇರ ಸಮಿತಿಯು ಸರ್ಕಾರದ ಶಿಕ್ಷಣ ಇಲಾಖೆ ಕಾಂತ್ರಿಗಳ ಮಾರ್ಗಸೂಚಿಗಳನ್ನು ಪರಿಪಾಲನೆ ಮಾಡುವಂತೆ ಖಾಸಗಿ ಶಾಲೆಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಕಿರಂಗೂರು ಪಾಪು ಅಲಿಯಾಸ್ ಮೋಹನ್ ಕುಮಾರ್ ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೆಲವು ಖಾಸಗಿ ಶಾಲೆಗಳು ಲಂಗುಲಗಾಮಿಲ್ಲದೆ ಪ್ರಿ ಕೆಜಿ, ಎಲ್‌ಕೆಜಿ, ಯುಕೆಜಿಗಳು, ಇನ್ನಿತರ ತರಗತಿಗಳನ್ನು ಶಿಕ್ಷಣ ಇಲಾಖೆಗಳ ಅನುಮತಿ ಪಡೆಯದೇ ತೆರೆದಿರುವುದನ್ನು ಪತ್ತೆಹಚ್ಚಲು ಜಿಲ್ಲಾ ಮಟ್ಟದ ಅಧಿಕಾರಿಗಳು, ಶಿಕ್ಷಣ ಅಧಿಕಾರಿಗಳು, ವಿಷಯ ನಿರೀಕ್ಷಕರನ್ನು ಒಳಗೊಂಡಂತೆ ಒಂದು ತಂಡ ರಚನೆ ಮಾಡುವಂತೆ ಒತ್ತಾಯಿಸಿದ್ದಾರೆ.



ಕಿರಂಗೂರು ಪಾಪು

ಖಾಸಗಿ ಶಾಲಾ–ಕಾಲೇಜುಗಳಲ್ಲಿ ದುಬಾರಿ ಶುಲ್ಕದ ಜೊತೆಗೆ ಬಟ್ಟೆ, ಬ್ಯಾಗ್, ಪುಸ್ತಕ, ವಾಹನಗಳ ದುಬಾರಿ ಬೆಲೆ ನಿಗದಿ ಮಾಡುತ್ತಿವೆ. ಶಿಕ್ಷಣ ಇಲಾಖೆ ಮಾರ್ಗಸೂಚಿ ಪ್ರಕಾರ ಶಾಲೆಯ ಆಡಳಿತ ಮಂಡಳಿಗಳು ನಡೆಯುತ್ತಿಲ್ಲ ಎಂಬುದಕ್ಕೆ ಸಾಕ್ಷಿ. ಇಲಾಖೆಗಳ ಸುತ್ತೋಲೆಗಳನ್ನು ಗಾಳಿಗೆ ತೂರಿ, ದುಬಾರಿ ಶುಲ್ಕ ವಿಧಿಸುವ ಮೂಲಕ ಪೋಷಕರ ಜೇಬಿಗೆ ಕತ್ತರಿ ಹಾಕುವ ಮೂಲಕ ಹಗಲು ದರೋಡೆಗೆ ಇಳಿದಿವೆ. ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ದಾಖಲಿಸಿದರೆ ಆ ಶುಲ್ಕ, ಈ ಶುಲ್ಕ ಎಂದು ಹಣವನ್ನು ರಾಜಾರೋಷವಾಗಿ ಪೀಕುವ ಮೂಲಕ ದುಡ್ಡು ಮಾಡುವ ದಂಧೆ ನಡೆಸುತ್ತಿವೆ.

ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ಆಟದ ಮೈದಾನಗಳು ಇರುವುದಿಲ್ಲ, ಸ್ವಚ್ಛತೆಯಂತೂ ಕಾಣದಾಗಿದೆ. ಹಂದಿಗೂಡಿನಂತೆ ಶಾಲಾ ಕೊಠಡಿಗಳು ಇರುತ್ತವೆ. ಬೀದಿ ಗೊಂದು–ಗಲ್ಲಿಗೊಂದು ನಾಯಿ ಕೊಡೆಗಳಂತೆ ಖಾಸಗಿ ಶಾಲೆಗಳ ಆರ್ಭಟ ಜೋರಾಗುತ್ತಿದೆ. ಪೋಷಕರು ಚಿನ್ನಾಭರಣ ಮಾರಿ ಇಲ್ಲವೇ ಕೈಸಾಲ ಮಾಡಿಕೊಂಡು ಮಕ್ಕಳಿಗೆ ಒಳ್ಳೆ ಶಿಕ್ಷಣ ಕೊಡಿಸುವ ಸಲುವಾಗಿ ಖಾಸಗಿ ಶಾಲೆಗಳಿಗೆ ದಾಖಲಿಸುವ ದುರ್ಗತಿ ಬಂದೊದಗಿದೆ.

ಖಾಸಗಿ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲಕ್ಷಾಂತರ ವಾರ್ಷಿಕವಾಗಿ ಖರ್ಚು ಮಾಡುವ ಪರಿಸ್ಥಿತಿ ಬಂದೊದಗಿದೆ. ಖಾಸಗಿ ಶಾಲೆಗಳ ಆಡಳಿತ ಮಂಡಳಿ, ಪೋಷಕರನ್ನು ಸುಲಿಯುವುದೇ ತಮ್ಮ ಗುರಿ ಎಂದು ನಿರ್ಧರಿಸಿದಂತಿದೆ. ಆದ್ದರಿಂದ ಸರ್ಕಾರ, ಶಿಕ್ಷಣ ಸಚಿವರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಖಾಸಗಿ ಶಾಲಾ–ಕಾಲೇಜುಗಳ ದುಬಾರಿ ಶುಲ್ಕ ವಸೂಲಿಗೆ ಬ್ರೇಕ್ ಹಾಕುವ ಮೂಲಕ ಶಿಕ್ಷಣ ವಂಚಿತ ಮಕ್ಕಳು ಹಾಗೂ ಬಡ ಮಕ್ಕಳ ಪೋಷಕರ ಕಾಪಾಡಬೇಕೆಂದು ಕಿರಂಗೂರು ಪಾಪು ಒತ್ತಾಯಿಸಿದ್ದಾರೆ.

ವಂಡರ್ ಲಾ ನಲ್ಲಿ ಎಲ್‌ಇಡಿ ಆಧಾರಿತ ಮಿಷನ್ ಇಂಟರ್ ಸ್ಟೆಲ್ಲಾರ್ ಅನಾವರಣ

ಮಂಡ್ಯ: ಮನರಂಜನಾ ಪಾರ್ಕ್ ವಂಡರ್ ಲಾನಲ್ಲಿ ಎಲ್‌ಇಡಿ ಆಧಾರಿತ 'ಮಿಷನ್ ಇಂಟರ್ ಸ್ಟೆಲ್ಲಾರ್' ಅನ್ನು ಅನಾವರಣಗೊಳಿಸಲಾಗಿದೆ ಎಂದು ವಂಡರ್ ಲಾ ಪಾರ್ಕ್‌ನ ಮುಖ್ಯಸ್ಥ ರುದ್ರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಿಷನ್ ಇಂಟರ್ ಸ್ಟೆಲ್ಲಾರ್ ಎಲ್‌ಇಡಿ ಆಧಾರಿತ ಇಮ್ಮರ್ಸಿವ್ ಸ್ಕ್ರೀನ್ ಸ್ಪೇಸ್ ಥಿಯೇಟರ್ ಆಗಿದ್ದು, ಬಾಹ್ಯಾಕಾಶದಲ್ಲಿನ ನೋಟವನ್ನು ಶಬ್ದ ಸಹಿತ ನೋಡುವ ಅನುಭವವನ್ನು ನೀಡುತ್ತದೆ ಎಂದರು.

ಒಟ್ಟು 8 ನಿಮಿಷಗಳ ಈ ವ್ಯವಸ್ಥೆಯು ಮುಂದಿನ ಪೀಳಿಗೆಯ ಫ್ಲೈಯಿಂಗ್ ಸ್ಪೇಸ್ ವಾಯೇಜ್ ಅನುಭವ ನೀಡಲಿದ್ದು, ಸಂದರ್ಶಕರನ್ನು ನಕ್ಷತ್ರಗಳಿಂದ ಹೊರಗೆ ಕೊಂಡೊಯ್ಯುವ ಅನುಭವ ವಂಡರ್ ಲಾ ಪ್ರೇಮಿಗಳಿಗೆ ಲಭಿಸಲಿದೆ ಎಂದು ಭರವಸೆ ನೀಡಿದರು.

46 ಸಾವಿರ ವ್ಯಾಟ್ ಧ್ವನಿ ವ್ಯವಸ್ಥೆ ಹೊಂದಿರುವ 'ಮಿಷನ್ ಇಂಟರ್ ಸ್ಟೆಲ್ಲಾರ್' 23 ಮೀ ಎತ್ತರದ ಛಾವಣಿಯೊಂದಿಗೆ 8 ಅಂತಸ್ತಿನ ಗುಮ್ಮಟ ಆಕಾರದ ರಚನೆಯೊಳಗೆ ರಚನೆಯಾದ ಹಾಲ್ ಮತ್ತು ಕ್ಯೂ ಪ್ರದೇಶವು ಹವಾನಿಯಂತ್ರಿತವಾಗಿದ್ದು, ದೇಶದ ಮೊದಲ ಆರಾಮದಾಯಕ 'ಮಿಷನ್ ಇಂಟರ್ ಸ್ಟೆಲ್ಲಾರ್' ಅನುಭೂತಿ ನೀಡುತ್ತದೆ ಎಂದರು.

ಮಾಹಿತಿಗೆ ತೇಜಸ್‌ಗೌಡ.ಎಸ್.ಐ ಮೊ.ಸಂ: 9632124666, 7349091424ಗೆ ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ವಂಡರ್‌ಲಾ ಪಾರ್ಕ್‌ನ ವ್ಯವಹಾರ ಅಭಿವೃದ್ಧಿ ಮುಖ್ಯಸ್ಥ ಪ್ರಾನ್ಸಿಸ್ ಕ್ಷೆವಿಯರ್, ವ್ಯವಹಾರ ಅಭಿವೃದ್ಧಿ ಮಂಡ್ಯ ಪಾಲುದಾರ ತೇಜಸ್‌ಗೌಡ.ಎಸ್.ಐ ಇದ್ದರು.

ಪಹಲ್ಗಾಮ್ ದಾಳಿ ಕುರಿತು ಮಾಜಿ ಸಂಸದೆ ರಮ್ಯಾ ಹೇಳಿಕೆಗೆ ಬಿಜೆಪಿ ಖಂಡನೆ



'ಆಪರೇಷನ್ ಸಿಂಧೂರ್' ಯಶಸ್ವಿ ದಾಳಿ ಹಿನ್ನೆಲೆಯಲ್ಲಿ ಮಂಡ್ಯ ನಗರದಲ್ಲಿರುವ ದೇವಾಲಯಗಳಲ್ಲಿ ಸೇನೆಗೆ ಒಳಿತಾಗಲೆಂದು ಪ್ರಾರ್ಥಿಸಿ ಬಿಜೆಪಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ಮಂಡ್ಯ: ಮಾಜಿ ಸಂಸದೆ ರಮ್ಯಾ ಅವರು, ನಾವು ಗುಪ್ತಚರ ಮತ್ತು ಭದ್ರತಾ ವೈಫಲ್ಯವನ್ನು ಪ್ರಶ್ನೆ ಮಾಡಲೇಬೇಕಿದೆ. ಯಾವ ಕಾರಣಕ್ಕಾಗಿ ಅಲ್ಲಿ ಲೋಪದೋಷ ಉಂಟಾಯಿತು ಎನ್ನುವುದರ ಬಗ್ಗೆ ಆಲೋಚಿಸಬೇಕಿದೆ. ಕೇಂದ್ರ ಸರ್ಕಾರದವರು ಉಗ್ರರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನೋಡಬೇಕಿದೆ ಎಂಬ ಬೇಜವಾಬ್ದಾರಿ ಹೇಳಿಕೆ ನೀಡಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದು ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್.ಅರವಿಂದ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿರುವ ಶ್ರೀ ವಿದ್ಯಾಗಣಪತಿ ದೇವಾಲಯದಲ್ಲಿ ಬಿಜೆಪಿ ಕಾರ್ಯಕರ್ತರು ಆಯೋಜಿಸಿದ್ದ 'ಆಪರೇಷನ್ ಸಿಂಧೂರ್' ಯಶಸ್ವಿ ಹಿನ್ನೆಲೆ ಸೇನೆಗೆ ಒಳಿತಾಗಲೆಂದು ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿ, ಬಳಿಕ ಮಾತನಾಡಿದರು.

ಮಂಡ್ಯದಲ್ಲಿ ಸಂಸದರಾಗಿ ಉತ್ತಮ ಸೇವೆ, ಜನಪರ ಯೋಜನೆಗಳ ನೀಡುವಲ್ಲಿ ಯಶಸ್ವಿಯಾಗಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿರುವ ರಮ್ಯಾ ಅವರು, ಪಹಲ್ಗಾಮ್ ಉಗ್ರರ ದಾಳಿ ಬಗ್ಗೆ ಬೇಜವಬ್ದಾರಿ ಹೇಳಿಕೆ ನೀಡಿರುವುದು ಸರಿಯೇ ಎಂದು ಪ್ರಶ್ನಿಸಿದರು.

ಪಾಕಿಸ್ತಾನದ ಮೇಲಿನ ಯುದ್ಧ ಈ ಎಲ್ಲದಕ್ಕೂ ಪರಿಹಾರ ಎಂದು ನನಗನ್ನಿಸುವುದಿಲ್ಲ. ನಾವು ನಮ್ಮ ನಾಯಕರನ್ನು ಆಯ್ಕೆ ಮಾಡುವುದು ನಮ್ಮನ್ನೆಲ್ಲಾ ರಕ್ಷಿಸಲು, ಇದು ಅವರ ಕರ್ತವ್ಯ ಎಂದು ರಮ್ಯಾ ಹೇಳಿರುವುದು ಭಾರತೀಯರಿಗೆ ಮಾಡಿದ ಅಪಮಾನ ಎಂದು ಕಿಡಿಕಾರಿದರು.

ಅಪರೇಷನ್ ಸಿಂಧೂರ್ ಯಶಸ್ಸಿಗೆ ಕಾರಣಕರ್ತರಾದ ಎಲ್ಲಾ ಸೈನಿಕರಿಗೆ ಒಳಿತಾಗಲಿ, ದೇಶದ್ರೋಹಿ ಉಗ್ರರನ್ನು ಮಟ್ಟಹಾಕಲು ದಿಟ್ಟ ನಿರ್ಧಾರ ಕೈಗೊಳ್ಳುತ್ತಿರುವ ಕೇಂದ್ರ ಸರ್ಕಾರ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಶಕ್ತಿ ತುಂಬೋಣ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವೃದ್ಧೆಗೆ ಸ್ವೀಟ್ ನೀಡಿ ಪ್ರಜ್ಞೆ ತಪ್ಪಿಸಿ ಚಿನ್ನಾಭರಣ ಕಳವು

ಹಲಗೂರು, ಮೇ 9– ವೃದ್ಧೆಯೊಬ್ಬರ ಪ್ರಜ್ಞೆ ತಪ್ಪಿಸಿ 12 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಹಲಗೂರಿನ ಕೆಂಪೇಗೌಡ ಬಡಾವಣೆಯಲ್ಲಿ ಗುರುವಾರ ಸಂಜೆ ನಡೆದಿದೆ.



ಕಮಲಮ್ಮ ಚಿನ್ನಾಭರಣ ಕಳೆದುಕೊಂಡವರು. ಗುರುವಾರ ಸಂಜೆ ತಮ್ಮ ಮನೆಯ ಜಗುಲಿಯ ಮೇಲೆ ಕುಳಿತಿದ್ದಾಗ ಆಕ್ಟಿವಾ ಹೊಂಡಾ ಸ್ಕೂಟರ್‌ನಲ್ಲಿ ಬಂದ ಅಪರಿಚಿತ ವ್ಯಕ್ತಿಯೊಬ್ಬ ಮನೆಯ ವಿಳಾಸ ಕೇಳುವ ನೆಪದಲ್ಲಿ ಕಮಲಮ್ಮ ಅವರನ್ನು ಪರಿಚಯಿಸಿಕೊಂಡಿದ್ದಾನೆ.

ಕಮಲಮ್ಮ ಧರಿಸಿದ್ದ ಚಿನ್ನಾಭರಣಗಳನ್ನು ಗಮನಿಸಿದ ವಂಚಕ; ಏನಮ್ಮ ಇಷ್ಟೊಂದು ಚಿನ್ನ ಧರಿಸಿದ್ದೀರಿ, ತುಂಬಾ ಸ್ಥಿತಿವಂತರಿದ್ದೀರಾ ಎಂದು ಆತ್ಮೀಯತೆಯಿಂದ ಮಾತನಾಡಿಸಿ, ನಂತರ ತಾನು ತಂದಿದ್ದ ಸಿಹಿ ತಿಂಡಿಯನ್ನು ಕಮಲಮ್ಮ ಅವರಿಗೆ ನೀಡಿದ್ದು, ತಿಂಡಿ ತಿಂದ ತಕ್ಷಣ ಕಮಲಮ್ಮ ಪ್ರಜ್ಞೆ ತಪ್ಪಿದ್ದಾರೆ. ಕೊರಳಲ್ಲಿದ್ದ ಸರ, ಕೈ ಬಳೆ, ಬೆರಳಲ್ಲಿದ್ದ ಉಂಗುರ ಸೇರಿದಂತೆ 126 ಗ್ರಾಂ ತೂಕದ ಚಿನ್ನಾಭರಣಗಳನ್ನು ದೋಚಿಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಧಾನಿ ಮೋದಿ ಬಗ್ಗೆ ಅವಹೇಳನಕಾರಿ ಪೋಸ್ಟ್ : ಯುವಕನ ಬಂಧನ

ಮಳವಳ್ಳಿ, ಮೇ 9– ಭಾರತ ಮತ್ತು ಪಾಕಿಸ್ತಾನ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿರುವ ಬೆನ್ನಲ್ಲೇ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದ ಯುವಕನೊಬ್ಬ ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅವಹೇಳನಕಾರಿ ಪೋಸ್ಟ್ ಹಾಕಿದ್ದ ಹಿನ್ನಲೆಯಲ್ಲಿ ಕಿರುಗಾವಲು ಪೊಲೀಸರು ಆತನ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸಿ, ಶುಕ್ರವಾರ ಬಂಧಿಸಿದ್ದಾರೆ.



ಕಿರುಗಾವಲು ಗ್ರಾಮದ ಜಾವೀದ್ ಪಾಷಾ (24) ಬಂಧಿತ ಆರೋಪಿಯಾಗಿದ್ದು, ಈತ ತನ್ನ ಫೇಸ್‌ಬುಕ್ ಖಾತೆಯಲ್ಲಿ ಯಾರೋ ಕಳುಹಿಸಿದ್ದ ವೀಡಿಯೋವನ್ನು ತಾನು ಅದನ್ನು ಇತರರಿಗೆ ಫಾರ್ವರ್ಡ್ ಮಾಡಿದ್ದ. ಭಾರತ–ಪಾಕ್ ಗಡಿಯಲ್ಲಿ ಉದ್ವಿಗ್ನತೆ ಇರುವಾಗ ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯ ಹಾಗೂ ಪ್ರಧಾನಿ ಮೋದಿ ಅವರ ಭಾವಚಿತ್ರಕ್ಕೆ ಅವಮಾನವಾಗುವಂತಹ ಕೃತ್ಯಕ್ಕೆ ಕೈ ಹಾಕಿರುವುದು ಗಮನಕ್ಕೆ ಬಂದಿದೆ ಎಂದು ಕಿರುಗಾವಲು ಠಾಣೆಯ ಎಂ.ಮಹೇಶ್ ದೂರಿನಲ್ಲಿ ತಿಳಿಸಿದ್ದಾರೆ.

ಬಿಜೆಪಿ ಮುಖಂಡರಾದ ಡಾ.ಸಿದ್ದರಾಮಯ್ಯ, ಸಿ.ಟಿ.ಮಂಜುನಾಥ್ ಸೇರಿದಂತೆ ಹಲವು ಮುಖಂಡರು ಠಾಣೆಗೆ ಭೇಟಿ ನೀಡಿ, ತಪ್ಪಿತಸ್ಥ ಆರೋಪಿ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಮೂರನೇ ಪುಟದಿಂದ

ಭಾರತೀಯ ಸೇನೆಯಿಂದ ತಕ್ಕ ಪ್ರತ್ಯುತ್ತರ

ತೊಡಗಿದ್ದರೆ, ನೌಕಾಸೇನೆಯು ದಾಳಿ ನಡೆಸಲು ತಕ್ಕ ಸಮಯಕ್ಕಾಗಿ ಸಜ್ಜಾಗಿದೆ.

ಗಡಿ ಭಾಗದ 20 ನಗರಗಳಲ್ಲಿ ಡ್ರೋನ್ ದಾಳಿ: ಇಂದು ರಾತ್ರಿ ಗಡಿ ನಿಯಂತ್ರಣ ರೇಖೆಗೆ ಹೊಂದಿಕೊಂಡಂತಿರುವ ಜಮ್ಮು–ಕಾಶ್ಮೀರ, ರಾಜಸ್ತಾನ್, ಪಂಜಾಬ್ ಹಾಗೂ ಗುಜರಾತ್‌ನ ಸುಮಾರು 20 ನಗರಗಳ ಏರ್‌ಪೋರ್ಟ್‌ಗಳು ಹಾಗೂ ವಸತಿ ಪ್ರದೇಶಗಳನ್ನು ಗುರಿಯಾಗಿರಿಸಿಕೊಂಡು ಪಾಕಿಸ್ತಾನ ವಾಯುಪಡೆ, ಡ್ರೋನ್ ದಾಳಿ ನಡೆಸಿದೆ. ಪಾಕಿಸ್ತಾನದ ಡ್ರೋನ್‌ಗಳನ್ನು ಭಾರತೀಯ ವಾಯುಸೇನೆ ಉಡಾಯಿಸಿದ್ದು, ಹಲವೆಡೆ ಡ್ರೋನ್‌ಗಳ ಅವಶೇಷ ಬಿದ್ದಿರುವುದು ಕಂಡು ಬಂದಿದೆ. ಅದೃಷ್ಟವಶಾತ್ ಡ್ರೋನ್‌ಗಳಿಗೆ ಅಳವಡಿಸಿದ್ದ ಸುಮಾರು 14.5 ಕೆಜಿ ತೂಕದ ಬಾಂಬ್ ಅಥವಾ ಸ್ಫೋಟಕಗಳು ಭಾರತೀಯ ವಾಯುಸೇನೆ ದಾಳಿಗೆ ಆಗಸದಲ್ಲೇ ಸ್ಫೋಟಗೊಂಡ ಪರಿಣಾಮ ಪಾಕ್ ಡ್ರೋನ್‌ಗಳಿಂದ ಯಾವುದೇ ಹಾನಿ ಸಂಭವಿಸಿಲ್ಲ.

ಕಟ್ಟಡಕ್ಕೆ ಹಾನಿ: ಆದರೆ, ಶೆಲ್ ದಾಳಿಯಿಂದ ಕೊಂಚಮಟ್ಟಿಗೆ ಅನಾಹುತವಾಗಿದೆ. ಜಮ್ಮು–ಕಾಶ್ಮೀರದ ಉರಿ ಪ್ರದೇಶದ ಮೊಹುರಾ ಬಳಿ ವಾಹನವೊಂದಕ್ಕೆ ಪಾಕಿಸ್ತಾನದ ಶೆಲ್ ಬಡಿದು ನರ್ಗೀಸ್ ಬೇಗಂ ಎಂಬ ಮಹಿಳೆ ಸಾವನ್ನಪ್ಪಿದ್ದಾರೆ. ಇಂದು ರಾತ್ರಿ ಪಂಜಾಬ್‌ನ ಫಿರೋಜ್‌ಪುರ್ ಬಳಿ ಪಾಕ್‌ನ ಶೆಲ್ ದಾಳಿಗೆ ಕಟ್ಟಡವೊಂದಕ್ಕೆ ಹಾನಿಯಾಗಿ, ಮೂವರು ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಅದೇ ವೇಳೆ ಪಾಕಿಸ್ತಾನದೊಂದಿಗಿನ ಭಾರತದ ಕದನ ಈ ಭಾಗದಲ್ಲಿ ಮುಂದುವರೆದಿದೆ ಎಂದು ಫಿರೋಜ್‌ಪುರ ಎಸ್‌ಎಸ್‌ಪಿ ಭೂಪೇಂದ್ರ ಸಿಂಗ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಭಾರೀ ಶೆಲ್ ದಾಳಿ: ಪಾಕಿಸ್ತಾನ್ ಸೇನೆಯು ಗಡಿನಿಯಂತ್ರಣ ರೇಖೆಗೆ ಹೊಂದಿಕೊಂಡಂತಿರುವ ಸುಮಾರು 20 ನಗರಗಳ ಮೇಲೆ ಕ್ಯಾಲಿಬರ್ ಶಸ್ತ್ರಾಸ್ತ್ರಗಳೊಂದಿಗೆ ಶೆಲ್ ದಾಳಿ ನಡೆಸಿದೆ. ಲೇಹ್‌ನಿಂದ ಸರ್‌ಗ್ರಿಕ್‌ವರೆಗಿನ ಗಡಿನಿಯಂತ್ರಣ ರೇಖೆಯುದ್ದಕ್ಕೂ ಶೆಲ್ ದಾಳಿ ನಡೆಸಿದೆ. ಜಮ್ಮು–ಕಾಶ್ಮೀರದ ಹಂದ್ವಾರಾ ಜಿಲ್ಲೆಯ ನೌಗಮ್ ಸೆಕ್ಟರ್, ಉರಿ, ಪೂಂಚ್, ಕುಪ್ವಾರಾ ಜಿಲ್ಲೆಯ ಕರ್ನಾ, ತಂಗ್ಧರ್, ರಾಜಸ್ತಾನ ಮತ್ತು ಪಂಜಾಬ್‌ನ ಜೆಸಲ್ಮೇರ್, ಪೂಂಚ್, ಸಾಂಬಾ, ಗುರುದಾಸಪುರ, ಕೊಷಿಯಾಪುರ್, ಅವಂತಿಪುರ ಮುಂತಾದೆಡೆ ಡ್ರೋನ್ ದಾಳಿಗಳನ್ನು ನಡೆಸಿದೆ.

ಅಮೃತಸರದ ಏರ್‌ಪೋರ್ಟ್, ಶ್ರೀನಗರ ಏರ್‌ಪೋರ್ಟ್ ಹಾಗೂ ಈ ಭಾಗದ ವಾಯುನೆಲೆಗಳನ್ನು ಗುರಿಯಾಗಿಟ್ಟುಕೊಂಡು ಹಾರಿಬಂದ ಪಾಕಿಸ್ತಾನದ ಎಲ್ಲಾ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಸೇನಾ ಮೂಲಗಳು ತಿಳಿಸಿವೆ.

ಗುಡಿ–ಗೋಪುರ ಗುರಿ: ಪಾಕ್ ಶೆಲ್ ದಾಳಿಗೆ ಗುರುದ್ವಾರ, ದೇವಸ್ಥಾನ ಹಾಗೂ ಮಸೀದಿಗಳು ಹಾನಿಗೊಳಗಾಗಿವೆ ಎಂದು ಮೂಲಗಳು ತಿಳಿಸಿವೆ. ಇಂದು ರಾತ್ರಿ ಜಮ್ಮುವಿನಿಂದ ಹೊರಟ ರೈಲಿನ ಮೇಲೆ ಪಾಕ್ ಸೈನಿಕರು ಡ್ರೋನ್ ದಾಳಿ ನಡೆಸಲು ಪ್ರಯತ್ನಿಸಿ ವಿಫಲವಾಗಿದ್ದು, ಈ ಸಂದರ್ಭದಲ್ಲಿ ರೈಲಿನಲ್ಲಿ ಬ್ಲಾಕ್‌ಔಟ್ ಮಾಡಲಾಗಿತ್ತು. ರೈಲಿನ ಎಲ್ಲಾ ಲೈಟ್‌ಗಳನ್ನು ಆಫ್ ಮಾಡಿದ್ದಲ್ಲದೆ ಪ್ರಯಾಣಿಕರು ಮೊಬೈಲ್ ಬಳಸದಂತೆ ಎಚ್ಚರಿಕೆ ನೀಡಲಾಗಿತ್ತು. ಈ ದಾಳಿಯ ನಂತರ ಜಮ್ಮು ಭಾಗದ ಎಲ್ಲಾ ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದೆ.

ಗುಂಡಿನ ಚಕಮಕಿ: ವಾಯು ದಾಳಿ ಜೊತೆಗೆ ಗಡಿಯಲ್ಲಿ ಪಾಕ್ ಸೈನಿಕರ ಅಪ್ರಚೋದಿತ ಗುಂಡಿನ ದಾಳಿ ಮುಂದುವರೆದಿದೆ. ಇದಕ್ಕೆ ಭಾರತೀಯ ಸೇನೆಯೂ ತಕ್ಕ ಪ್ರತ್ಯುತ್ತರ ನೀಡುತ್ತಿದೆ.

ಪ್ರಧಾನಿ ಮೋದಿ ಮೂರು ಗಂಟೆ ಸಭೆ

ನಗರಗಳ ಮೇಲೆ ಪ್ರತಿದಾಳಿ ನಡೆಸಿತು. ಇದನ್ನು ಭಾರತೀಯ ಸೇನೆ ದಿಟ್ಟವಾಗಿ ಮಟ್ಟಹಾಕುತ್ತಿದೆ. ನರೇಂದ್ರ ಮೋದಿ ಅವರ ಅಧಿಕೃತ ನಿವಾಸದಲ್ಲಿ ನಡೆದ ಈ ಸಭೆಯಲ್ಲಿ ಭೂಸೇನೆ, ವಾಯುಸೇನೆ ಹಾಗೂ ನೌಕಾಸೇನೆ ಮುಖ್ಯಸ್ಥರು ಭಾಗವಹಿಸಿ, ಸದ್ಯದ ಉದ್ವಿಗ್ನತೆ ಬಗ್ಗೆ ಮಾಹಿತಿ ನೀಡಿದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತಿತರರು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಆಕಾಶ್ ಕ್ಷಿಪಣಿ, ಎಸ್ 400 ವಾಯು ರಕ್ಷಣಾ ವ್ಯವಸ್ಥೆಗಳ ಸಹಾಯದಿಂದ ಪಾಕಿಸ್ತಾನದ ಡ್ರೋನ್ ದಾಳಿಯನ್ನು ತಡೆಗಟ್ಟಲಾಗಿದೆ ಎಂದು ರಕ್ಷಣಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಪಾಕಿಸ್ತಾನದ ಸಶಸ್ತ್ರ ಪಡೆಗಳು ಮೇ 8 ಮತ್ತು 9ರಂದು ಡ್ರೋನ್, ಕ್ಷಿಪಣಿ ಬಳಸಿ ಭಾರತದ ಮೇಲೆ ಹಲವು ಬಾರಿ ದಾಳಿ ನಡೆಸಿವೆ. ಅಲ್ಲದೆ ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆ ಬಳಿ ಪಾಕ್ ಸೈನ್ಯ ಕದನ ವಿರಾಮ ಉಲ್ಲಂಘಿಸಿದೆ. ಸುಮಾರು 400 ಡ್ರೋನ್‌ಗಳನ್ನು ಯಶಸ್ವಿಯಾಗಿ ಹೊಡೆದುರುಳಿಸಲಾಗಿದೆ. ದೇಶದ ಅಖಂಡತೆಯನ್ನು ರಕ್ಷಿಸಲು ನಾವು ಬದ್ಧರಾಗಿದ್ದೇವೆ ಎಂದು ಸೇನೆ ತಿಳಿಸಿದೆ.

ಪ್ರತ್ಯೇಕ ಸಭೆ: ರಕ್ಷಣಾ ಸಚಿವರೂ ಸೇನಾಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸಿ, ಮಾಹಿತಿ ಪಡೆದಿದ್ದಾರೆ. ಗೃಹ ಸಚಿವ ಅಮಿತ್ ಶಾ ಹಾಗೂ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮಾತುಕತೆ ನಡೆಸಿದ್ದಾರೆ. ಹಾಗೆಯೇ ಸಚಿವ ಜೆ.ಪಿ.ನಡ್ಡಾ, ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ್ದಾರೆ.

ರಾಜ್ಯಗಳಿಗೆ ಕೇಂದ್ರದ ಕಟ್ಟುನಿಟ್ಟಿನ ಸೂಚನೆ

ನಗರ ಮತ್ತು ಜಿಲ್ಲೆಗಳಿಗೆ ಭೇಟಿ ನೀಡುವ ಅಪರಿಚಿತ ಹಾಗೂ ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ಮತ್ತು ಅವರು ತಂಗುವ ಸ್ಥಳ, ಹೋಟೆಲ್ ಇತ್ಯಾದಿಗಳ ತಪಾಸಣೆಗೆ ಆದೇಶಿಸಲಾಗಿದೆ.

ದೇಶದ ಭದ್ರತೆಯ ಹಿತದೃಷ್ಟಿಯಿಂದ ಸಾರ್ವಜನಿಕ ರಕ್ಷಣಾ ಕ್ರಮಗಳ ಕುರಿತು ಅಭ್ಯಾಸ ಮತ್ತು ತಾಲೀಮು ಏರ್ಪಡಿಸುವುದು, ಗ್ರಾಮ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ನಾಗರಿಕ ರಕ್ಷಣಾ ವಾರ್ಡನ್‌ಗಳು, ಸ್ವಯಂ ಸೇವಕರು, ಹೋಂಗಾರ್ಡ್‌ಗಳು, ಎನ್‌ಸಿಸಿ, ಎನ್‌ಎಸ್‌ಎಸ್, ಎನ್‌ವೈಕೆಎಸ್ ಮತ್ತಿತರ ವಿದ್ಯಾರ್ಥಿ ಸಂಘಟನೆಗಳು ಸಾರ್ವಜನಿಕರನ್ನು ಸಮಾಜಘಾತುಕ ಚಟುವಟಿಕೆಗಳ ಬಗ್ಗೆ ಜಾಗೃತಗೊಳಿಸುವುದು ಮತ್ತು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಲಾಗಿದೆ.

ಮನೆಗಳಲ್ಲಿ ಅಗತ್ಯ ವಸ್ತು ಶೇಖರಣೆ: ಸಾರ್ವಜನಿಕರು ಶಾಂತಚಿತ್ತದಿಂದ ಜಾಗೃತ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕು, ಮನೆಗಳಲ್ಲಿ ನಿಗದಿತ ನಗದು, ಇಂಧನ ತುಂಬಿದ ವಾಹನಗಳು, ಸಾಕಷ್ಟು ಔಷಧಿಗಳು, ಹೊದಿಕೆಗಳನ್ನು ಸಂಗ್ರಹಿಸಿಡುವುದರ ಜೊತೆಗೆ ತಮ್ಮ ಮೊಬೈಲ್‌ಗಳನ್ನು ಸದಾ ಚಾರ್ಜ್‌ನಲ್ಲಿ ಇಟ್ಟುಕೊಳ್ಳುವಂತೆ ಹಾಗೂ ಮುಖ್ಯ ದಾಖಲೆಗಳನ್ನು ಸುರಕ್ಷಿತವಾಗಿಡುವಂತೆ ಕ್ರಮವಹಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಘಟಕಾಧಿಕಾರಿಗಳ ಅಧೀನದಲ್ಲಿರುವ ಅಧಿಕಾರಿಗಳಿಗೆ ಹಾಗೂ ಠಾಣಾಧಿಕಾರಿಗಳಿಗೆ ಈ ಮೇಲ್ಕಂಡ ಎಲ್ಲಾ ಅಂಶಗಳ ಪಾಲನೆ ನಿರ್ದೇಶನ ನೀಡುವುದು ಹಾಗೂ ಅರಿವು ಮೂಡಿಸುವುದು. ಘಟಕಾಧಿಕಾರಿಗಳು ತಮ್ಮ ಘಟಕಗಳ ವೈರ್‌ಲೆಸ್ ಉಪಕರಣ, ಕಂಪ್ಯೂಟರ್ ಮತ್ತು ವಾಹನಗಳನ್ನು ಸುಸಜ್ಜಿತವಾಗಿ ಇಡಬೇಕು, ಶಸ್ತ್ರಾಗಾರದಲ್ಲಿನ ಶಸ್ತ್ರ ಮತ್ತು ಮದ್ದುಗುಂಡುಗಳನ್ನು ಸದಾ ಸಿದ್ಧವಾಗಿ ಇಡಬೇಕು ಎಂದು ಗುಪ್ತಚರ ಇಲಾಖೆ ಸೂಚಿಸಿದೆ.

ಈ ಮಧ್ಯೆ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಇಲಾಖೆಯ ಉನ್ನತ ಅಧಿಕಾರಿಗಳ ಸಭೆ ನಡೆಸಿ, ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರ ಸೇವೆಗೆ ಅಗತ್ಯ ವೈದ್ಯಕೀಯ ನೆರವು ಹಾಗೂ ಔಷಧಗಳ ದಾಸ್ತಾನು ಇಟ್ಟುಕೊಳ್ಳುವಂತೆ ಸೂಚಿಸಿದರು.

ಪಾಕ್ ದಾಳಿ

ಧಕ್ಕೆಯಾಗದಂತೆ ಪ್ರತಿದಾಳಿ ಮಾಡಿದೆ. ಈ ಮೂಲಕ ಭಾರತ ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘನೆ ಮಾಡಿಲ್ಲ ಎಂದು ತಿಳಿಸಿದರು. ಟರ್ಕಿಯ ಡ್ರೋನ್‌ಗಳನ್ನು ಬಳಸಿಕೊಂಡು ಪಾಕಿಸ್ತಾನ ಭಾರತದ ಮೇಲೆ ದಾಳಿ ನಡೆಸಿದೆ. ಕೈನೆಟಿಕ್ ಮತ್ತು ನಾನ್ ಕೈನೆಟಿಕ್ ಎರಡೂ ರೀತಿಯಲ್ಲೂ ಪಾಕ್ ಡ್ರೋನ್‌ಗಳನ್ನು ನಾಶಪಡಿಸಲಾಗಿದೆ. ಡ್ರೋನ್‌ನ ಅವಶೇಷಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ವರದಿಯಲ್ಲಿ ಇದು ಟರ್ಕಿ ನಿರ್ಮಿತ ಡ್ರೋನ್‌ಗಳು ಎಂದು ತಿಳಿದು ಬಂದಿದೆ ಎಂದು ಮಾಹಿತಿ ನೀಡಿದರು.

ಕೋಮು ಗಲಭೆಗೆ ಪಾಕ್ ಯತ್ನ; ವಿಕ್ರಂ ಮಿಸ್ರಿ: ಇದೇ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಕರ್ತಾರ್‌ಪುರ ಕಾರಿಡಾರ್ ಅನ್ನು ಮುಂದಿನ ನಿರ್ದೇಶನದವರೆಗೂ ಮುಚ್ಚಲಾಗಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನ ದಾಳಿಗಳಿಗೆ ಭಾರತೀಯ ಸೇನೆ ತಕ್ಕ ಪ್ರತ್ಯುತ್ತರ ನೀಡುತ್ತಿದ್ದು, ಗುರುದ್ವಾರದ ಮೇಲೆ ಭಾರತ ಡ್ರೋನ್ ದಾಳಿ ನಡೆಸಿದೆ ಎಂದು ಸುಳ್ಳುಗಳನ್ನು ಹರಡುವ ಮೂಲಕ ಪಾಕ್ ಕೋಮು ಗಲಭೆಗೆ ಯತ್ನಿಸುತ್ತಿದೆ ಎಂದು ಹೇಳಿದರು.

ಅಣಕು ಕವಾಯತು ಪೂರ್ವಾಭ್ಯಾಸ

ಬಾಂಬ್ ದಾಳಿಯಿಂದ ಹಾನಿಗೊಳಗಾದ ನಾಗರಿಕರನ್ನು ಸಮರೋಪಾದಿಯಲ್ಲಿ ರಕ್ಷಣೆ ಮಾಡುವ ದೃಶ್ಯವನ್ನು ಸೃಷಿಸಿ ಅಭ್ಯಾಸ ನಡೆಸ ಲಾಯಿತು. ಹಾಗೆಯೇ ಮೈಸೂರು ಅರಮನೆ ಮಾತ್ರ ವಲ್ಲದೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ, ಮಾರುಕಟ್ಟೆ, ವಿವಿಧ ಮಾಲ್‌ಗಳು, ಪ್ರವಾಸಿ ತಾಣಗಳಲ್ಲಿಯೂ ಬಾಂಬ್ ನಿಷ್ಕ್ರೀಯ ದಳ ಹಾಗೂ ಶ್ವಾನದಳ ತಪಾಸಣೆಯೊಂದಿಗೆ ತೀವ್ರ ಸ್ವರೂಪದ ಕಟ್ಟೆಚ್ಚರ ವಹಿಸುವುದು. ಯುದ್ಧದ ತುರ್ತು ಸಂದರ್ಭದಲ್ಲಿ ನಾಗರಿಕರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುವ ದೃಶ್ಯಗಳನ್ನು ಸೃಷ್ಟಿಸಿ, ನಾಗರಿಕರ ರಕ್ಷಣೆಯ ಅಣಕು ಪ್ರದರ್ಶನ ನೀಡಲಾಯಿತು.

ಪೂರ್ವಾಭ್ಯಾಸಕ್ಕೂ ಮುನ್ನ ಅರಮನೆ ಮಂಡಳಿ ಸಭಾಂಗಣದಲ್ಲಿ ಸಭೆ ನಡೆಸಿ, ಮಾಕ್ ಡ್ರಿಲ್‌ನ ಪ್ರತಿಯೊಂದು ಹಂತದಲ್ಲಿಯೂ ಹೇಗೆ ಕಾರ್ಯನಿರ್ವಹಿಸಬೇಕು. ದಾಳಿಗೊಳಗಾದ ನಾಗರಿಕರನ್ನು ಹೇಗೆ ರಕ್ಷಣೆ ಮಾಡಬೇಕು. ದಾಳಿಯಾದರೆ ಯಾವ್ಯಾವ ಇಲಾಖೆಯ ಜವಾಬ್ದಾರಿ ಏನು. ಯಾವ ರೀತಿಯಾಗಿ ಕಾರ್ಯೋನ್ಮುಖರಾಗಬೇಕು ಎಂಬುದರ ಕುರಿತು ಚರ್ಚಿಸಲಾಯಿತು. ಸೈರನ್ ಮೊಳಗುತ್ತಿದ್ದಂತೆ ಹೇಗೆಲ್ಲಾ ರಕ್ಷಣಾ ಕಾರ್ಯ ನಿರ್ವಹಿಸಬೇಕು ಎಂಬುದನ್ನು ನೈಜ ದೃಶ್ಯದೊಂದಿಗೆ ಅಭ್ಯಾಸ ನಡೆಸಲಾಯಿತು. ತೀವ್ರ ಕಟ್ಟೆಚ್ಚರ, ತಪಾಸಣೆ, ಬಾಂಬ್ ದಾಳಿಗೆ ಒಳಗಾಗಿ ಗಾಯಗೊಂಡ ನಾಗರಿಕರಿಗೆ ತುರ್ತು ಚಿಕಿತ್ಸೆ, ಸುರಕ್ಷಿತ ಪ್ರದೇಶಕ್ಕೆ ನಾಗರಿಕರನ್ನು ಕರದೊಯ್ಯುವುದು ಹಾಗೆಯೇ ಬ್ಲಾಕ್ ಔಟ್(ವಿದ್ಯುತ್ ಕಡಿತಗೊಳಿಸುವುದು) ಮಾಡಿ ಪ್ರವಾಸಿತಾಣಗಳು, ನಾಗರಿಕರು ಎಲ್ಲಿದ್ದಾರೆಂಬುದು ಕಾಣದಂತೆ ಮಾಡುವ ಸಂರಕ್ಷಣಾ ವಿಧಾನಗಳನ್ನು ಅಭ್ಯಾಸ ಮಾಡಲಾಯಿತು.

ತಾತ್ಕಾಲಿಕ ಚಿಕಿತ್ಸಾ ಟೆಂಟ್‌ಗಳನ್ನು ನಿರ್ಮಿಸಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ನೀಡುವುದು, ಆಂಬುಲೆನ್ಸ್ ಸೇವೆ, ಬಾಂಬ್ ದಾಳಿಯಿಂದ ಹೊತ್ತಿ ಉರಿಯುತ್ತಿರುವ ಬೆಂಕಿ ನಂದಿಸುವುದು, ನೆಲಕ್ಕುರುಳಿದ ಕಟ್ಟಡ ತ್ಯಾಜ್ಯವನ್ನು ತೆರವುಗೊಳಿಸಿ, ಕಟ್ಟಡದ ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಣೆ ಮಾಡುವುದನ್ನು ಅಭ್ಯಾಸಿಸಲಾಯಿತು. ಪೂರ್ವಾಭ್ಯಾಸದಲ್ಲಿ ಡಿಹೆಚ್‌ಓ ಡಾ.ಕುಮಾರಸ್ವಾಮಿ, ಡಿಸಿಪಿಗಳಾದ ಮುತ್ತುರಾಜ್, ಸುಂದರ್‌ರಾಜ್, ಸೆನ್ ಎಸಿಪಿ ಸ್ನೇಹರಾಜ್ ಸೇರಿದಂತೆ ನಗರ ಸಶಸ್ತ್ರ ಮೀಸಲು ಪಡೆಯ ಅಧಿಕಾರಿ–ಸಿಬ್ಬಂದಿ, ಚಾಮುಂಡಿ ಕಮಾಂಡೊ, ಪ್ಯಾಂಥರ್ ಕಮಾಂಡೊ, ಅಗ್ನಿಶಾಮಕ ಅಧಿಕಾರಿ ಮತ್ತು ಸಿಬ್ಬಂದಿ, ಆರೋಗ್ಯ ಇಲಾಖೆ ವೈದ್ಯಕೀಯ ಸಿಬ್ಬಂದಿ, ಪಾಲಿಕೆ ಸಿಬ್ಬಂದಿ ಭಾಗವಹಿಸಿದ್ದರು.

ಸ್ಲೀಪರ್ ಸೆಲ್‌ಗಳ ಮೇಲೆ ನಿಗಾ

ಹೆಚ್ಚುವರಿ ಭದ್ರತೆ: ಬೆಂಗಳೂರು ನಗರ ದೇಶದಲ್ಲಿ ಐಟಿ ಸಿಟಿಯಾಗಿ ಗುರುತಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಹೆಚ್ಚಿನ ಭದ್ರತೆಯನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ. ಇದರ ಭಾಗವಾಗಿ ಸಿಎಂ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಭಾಗಿಯಾದ್ದರು. ಈಗಾಗಲೇ ರಾಜ್ಯದ ಪ್ರಮುಖ ಜಲಾಶಯಗಳು ಹಾಗೂ ಅಣೆಕಟ್ಟುಗಳಿಗೆ ಹೆಚ್ಚಿನ ಭದ್ರತೆಯನ್ನು ಒದಗಿಸಲಾಗಿದೆ. ಇನ್ನು ಮೈಸೂರು ನಗರದಲ್ಲೂ ಶನಿವಾರ ವಿಶೇಷ ಅಣಕು ಕಾರ್ಯಾಚರಣೆ ನಡೆಸಲಾಗುತ್ತಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಅಣಕು ಪ್ರದರ್ಶನ ಗಳನ್ನು ನಡೆಸಿ ಯುದ್ಧದ ಪರಿಸ್ಥಿತಿ ಎದುರಿಸಲು ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಅಮೆರಿಕಾ ಆತಂಕ

ನವದೆಹಲಿ, ಮೇ 9– ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧೋನ್ಮಾದವನ್ನು ಶಮನಗೊಳಿಸುವ ನಿಟ್ಟಿನಲ್ಲಿ ಅಮೆರಿಕಾ ಪ್ರಯತ್ನಕ್ಕೆ ಮುಂದಾಗಿದೆ. ಉಭಯ ರಾಷ್ಟ್ರಗಳು ಶಸ್ತ್ರಾಸ್ತ್ರ ಸಂಘರ್ಷದಿಂದ ಹಿಂದೆ ಸರಿದು, ಶಾಂತಿ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿರುವ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಯುದ್ಧ ಭೀಕರತೆಗೆ ನಾಂದಿ ಆಗುವ ಆತಂಕ ವ್ಯಕ್ತಪಡಿಸಿದ್ದಾರೆ. ಶಾಂತಿ ಪ್ರಕ್ರಿಯೆಗಳಿಗೆ ಮುಂದಾದರೆ ಅದಕ್ಕೆ ಅಮೆರಿಕಾ ಕೈಜೋಡಿಸುವುದಾಗಿಯೂ ಭರವಸೆ ನೀಡಿದ್ದಾರೆ.

ಐವರು ನುಸುಳುಕೋರರನ್ನು ಕೊಂದು ವೀರ ಮರಣವನ್ನಪ್ಪಿದ ಯೋಧ

ಜಮ್ಮು–ಕಾಶ್ಮೀರ, ಮೇ 9– ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಆಂಧ್ರಪ್ರದೇಶ ಮೂಲದ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ಶ್ರೀ ಸತ್ಯಸಾಯಿ ಜಿಲ್ಲೆಯ ಗೋರಂಟ್ಲ ಮಂಡಲದ ಕಲ್ಲಿತಾಂಡದ ಅಗ್ನಿವೀರ್ ಜವಾನ್ ಮುರಳಿ ನಾಯಕ್(24) ಹುತಾತ್ಮರಾಗಿದ್ದು, ಇವರು 2022 ಅಕ್ಟೋಬರ್‌ನಲ್ಲಿ ಅಗ್ನಿವೀರ್‌ಗೆ ಆಯ್ಕೆಯಾಗಿ, ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಗುರುವಾರ ಜಮ್ಮು ಮತ್ತು ಕಾಶ್ಮೀರ ಗಡಿಯಲ್ಲಿ ಕರ್ತವ್ಯದಲ್ಲಿದ್ದಾಗ ಮುರಳಿ ನಾಯಕ್, ಗುಂಡಿನ ಚಕಮಕಿಯಲ್ಲಿ ಐದು ನುಸುಳುಕೋರರನ್ನು ಕೊಂದು, ಬಳಿಕ ಪ್ರಾಣ ತ್ಯಾಗ ಮಾಡಿದ್ದಾರೆ.



ಮುರಳಿಯ ತಂದೆ ಶ್ರೀರಾಮ್ ನಾಯಕ್ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿ, ಬೆಳಗ್ಗೆ 9 ಗಂಟೆಗೆ ನಮಗೆ ಸೇನಾ ಅಧಿಕಾರಿಗಳು ಕರೆ ಮಾಡಿ ಮಗನ ಸಾವಿನ ಸುದ್ದಿ ತಿಳಿಸಿದರು. ಬೆಳಗಿನ ಜಾವ 3.30ರ ಸುಮಾರಿಗೆ ನಡೆದ ಗುಂಡಿನ ಚಕಮಕಿಯಲ್ಲಿ ನನ್ನ ಮಗ ಮುರಳಿಯನ್ನು ಕಳೆದು ಕೊಂಡಿದ್ದೇವೆ. ಅವನನ್ನು ಕಾಶ್ಮೀರದಲ್ಲಿ ನಿಯೋಜಿಸಲಾಗಿತ್ತು. ಅವನು ಈ ವಿಷಯವನ್ನು ನಮ್ಮಿಂದ ಮರೆಮಾಚಿದ್ದ. ಪಂಜಾಬ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದು ನಮಗೆ ಹೇಳಿದ್ದ ಎಂದು ದುಃಖ ತೋಡಿಕೊಂಡರು.

ಮುರಳಿ ನಮಗೆ ಒಬ್ಬನೇ ಮಗ. ಅವನಿಗೆ ಕೇವಲ 23 ವರ್ಷ. ನಮ್ಮ ದುಃಖವನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ದೇಶ ಸೇವೆ ಮಾಡಲು ಸೇನೆಗೆ ಸೇರುವುದು ಅವನ ಗುರಿಯಾಗಿತ್ತು. ನನ್ನ ವಿರೋಧದ ನಡುವೆಯೂ ಅವನು ಸೇನೆಗೆ ಸೇರಿದ್ದ. ಕನಿಷ್ಠ ಒಂದು ವರ್ಷ ಸೇನಾ ಸಮವಸ್ತ್ರ ಧರಿಸಲು ಬಯಸಿದ್ದ ಅವನು ತನ್ನ ಆಸೆ ಈಡೇರಿಸಿಕೊಂಡಿದ್ದ. ನಿನ್ನೆ ಬೆಳಗ್ಗೆ 8 ಗಂಟೆಗೆ ನಮ್ಮೊಂದಿಗೆ ವಿಡಿಯೋ ಕರೆಯಲ್ಲಿ ಮಾತನಾಡಿದ್ದ ಎಂದು ತಿಳಿಸಿದರು.

ಪ್ರಧಾನಿ ಶಹಬಾಜ್ ಷರೀಫ್ ಹೇಡಿ; ಪಾಕ್ ಸಂಸತ್‌ನಲ್ಲಿ ಸಂಸದ ಆಕ್ರೋಶ

'ಟಿಪ್ಪು ಸುಲ್ತಾನ್' ಉಲ್ಲೇಖಿಸಿ ವಾಚಾಮಗೋಚರ ವಾಗ್ದಾಳಿ

ಇಸ್ಲಾಮಾಬಾದ್, ಮೇ 9–ಹಾಲಿ ಯುದ್ಧ ರೀತಿಯ ಸಂಘರ್ಷದಿಂದಾಗಿ ಪಾಕಿಸ್ತಾನ ಸಾಕಷ್ಟು ನಷ್ಟ ಅನುಭವಿಸಿದ್ದು, ಈ ನಡುವೆ ಪಾಕಿಸ್ತಾನ ಪ್ರಧಾನಿ ಶಹಭಾಜ್ ಷರೀಫ್ ವಿರುದ್ಧ ಅವರದ್ದೇ ದೇಶದ ಸಂಸದರು ತಿರುಗಿಬಿದ್ದಿದ್ದಾರೆ.



ಇಕ್ಬಾಲ್ ತಾಹಿರ್

ಶಹಭಾಶ್ ಷರೀಫ್ 'ಹೇಡಿ': ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ಕುರಿತು ಪಾಕಿಸ್ತಾನ ಸಂಸತ್ ಅಧಿವೇಶನದಲ್ಲಿ ಭಾರಿ ಚರ್ಚೆ ನಡೆದಿದ್ದು, ನಿನ್ನೆ ಪಾಕಿಸ್ತಾನ ತೆಹ್ರೀಕ್ ಇ ಇನ್ಸಾಫ್ ಸಂಸದ ಇಕ್ಬಾಲ್ ತಾಹಿರ್ ಹಾಲಿ ಪಾಕಿಸ್ತಾನ ಸರ್ಕಾರದ ವಿರುದ್ಧ ಕಿಡಿಕಾರಿದ್ದರು. ಇದೀಗ ಇಂದು ಮತ್ತೋರ್ವ ಸಂಸದ ಪ್ರಧಾನಿ ಶಹಭಾಷ್ ಷರೀಫ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು 'ಬುಜ್ದಿಲ್' (ಹೇಡಿ) ಎಂದು ಜರಿದಿದ್ದಾರೆ. ಶಹಭಾಜ್ ಅವರು ಇಷ್ಟೆಲ್ಲಾ ಆದರೂ ಭಾರತದ ಪ್ರಧಾನಿ ನರೇಂದ್ರ ಮೋದಿ ಹೆಸರನ್ನು ಸಹ ಹೇಳಲು ಆಗುತ್ತಿಲ್ಲ. ಅವರನ್ನು ಅದೆಂತಹ ವಿಷಯ ತಡೆಯುತ್ತಿದೆ ಎಂದು ತಿಳಿಯುತ್ತಿಲ್ಲ ಎಂದು ಕಿಡಿಕಾರಿದ್ದಾರೆ.

ಟಿಪ್ಪು ಸುಲ್ತಾನ್ ಸ್ಮರಣೆ: ಇದೇ ವೇಳೆ ಸಂಸದ ಶಾಹಿದ್ ಅಹ್ಮದ್, ಟಿಪ್ಪು ಸುಲ್ತಾನ್ ಹೇಳಿಕೆಯನ್ನು ಸ್ಮರಿಸಿದ್ದು, ಓರ್ವ ರಾಜ ಶೂರನಾಗಿದ್ದು ಆತನ ಸೈನಿಕ ದುರ್ಬಲನಾಗಿದ್ದರೂ ಆತ ಸಿಂಹದಂತೆ ಹೋರಾಡುತ್ತಾನೆ. ಆದರೆ ಸೈನಿಕ ಶೂರನಾಗಿದ್ದರೂ ರಾಜ ದುರ್ಬಲನಾಗಿದ್ದರೆ ಆತ ಹೋರಾಡಲು ಹಿಂಜರಿದು ಯುದ್ಧವನ್ನು ಸೋಲುತ್ತಾನೆ. ಇಂತಹುದೇ ಪರಿಸ್ಥಿತಿ ಇದೀಗ ಪಾಕಿಸ್ತಾನಕ್ಕೆ ಬಂದಿದ್ದು, ಭಾರತದ ದಾಳಿಯ ನಂತರ ಪಾಕಿಸ್ತಾನ ಸೇನೆ ತುಂಬಾ ನಿರುತ್ಸಾಹಗೊಂಡಿದೆ.

ಗಡಿಯಲ್ಲಿ ನಿಂತು ನಮ್ಮ ಪರವಾಗಿ ಯುದ್ಧ ಮಾಡುತ್ತಿರುವ ನಮ್ಮ ಸೈನಿಕರಿಗೆ ನೈತಿಕ ಧೈರ್ಯ ತುಂಬಬೇಕಿದೆ. ಆದರೆ ಈ ಕೆಲಸವನ್ನು ಪ್ರಧಾನಿ ಶಹಭಾಷ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಮಾಡುತ್ತಿಲ್ಲಾ. ಅವರೇ ತಲೆಮರೆಸಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ. ನಮ್ಮ ಓರ್ವ ಪ್ರಧಾನಿಯೇ, ನರೇಂದ್ರ ಮೋದಿ ಹೆಸರು ಹೇಳಲಾಗದೇ ಪರದಾಡುತ್ತಿರುವಾಗ ನಮ್ಮ ಸೈನಿಕರು ಹೇಗೆ ಧೈರ್ಯದಿಂದ ಯುದ್ಧ ಮಾಡಲು ಸಾಧ್ಯವೇ ಎಂದು ಸಂಸದ ಶಾಹಿದ್ ಅಹ್ಮದ್ ಪ್ರಶ್ನಿಸಿದ್ದಾರೆ.

ಮೈಸೂರು ಮಿತ್ರ

ದೇಶಕ್ಕೆ ಜಯ, ಸೈನಿಕರಿಗೆ ಬಲಕ್ಕಾಗಿ ವಿಶೇಷ ಪೂಜೆ



'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಭಾರತಕ್ಕೆ ಯಶಸು ಸಿಗಲಿ ಎಂದು ಮತ್ತು ಸೈನಿಕರಿಗೆ ಮತ್ತಷ್ಟು ಬಲಕ್ಕೆ ಪ್ರಾರ್ಥಿಸಿ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮೈಸೂರು, ಮೇ9(ಜಿಎ)-'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯಲ್ಲಿ ಭಾರತಕ್ಕೆ ಜಯ ಸೈನಿಕರಿಗೆ ಬಲ ದೊರಕಲೆಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ವಿಶೇಷ ಪೂಜೆ ಸಲ್ಲಿಸಿದರು.

ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಹನುಮಾನ್ ಚಾಲೀಸ ಪಠಣ ಮಾಡಿದರು. ಪಾಕಿಸ್ತಾನದ ವಿರುದ್ಧ ಹೋರಾಡುತ್ತಿರುವ ನಮ್ಮ ಸೈನಿಕರಿಗೆ ಶಕ್ತಿ ಬರಲಿ ಎಂದು ಇಡುಗಾಯಿ ಒಡೆದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು. ಯುದ್ಧದಲ್ಲಿ ದುಷ್ಟ ಶಕ್ತಿ ಸಂಹಾರವಾಗಲಿ. ನಮ್ಮ ಸೈನಿಕರಿಗೆ ರಾಮನ ಆಶೀರ್ವಾದ ಹನುಮನ ಶಕ್ತಿ ಸಿಗಲಿ ಎಂದು ಜೈಕಾರ ಹಾಕಿ ಪ್ರಾರ್ಥಿಸಿದರು.

ಪೂಜೆ ಸಲ್ಲಿಸಿದ ಬಳಿಕ ಮಾಧ್ಯಮಗಳೊಂದಿಗೆ ಯದುವೀರ್ ಮಾತನಾಡಿ, ಭಾರತೀಯ ಸೇನೆಯು ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ಮುಂದುವರಿಸಿದೆ. ಈ ಕಾರ್ಯಾಚರಣೆಯಲ್ಲಿ ನಮ್ಮ ಸೈನಿಕರ ಎಲ್ಲಾ ಪ್ರಯತ್ನ ಯಶಸ್ವಿಯಾಗಲೆಂದು ವಿಶೇಷ ಪೂಜೆ ಸಲ್ಲಿಸಿದ್ದೇವೆ. ಸದ್ಯದ ಪರಿಸ್ಥಿತಿ ಅವಲೋಕಿಸಿದರೆ ಯುದ್ಧ ಎದುರಾಗುವಂತಿದೆ. ದೇಶಾದ್ಯಂತ ಸಮಸ್ತ ಜನರು ನಮ್ಮ ಸೈನಿಕರ ಪರ ಪ್ರಾರ್ಥಿಸುತ್ತಿದ್ದಾರೆ. ಯುದ್ಧದ ಸಮಯದಲ್ಲಿ ನಮ್ಮ ಸೈನಿಕರ ಎಲ್ಲಾ ಕಾರ್ಯಾಚರಣೆಗಳು ಯಶಸ್ವಿಯಾಗಬೇಕು ಭಾರತದ ಗಡಿ ಹಾಗೂ ಸಮಸ್ತ ಭಾರತೀಯರ ರಕ್ಷಣೆ ಆಗಬೇಕು ಎಂದು ಆಶಿಸಿದರು.

ಈ ವೇಳೆ ಬಿಜೆಪಿ ಮುಖಂಡರಾದ ಗಿರಿಧರ್, ಬಿ.ವಿ.ಮಂಜುನಾಥ್, ರಾಕೇಶ್, ಕಿರಣ್‌ಗೌಡ, ಶುಶ್ರುತ್‌ಗೌಡ, ಬಿ.ಎಂ.ರಘು, ದಿನೇಶ್, ಸುಬ್ಬಯ್ಯ, ಸೋಮಶೇಖರ್ ರಾಜ್, ಅಶೋಕ್, ಜಯಣ್ಣ, ಯೋಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದಾರ್ಥನಗರದ ಸಂಚಾರ ಠಾಣೆಗೆ 'ಕುರುಬಾರಹಳ್ಳಿ ಸಂಚಾರ ಠಾಣೆ' ಹೆಸರಿಡಲು ಆಗ್ರಹಿಸಿ ಸಹಿ ಸಂಗ್ರಹ



ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆಯ ಹೆಸರನ್ನು ಕುರುಬಾರಹಳ್ಳಿ ಸಂಚಾರ ಪೊಲೀಸ್ ಠಾಣೆ ಎಂದು ಹೆಸರಿಡಲು ಆಗ್ರಹಿಸಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮೈಸೂರು, ಮೇ9(ಜಿಎ)- ಮೈಸೂರಿನ ಕುರುಬಾರಹಳ್ಳಿಯಲ್ಲಿರುವ ಸಿದ್ದಾರ್ಥನಗರ ಸಂಚಾರ ಪೊಲೀಸ್ ಠಾಣೆಗೆ ಕುರುಬಾರಹಳ್ಳಿ ಸಂಚಾರ ಪೊಲೀಸ್ ಠಾಣೆ ಎಂದು ಹೆಸರಿಡಲು ಆಗ್ರಹಿಸಿ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ವತಿಯಿಂದ ನಡೆದ ಸಹಿ ಸಂಗ್ರಹ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಾರ್ವಜನಿಕರು ಸ್ವಯಂಪ್ರೇರಿತವಾಗಿ ಬಂದು ಸಹಿ ಮಾಡಿ ಅಭಿಯಾನಕ್ಕೆ ಸಾಥ್ ನೀಡಿದರು.

ಜಿಲ್ಲಾಧ್ಯಕ್ಷ ಪುನೀತ್ ರಾಯಣ್ಣ ಮಾತನಾಡಿ, ಕುರುಬಾರಹಳ್ಳಿ ಸುತ್ತಮುತ್ತಲಿರುವ ವಿವಿಧ ಬಡಾವಣೆಗಳು ಕೆಲವೇ ವರ್ಷಗಳಲ್ಲಿ ನಿರ್ಮಾಣವಾದಂತವು. ಆದರೆ, ಕುರುಬಾರಹಳ್ಳಿಗೆ ಒಂದು ಇತಿಹಾಸವಿದೆ. ಈ ಹಿನ್ನೆಲೆಯಲ್ಲಿ ಕುರುಬಾರಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ಸಿದ್ದಾರ್ಥನಗರ ಸಂಚಾರ ಪೊಲೀಸ್ ಠಾಣೆಯ ಹೆಸರನ್ನು ಕುರುಬಾರಹಳ್ಳಿ ಸಂಚಾರ ಪೊಲೀಸ್ ಠಾಣೆ ಎಂದು ಬದಲಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾಜಿ ಪಾಲಿಕೆ ಸದಸ್ಯ ರಮೇಶ್, ಪರಮೇಶ್, ಕೃಷ್ಣ, ಸಂಜಯ್, ಮಹದೇವ್, ಪುನೀತ್ ಕುಮಾರ್, ಮಹಿಳಾಧ್ಯಕ್ಷೆ ಜಯ ಮತ್ತಿತರರು ಉಪಸ್ಥಿತರಿದ್ದರು.

ಇಂದು ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಅಮ್ಮನವರ ಉತ್ಸವ ಮೂರ್ತಿ ಮೆರವಣಿಗೆ

ಮೈಸೂರು, ಮೇ.9(ಎಂಟಿವೈ)- ಮೈಸೂರಲ್ಲಿ ನಾಳೆ(ಮೇ.10) ಸಂಜೆ 4.30ಕ್ಕೆ ಶ್ರೀ ವಾಸವಿ ಕನ್ನಿಕಾಪರಮೇಶ್ವರಿ ಅಮ್ಮನವರ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಏರ್ಪಡಿಸಲಾಗಿದೆ ಎಂದು ವಾಸವಿ ಉತ್ಸವ ಸಮಿತಿ ಅಧ್ಯಕ್ಷ ಗೋಪಿನಾಥ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಸವಿ ಯುವಜನ ಸಂಘ, ವಾಸವಿ ಉತ್ಸವ ಸಮಿತಿ ಸಹಯೋಗದಲ್ಲಿ ಶ್ರೀ ವಾಸವಿ ಕನ್ನಿಕಾಪರಮೇಶ್ವರಿ ಅಮ್ಮನವರ ಜಯಂತಿ ಹಿನ್ನೆಲೆಯಲ್ಲಿ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆಲಮ್ಮನ ಛತ್ರದವರೆಗೆ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ವಿವಿಧ ಜಾನಪದ ಕಲಾತಂಡಗಳೊಂದಿಗೆ ವಾಸವಿ ಕನ್ನಿಕಾಪರಮೇಶ್ವರಿ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಗುತ್ತಿದೆ.

ಕಾರ್ಯಕ್ರಮದ ಅಂಗವಾಗಿ ನಾಳೆ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನದವರೆಗೆ ಆಲಮ್ಮ ಛತ್ರದಲ್ಲಿ ಆರ್ಯವೈಶ್ಯ ಸಮುದಾಯ ಹೆಣ್ಣು ಮಕ್ಕಳಿಗಾಗಿ ತವರೂರ ಸಮ್ಮಿಲನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮೈಸೂರಿಂದ ಬೇರೆ ಊರಿಗೆ ವಿವಾಹವಾಗಿ ಹೋಗಿರುವ ಸಮುದಾಯ ಹೆಣ್ಣು ಮಕ್ಕಳಿಗೆ ವಿವಿಧ ಮನರಂಜನಾ ಕಾರ್ಯಕ್ರಮದೊಂದಿಗೆ ಕೌಟುಂಬಿಕ ಸಮತೋಲನ ಕಾಪಾಡಿಕೊಳ್ಳುವ ಕುರಿತಂತೆ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಾಸವಿ ಉತ್ಸವ ಸಮಿತಿ ಉಪಾಧ್ಯಕ್ಷ ನಾಗೇಂದ್ರ ಶೆಟ್ಟಿ, ಸಹ ಕಾರ್ಯದರ್ಶಿ ಲಕ್ಷ್ಮೀ ದಿನೇಶ್, ಸಂಚಾಲಕ ನಾಗೇಶ್, ಹೆಚ್.ವಿ. ರವಿಕುಮಾರ್ ಸುರೇಶ್ ಇದ್ದರು.

ಆಪರೇಷನ್ ಸಿಂಧೂರ್ ಹಿನ್ನೆಲೆ

ಕೆಆರ್‌ಎಸ್, ಹಾರಂಗಿ ಅಣೆಕಟ್ಟೆಗಳಲ್ಲಿ ಕಟ್ಟೆಚ್ಚರ





ಶ್ರೀರಂಗಪಟ್ಟಣ ತಾಲೂಕು ಕೆಆರ್‌ಎಸ್ ಅಣೆಕಟ್ಟೆ ಬಳಿ ಶಸ್ತ್ರಸಜ್ಜಿತ ಪೊಲೀಸರ ನಿಯೋಜನೆ (ಎಡಚಿತ್ರ) ಹಾರಂಗಿ ಅಣೆಕಟ್ಟೆಯಲ್ಲಿ ಭದ್ರತೆ ಸಂಬಂಧ ಸಿಬ್ಬಂದಿಗಳಿಗೆ ಹಿರಿಯ ಪೊಲೀಸ್ ಅಧಿಕಾರಿ ಸೂಚನೆ ನೀಡುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ 9(ಆರ್‌ಕೆ)- ಭಾರತೀಯ ಸೈನ್ಯವು 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಮುಂದುವರೆಸಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಶ್ರೀರಂಗಪಟ್ಟಣ ತಾಲೂಕು ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆ ಹಾಗೂ ಕೊಡಗಿನ ಹಾರಂಗಿ ಅಣೆಕಟ್ಟೆ ಸೇರಿದಂತೆ ರಾಜ್ಯದ 17 ಪ್ರಮುಖ ಅಣೆಕಟ್ಟೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ, ನುಗು ಮತ್ತು ತಾರಕ ಜಲಾಶಯಗಳಿಗೆ ಹೆಚ್ಚುವರಿ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ, ದಿನದ 24 ಗಂಟೆಯೂ ಭದ್ರತೆ ಒದಗಿಸಲಾಗಿದೆ. ಕೆಆರ್‌ಎಸ್ ಅಣೆಕಟ್ಟೆಯಲ್ಲಿ 2016ರಿಂದಲೇ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆಐಎಸ್‌ಎಫ್)ಯನ್ನು ನಿಯೋಜಿಸಲಾಗಿದ್ದು, ಸಿಸಿಟಿವಿ ಸರ್ವೆಲೆನ್ಸ್ ಕ್ಯಾಮರಾಗಳನ್ನು ಅಳವಡಿಸಿ ಕಟ್ಟೆಚ್ಚರ ವಹಿಸಲಾಗಿದೆಯಾದರೂ, ಪಾಕಿಸ್ತಾನದ ಉಗ್ರರ ತಾಣಗಳ ಮೇಲೆ 'ಆಪರೇಷನ್ ಸಿಂಧೂರ್' ದಾಳಿಯನ್ನು ಭಾರತದ ಸೇನೆ ಮುಂದುವರಿಸಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚುವರಿ ಶಸ್ತ್ರಸಜ್ಜಿತ ಪೊಲೀಸರನ್ನು ನಿಯೋಜಿಸಿ ವಿಶೇಷ ಭದ್ರತೆ ಕಲ್ಪಿಸಲಾಗಿದೆ.

ಬೃಂದಾವನ ಪ್ರವೇಶ ದ್ವಾರ, ಟೋಲ್ ಗೇಟ್ ಬಳಿ ಸಿಬ್ಬಂದಿಗಳನ್ನು ನಿಯೋಜಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಭದ್ರತಾ ಜವಾಬ್ದಾರಿ ನಿರ್ವಹಿಸುವಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸೂಚಿಸಿದ್ದು, ಅಣೆಕಟ್ಟೆ ಸುರಕ್ಷತೆ ಬಗ್ಗೆ ಗಮನಹರಿಸುತ್ತಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆ, ಬೃಂದಾವನ, ಸುತ್ತಲಿನ ಪ್ರದೇಶದಲ್ಲಿ ಡ್ರೋಣ್ ಹಾರಾಟ ನಿಷೇಧಿಸಲಾಗಿದ್ದು, ಭೇಟಿ ನೀಡಲಿರುವ ಪ್ರವಾಸಿಗರ ವಾಹನಗಳನ್ನು ಟೋಲ್ ಗೇಟ್ ಬಳಿ ಪರೀಶೀಲಿಸಿ ಪ್ರವೇಶ ದ್ವಾರದಲ್ಲಿ ಪ್ರವಾಸಿಗರನ್ನು ಹ್ಯಾಂಡ್ ಮೆಟಲ್ ಡಿಟೆಕ್ಟರ್ ಮತ್ತು ಮೆಟಲ್ ಡೋರ್ ಡಿಟೆಕ್ಟರ್‌ನಿಂದ ಶೋಧ ನಡೆಸಲಾಗುತ್ತಿದೆ.

ಈ ಸಂಬಂಧ ಮಾಹಿತಿ ನೀಡಿರುವ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆಐಎಸ್‌ಎಫ್) ಅಸಿಸ್ಟೆಂಟ್ ಕಮೀಷ್ನರ್, ಇತ್ತೀಚಿನ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೃಷ್ಣರಾಜ ಅಣೆಕಟ್ಟೆಗೆ ಭಾರೀ ಭದ್ರತೆ ಒದಗಿಸಿ ದಿನದ 24 ಗಂಟೆಯೂ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದ್ದಾರೆ. ಜಲಾಶಯದ ಹಿನ್ನೀರು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಪೊಲೀಸ್ ಅಧಿಕಾರಿಗಳು ಎಚ್ಚರ ವಹಿಸಿದ್ದಾರೆ ಎಂದು ತಿಳಿಸಿದರು.

ಅದೇ ರೀತಿ ಕೊಡಗು ಜಿಲ್ಲೆಯ ಹಾರಂಗಿ ಅಣೆಕಟ್ಟೆಗೂ ಪೂರ್ಣ ಪ್ರಮಾಣದ ಭದ್ರತೆ ಒದಗಿಸಲಾಗಿದೆ. ಅಣೆಕಟ್ಟೆಯೂ ಸೇರಿದಂತೆ ಪ್ರಮುಖ ಸೂಕ್ಷ್ಮ ಪ್ರದೇಶಗಳಲ್ಲಿ 25 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿರುವುದಲ್ಲದೇ, ಇಂಡಿಯನ್ ಸ್ಮಾಲ್ ಆರ್ಮ್ಸ್ ಸಿಸ್ಟಂ (ಐಎನ್‌ಎಸ್‌ಎಎಸ್) ಕಾರ್ಯಾಚರಣೆ ನಡೆಸುತ್ತಿದೆ.

ಹಾರಂಗಿ ಚೀಫ್ ಇಂಜಿನಿಯರ್ ರಘುಪತಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪುಟ್ಟಸ್ವಾಮಿ ಹಾಗೂ ಇತರ ಅಧಿಕಾರಿಗಳು ಜಲಾಶಯಗಳಲ್ಲಿ ಪರಿಶೀಲನೆ ನಡೆಸಿ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಿದ್ದಾರೆ.

ನಾಳೆ ಕೆಆರ್‌ಎಸ್ ಭದ್ರತಾ ಕವಾಯತು

ಬೃಂದಾವನದಲ್ಲಿ ಇಂದು ತಾಲೀಮು



ಮೈಸೂರು, ಮೇ 9(ಆರ್‌ಕೆ)- ಭಾರತೀಯ ಸೇನೆಯ 'ಆಪರೇಷನ್ ಸಿಂಧೂರ್' ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿಯಲ್ಲಿ ನಾಗರಿಕರ ರಕ್ಷಣೆಗಾಗಿ ಮೇ 11ರಂದು ಸಂಜೆ 4 ಗಂಟೆಗೆ ಕೃಷ್ಣರಾಜಸಾಗರ (ಕೆಆರ್‌ಎಸ್)ದ ಬೃಂದಾವನ ಗಾರ್ಡನ್‌ನಲ್ಲಿ ಅಣುಕು ಕವಾಯತು ನಡೆಸಲಾಗುವುದು.

ಕೇಂದ್ರ ರಕ್ಷಣಾ ಸಚಿವಾಲಯದ ನಿರ್ದೇಶನದಂತೆ ರಾಜ್ಯ ಸರ್ಕಾರವು ಎಲ್ಲಾ ಜಿಲ್ಲೆಗಳಲ್ಲಿ ಸಾರ್ವಜನಿಕರ ರಕ್ಷಣೆಗಾಗಿ ಮಾಕ್ ಡ್ರಿಲ್ ನಡೆಸಿ ಜನರಲ್ಲಿ ಆತ್ಮವಿಶ್ವಾಸ ಮೂಡಿಸುವುದು ಹಾಗೂ ಅಧಿಕಾರಿಗಳಲ್ಲಿ ಸ್ಥೈರ್ಯ ವೃದ್ಧಿಸುವ ದೃಷ್ಟಿಯಿಂದ ಶ್ರೀರಂಗಪಟ್ಟಣ ತಾಲೂಕು ಕೆಆರ್‌ಎಸ್‌ನಲ್ಲಿ ಅಣುಕು ತಾಲೀಮಿಗೆ ಮಂಡ್ಯ ಜಿಲ್ಲಾಡಳಿತ ಸಿದ್ಧತೆ ನಡೆಸಿದೆ.

ಭಾನುವಾರ ಸಂಜೆ 4 ಗಂಟೆಗೆ ಬೃಂದಾವನದಲ್ಲಿ ನಡೆಯಲಿರುವ ರಕ್ಷಣಾ ಕಾರ್ಯದ ಅಣಕು ತಾಲೀಮಿನಲ್ಲಿ ಪೊಲೀಸ್, ಅಗ್ನಿಶಾಮಕ, ಆರೋಗ್ಯ ಇಲಾಖೆ, ಎನ್‌ಸಿಸಿ, ಕೆಎಸ್‌ಐಎಸ್‌ಎಫ್, ಕಾವೇರಿ ನೀರಾವರಿ ನಿಗಮ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಲಿದ್ದಾರೆ. ನಾಳೆ (ಮೇ 10) ಸಂಜೆ 4 ಗಂಟೆಗೆ ಮಾಕ್ ಡ್ರಿಲ್‌ನ ಪೂರ್ವಭಾವಿ ತಾಲೀಮು ನಡೆಯಲಿದ್ದು, ಅದಕ್ಕಾಗಿ ಸರ್ವ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಮಾಕ್ ಡ್ರಿಲ್ ನೋಡಲ್ ಅಧಿಕಾರಿಗಳಾಗಿದ್ದು, ಕಂಟ್ರೋಲ್ ರೂಂ ವ್ಯವಸ್ಥೆ ಮಾಡಿಕೊಂಡಿದ್ದಾರೆ.


ಪ್ರತಿಭಾನ್ವಿತ ವಿದ್ಯಾರ್ಥಿನಿಗೆ ಸನ್ಮಾನ...



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 616 ಅಂಕ ಪಡೆದ ಕೆ.ಜಿ.ಕೊಪ್ಪಲಿನ ಶಿವಕುಮಾರ್-ಪೂರ್ಣಿಮಾ ದಂಪತಿ ಪುತ್ರಿ ಪೂರ್ವಿಕ ಅವರನ್ನು ಕೆ.ಜಿ.ಕೊಪ್ಪಲು, ಜಯನಗರ ಗ್ರಾಮದ ಯಜಮಾನರು, ಮುಖಂಡರು ಸನ್ಮಾನಿಸಿದರು. ಈ ವೇಳೆ ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಬಿಸಿಲು ಮಾರಮ್ಮನವರ ಗುಡ್ಡಪ್ಪ ಡಿ.ನಿಂಗಪ್ಪ, ಗರಡಿ ಕಾರ್ಯದರ್ಶಿ ಎಲ್.ಚಂದ್ರು, ಕಾಳ್ ಬೋರಪ್ಪನವರ ಬೋರಣ್ಣ, ಗದ್ದಯ್ಯನ ರಂಗಪ್ಪ, ಕಂಡೆಯ್ಯನ ಚನ್ನಪ್ಪ, ಬೋರಲಿಂಗಣ್ಣ, ಎಂಸಿಸಿ ಶಂಬಣ್ಣ, ಕೃಷ್ಣ, ನಾಗಣ್ಣ, ಮೇರಪ್ಪನವರ ಪ್ರತಾಪ್, ಶ್ರೀನಿವಾಸು, ಚಾಮುಂಡಿ, ಚಂದು, ಟಿ.ರವಿಗೌಡ, ಸತೀಶ್, ಈಶ್ವರ್, ರೈಲ್ವೆ ಕೃಷ್ಣಪ್ಪ, ಮರ್ಚಪ್ಪನವರ ಮಹಾದೇವ ಇನ್ನಿತರರಿದ್ದರು.

ಸಿನಿಮಾ ರಾಜಕೀಯ ಸೇರಿ ಪ್ರತಿ ಕ್ಷೇತ್ರದಲ್ಲಿ ಅವಕಾಶಕ್ಕಾಗಿ ಹೆಣ್ಣು ದೇಹ ಅರ್ಪಿಸಬೇಕಿದೆ!

- ಸಾಂಸ್ಕೃತಿಕ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಗಂಭೀರ ನುಡಿ; ಬೇಸರ
- ಬಣ್ಣದ ಲೋಕದ ಅವಕಾಶಕ್ಕೆ ಮಹಿಳೆ ಬ್ಯೂಟಿಪಾರ್ಲರ್ ಹೊಕ್ಕಬೇಕಿದೆ; ವಿಷಾದ



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಶುಕ್ರವಾರ 'ಪಿತೃ ಸತ್ತೆಯ ಬಹುರೂಪಕ- ಮಹಿಳೆಯರ ಕಥನಗಳ ಸಮಾಜೋ ಸಾಂಸ್ಕೃತಿಕ ಅಧ್ಯಯನ' ಕೃತಿಯನ್ನು ಸಾಂಸ್ಕೃತಿಕ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಿದರು.

ಮೈಸೂರು, ಮೇ.9(ಬಿಎಲ್‌ಯು)- ಸಿನಿಮಾ, ರಾಜಕೀಯ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಹೆಣ್ಣು ತನ್ನ ದೇಹ ಅರ್ಪಿಸಿ ಅವಕಾಶ ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಾಂಸ್ಕೃತಿಕ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು 'ಪಿತೃಸತ್ತೆಯ ಬಹುರೂಪಕ- ಮಹಿಳೆಯರ ಕಥನಗಳ ಸಮಾಜೋ ಸಾಂಸ್ಕೃತಿಕ ಅಧ್ಯಯನ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಪ್ರಮುಖವಾಗಿ ಗ್ಲಾಮರ್ ಮತ್ತು ರಾಜಕೀಯ ಕ್ಷೇತ್ರದಲ್ಲಿ ಹೆಣ್ಣು ತಾನು ಮೇಲೆ ಬರಬೇಕಾದರೆ ಅನಿವಾರ್ಯವಾಗಿ ಇಂತಹ ತೀರ್ಮಾನ ಕೈಗೊಳ್ಳಬೇಕಾದ ಸ್ಥಿತಿಗೆ ತಂದಿಟ್ಟಿದ್ದಾರೆ ಎಂದರು.

ಸ್ವತಂತ್ರವಾಗಿ ಹಾರಾಡಲು ಬಿಡದೆ ಹೆಣ್ಣಿಗೆ ರೆಕ್ಕೆ ಕತ್ತರಿಸಿ ನೀನು ಹೀಗೆಯೇ ಬದುಕಬೇಕು ಎಂದು ಚೌಕಟ್ಟು ನಿರ್ಮಿಸಿದ್ದಾರೆ. ಮಹಿಳೆ ಇಂತಹ ಲೈಂಗಿಕ ದೌರ್ಜನ್ಯವನ್ನು ಬಹಳ ಹಿಂದಿನಿಂದಲೂ ಅನುಭವಿಸಿಕೊಂಡು ಬರುತ್ತಿದ್ದಾಳೆ. ಆದರೆ ಆಧುನಿಕತೆಯ ಈ ಸನ್ನಿವೇಶದಲ್ಲಿ ಹೆಣ್ಣಿನ ದೌರ್ಜನ್ಯ ಮತ್ತಷ್ಟು ಹೆಚ್ಚಾಗಿದೆ ಎಂದು ಡಾ. ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ಹೆಣ್ಣನ್ನು ಭೋಗದ ಸರಕೆಂದು ಬಿಂಬಿಸಲಾಗಿದೆ. ಜಾಗತೀಕರಣದ ತರುವಾಯ ಇಂತಹ ಸನ್ನಿವೇಶಗಳು ಹೆಚ್ಚಾಗಿ ಸೃಷ್ಟಿಯಾಗಿದೆ. ಸೋಷಿಯಲ್ ಮೀಡಿಯಾ, ವಿದ್ಯುನ್ಮಾನ ಮೀಡಿಯಾ ಸೌಂದರ್ಯ ವತಿಯರನ್ನು ಸೃಷ್ಟಿಸುತ್ತಿದೆ. ಹೆಣ್ಣನ್ನು ಆಕರ್ಷಿಸುವ ಈ ಕ್ಷೇತ್ರ ರಾಜೀ ಮಾಡಿಕೊಳ್ಳುವ ಅನಿವಾರ್ಯ ಸ್ಥಿತಿಗೆ ತಂದಿಟ್ಟಿದೆ. ಇಲ್ಲದಿದ್ದರೆ ಅವಕಾಶ ಸಿಗುವುದಿಲ್ಲ. ಬೆಳವಣಿಗೆ ಹೊಂದಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ಸಿನಿಮಾ ಅವಕಾಶ ಪಡೆಯಲು ಮಹಿಳೆಯರು ಬ್ಯೂಟಿ ಪಾರ್ಲರ್‌ಗಳಿಗೆ ಆಕರ್ಷಿತರಾಗುತ್ತಿದ್ದಾರೆ. ಇದು ಹೆಣ್ಣಿನ ಪರಿಸ್ಥಿತಿಯನ್ನು ಅನಾವರಣಗೊಳಿಸುತ್ತದೆ ಎಂದು ತಿಳಿಸಿದರು.

ಅಮೇರಿಕಾದಲ್ಲಿ ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರಿದ್ದು, ಕಾಸ್ಮೆಟಿಕ್ಸ್‌ಗಾಗಿ ಹಣ ಸುರಿಯುತ್ತಾರೆ. ಅಲ್ಲಿ ಕಾಸ್ಮೆಟಿಕ್ಸ್‌ಗಾಗಿ ಮಾಡುವ ವೆಚ್ಚ ಆಫ್ರಿಕಾ ದೇಶದ ಆಯವ್ಯಯಕ್ಕೆ ಸಮನಾಗಿದೆ. ಅಮೇರಿಕಾ ವಿಶ್ವದಲ್ಲೇ ಅಗ್ರಸ್ಥಾನದಲ್ಲಿರುವ ರಾಷ್ಟ್ರ. ಅಲ್ಲಿ ಪುರುಷ ಪ್ರಾಧಾನ್ಯತೆ ಸಮಾಜ ಇದ್ದು, ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ. ದೇಶದ ಪಾಲಿಸಿಗಳನ್ನು ಮಾಡುವಲ್ಲಿ ಮಹಿಳೆಯರ ಪಾತ್ರ ಇಲ್ಲವೇ ಇಲ್ಲ. ಇಲ್ಲಿ ತನಕ ಅಮೇರಿಕಾದಲ್ಲಿ ಮಹಿಳೆಯೊಬ್ಬರು ರಾಷ್ಟ್ರಾಧ್ಯಕ್ಷರಾಗಲು ಸಾಧ್ಯವಾಗಿಲ್ಲ ಎಂದರು.

ಮಹಿಳೆಯರಿಗಿರುವ ಸ್ವಾತಂತ್ರ್ಯ ಕುರಿತಂತೆ ಅಮೇರಿಕಾಗೆ ಹೋಲಿಸಿದರೆ ಭಾರತದ ಸ್ಥಿತಿ ಸ್ವಲ್ಪ ಚೆನ್ನಾಗಿದೆ ಎನ್ನಬಹುದು. ಭಾರತದಲ್ಲಿ ಪ್ರಧಾನಮಂತ್ರಿಯಿಂದ ರಾಷ್ಟ್ರಾಧ್ಯಕ್ಷರವರೆಗೆ ಮಹಿಳೆಯರು ಸ್ಥಾನ ಪಡೆದಿದ್ದಾರೆ ಎಂದರು.

ಮಗುವಿಗೆ ತಂದೆ ಹೆಸರು ಮುಖ್ಯವಾಗಿರುತ್ತದೆ. ಪ್ರತಿ ದಾಖಲಾತಿಗಳಲ್ಲಿ ತಂದೆ ಹೆಸರು ಕೇಳುತ್ತಾರೆಯೇ ಹೊರತು, ತಾಯಿ ಕೇಳುವುದಿಲ್ಲ. ಇಂತಹ ವ್ಯವಸ್ಥೆ ದೂರವಾಗಿ ತಂದೆಯಂತೆ ತಾಯಿಗೂ ಸಮಾನ ಪ್ರಾಮುಖ್ಯತೆ ನೀಡಬೇಕು ಎಂದರು.

ಅದೇನೆ ಆಗಲಿ, ವಿಶ್ವದಲ್ಲಿ ಇಂದು ಬಹಳಷ್ಟು ರೀತಿಯ ಅಭಿವೃದ್ಧಿಯಾಗಿದ್ದರೂ ಮಹಿಳೆಯರ ಬವಣೆ ಮಾತ್ರ ಇನ್ನೂ ತಪ್ಪಿಲ್ಲ. ಮಹಿಳೆಯರ ಭಾವನಾತ್ಮಕ ತೊಳಲಾಟ, ಮಾನಸಿಕ ಮತ್ತು ದೈಹಿಕ ಹಿಂಸೆ ಹೆಚ್ಚಾಗಿದೆ. ವಿದ್ಯಾರ್ಹತೆ ಹೊಂದಿಲ್ಲದವರು ಮತ್ತಷ್ಟು ಸಂಕಷ್ಟ ಅನುಭಿಸುತ್ತಾರೆ ಎಂದು ಡಾ. ಬಂಜಗೆರೆ ಜಯಪ್ರಕಾಶ್ ಹೇಳಿದರು.

ಹೆಣ್ಣು ಡಿಸಿಯೇ ಆಗಲಿ, ಪ್ರಧಾನಮಂತ್ರಿಯೇ ಆಗಲಿ ಗಂಡನಿಂದ ಕಪಾಳಕ್ಕೆ ಏಟು ತಿಂದಿರುತ್ತಾಳೆ!

ಜಿಲ್ಲಾಧಿಕಾರಿಯಿಂದ ಪ್ರಧಾನಮಂತ್ರಿ ತನಕ ಹೆಣ್ಣು ಉನ್ನತ ಅಧಿಕಾರ ಹೊಂದಿದ್ದರೂ ಗಂಡನಿಂದ ಒಂದಲ್ಲ ಒಂದು ಸಲ ಕಪಾಳ ಮೋಕ್ಷ ಮಾಡಿಸಿಕೊಂಡಿರುತ್ತಾಳೆ ಎಂದು ಡಾ.ಬಂಜಗೆರೆ ಜಯಪ್ರಕಾಶ್ ಹೇಳಿದರು.

ಇಡೀ ವಿಶ್ವದಲ್ಲಿ ಪ್ರತಿ ಹೆಣ್ಣು ಪತಿ ಅಥವಾ ಪ್ರೇಮಿಯಿಂದ ಕಪಾಳಕ್ಕೆ ಏಟು ತಿಂದಿರುತ್ತಾಳೆ ಎಂದು ಅಧ್ಯಯನದ ವರದಿ ಹೇಳಿದೆ ಎಂದು ತಿಳಿಸಿದರು.

ಇದು ಪುರುಷ ಪ್ರಧಾನ ಸಮಾಜವಾಗಿದೆ. ಕುಟುಂಬದಲ್ಲಿ ಪತ್ನಿ ಜಿಲ್ಲಾಧಿಕಾರಿಯಾಗಲಿ ಅಥವಾ ಪ್ರಧಾನಮಂತ್ರಿಯೇ ಆಗಲಿ, ಆತನಿಗೆ ಆಕೆ ಪತ್ನಿಯೆ ಆಗಿರುತ್ತಾಳೆ. ಹೊರಗೆ ಹೆಣ್ಣು ಉನ್ನತ ಅಧಿಕಾರದಲ್ಲಿದ್ದರೂ ಮನೆಯಲ್ಲಿ ಮಾತ್ರ ಗಂಡನದೆ ಪಾರುಪತ್ಯವಿರುತ್ತದೆ ಎಂದರು. ಈ ಹಿನ್ನೆಲೆ ಯಾವುದಾದರೊಂದು ಸಂದರ್ಭದ ಕೌಟುಂಬಿಕ ವಿರಸದ ವೇಳೆ ಪತಿ ಪತ್ನಿಗೆ ಕಪಾಳ ಮೋಕ್ಷ ಮಾಡಿರುತ್ತಾನೆ. ಇದು ಜಿಲ್ಲಾಧಿಕಾರಿಯಿಂದ ಹಿಡಿದು ಪ್ರಧಾನಮಂತ್ರಿವರೆಗೆ ಇರುವ ಹೆಣ್ಣಿನ ಸರ್ವೆ ಸಾಮಾನ್ಯ ಬವಣೆ ಎಂದು ಡಾ.ಬಂಜಗೆರೆ ಜಯಪ್ರಕಾಶ್ ಹೇಳಿದರು.

ದೇಶ - ವಿದೇಶ

ಭಾರತ-ಪಾಕ್ ಯುದ್ಧದಲ್ಲಿ ಅಮೆರಿಕ ಭಾಗಿಯಾಗುವುದಿಲ್ಲ



ನ್ಯೂಯಾರ್ಕ್: ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ, ಯುದ್ಧದಲ್ಲಿ ಭಾಗಿಯಾಗುವುದಿಲ್ಲ, ಮೂಲಭೂತವಾಗಿ ನಮಗೂ ಇದಕ್ಕೂ ಸಂಬಂಧವಿಲ್ಲ ಎಂದು ಅಮೆರಿಕ ಹೇಳಿದೆ.

ಭಾರತ ಮತ್ತು ಪಾಕಿಸ್ತಾನವನ್ನು ನಾವು ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ, ಎರಡೂ ದೇಶಗಳಿಂದ ಪರಮಾಣು ದಾಳಿಯಾದರೆ ಉಂಟಾಗುವ ಸಮಸ್ಯೆಗಳ ಬಗ್ಗೆ ನಮಗೆ ಕಳವಳವಿದೆ. ಪರಮಾಣು ಶಸ್ತ್ರಸಜ್ಜಿತ ಉಭಯ ರಾಷ್ಟ್ರಗಳ ಉದ್ವಿಗ್ನತೆಯನ್ನು ಕಡಿಮೆ ಮಾಡಲು ನಾವು ಪ್ರಯತ್ನಿಸಬಹುದು ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಎರಡು ಪರಮಾಣು ಶಕ್ತಿಗಳು ಡಿಕ್ಕಿ ಹೊಡೆದು ಉಂಟಾಗುವ ದೊಡ್ಡ ಸಂಘರ್ಷದ ಬಗ್ಗೆ ನಾವು ಕಳವಳಗೊಂಡಿದ್ದೇವೆ. ಸಾಧ್ಯವಾದಷ್ಟು ಬೇಗ ಉದ್ವಿಗ್ನತೆ ಕುಗ್ಗಲಿ ಎಂದು ಅಮೆರಿಕ ಬಯಸುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಹೇಳಿದ್ದಾರೆ.

ಅಲ್ಪಸಂಖ್ಯಾತರ ಮೇಲೆ ಪಾಕ್ ದಾಳಿ: ಭಾರತದ ಬೆನ್ನಿಗೆ ನಿಂತ ಪೆಂಟಗನ್ ಮಾಜಿ ಅಧಿಕಾರಿ



ಪೆಂಟಗನ್: 'ಆಪರೇಷನ್' ಸಿಂಧೂರ್ ನಂತರ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಹೆಚ್ಚುತ್ತಿರುವ ನಡುವೆ ಪೆಂಟಗನ್‌ನ ಮಾಜಿ ಅಧಿಕಾರಿ ಮೈಕೆಲ್ ರೂಬಿನ್, ಪಹಲ್ಗಾಮ್ ಭಯೋತ್ಪಾದಕ ದಾಳಿಯ ಸೇಡು ತೀರಿಸಿಕೊಳ್ಳುವ ಭಾರತದ ಮಿಲಿಟರಿ ಪ್ರತಿಕ್ರಿಯೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಭಯೋತ್ಪಾದನೆಯನ್ನು ಪ್ರಾಯೋಜಿಸುವ ಪಾಕಿಸ್ತಾನದ ಪಾತ್ರವನ್ನು ಟೀಕಿಸಿರುವ ರೂಬಿನ್, ಲಷ್ಕರ್-ಎ-ತೈಬಾದಂತಹ ಪ್ರತ್ಯೇಕ ಭಯೋತ್ಪಾದಕ ಗುಂಪುಗಳನ್ನು ಅಮೆರಿಕ ಈ ಹಿಂದೆ ಗೊತ್ತುಪಡಿಸಿದೆ. ಆದರೆ ನಾವು ಪಾಕಿಸ್ತಾನವನ್ನೇ ಭಯೋತ್ಪಾದನೆಯ ರಾಜ್ಯ ಪ್ರಾಯೋಜಕ ಎಂದು ಗುರುತು ಮಾಡಿಲ್ಲ. ಆಕ್ಟೋಪಸ್‌ನ ಗ್ರಹಣಾಂಗಗಳನ್ನು ಗುರುತು ಮಾಡುವುದನ್ನು ನಿಲ್ಲಿಸಿ ಅದರ ಮುಖ್ಯಸ್ಥನೆಡೆಗೆ ಗುರಿ ಇಡುವ ಸಮಯ ಇದು. ಇಂತಹ ಸಂದರ್ಭದಲ್ಲಿ ಅಮೆರಿಕ ಭಾರತದ ಪರವಾಗಿ ನಿಲ್ಲಬೇಕು ಎಂದು ಅಮೇರಿಕನ್ ಎಂಟರ್‌ಪ್ರೈಸ್ ಇನ್‌ಸ್ಟಿಟ್ಯೂಟ್‌ನ ಹಿರಿಯ ಉದ್ಯೋಗಿಯೂ ಆಗಿರುವ ಮೈಕೆಲ್ ರೂಬಿನ್ ಹೇಳಿದ್ದಾರೆ.

ಭಯದಿಂದ ಕರಾಚಿ ಬಿಟ್ಟು ಭೂಗತ ಪಾತಕಿ ದಾವೂದ್ ಇಬ್ರಾಹಿಂ ಪರಾರಿ



ಕರಾಚಿ: ಭಾರತೀಯ ಸೇನೆಯ ಆಪರೇಷನ್ ಸಿಂಧೂರ್ ಮತ್ತು ಡ್ರೋನ್ ದಾಳಿಯ ನಂತರ ಪಾಕಿಸ್ತಾನಿ ನಾಗರಿಕರಲ್ಲಿ ಅಪಾರ ಭೀತಿ ಉಂಟಾಗಿದೆ ಪಾಕಿಸ್ತಾನದಲ್ಲಿ ಅಡಗಿಕೊಂಡಿರುವ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಕೂಡ ಭಾರತದ ದಾಳಿಯಿಂದ ಕಂಗೆಟ್ಟಿದ್ದಾನೆ. ಗುರುವಾರ ರಾತ್ರಿ ಭಾರತೀಯ ಸೇನೆಯು ಲಾಹೋರ್, ಕರಾಚಿ ಮತ್ತು ಇಸ್ಲಾಮಾಬಾದ್‌ನಲ್ಲಿ ಡ್ರೋನ್ ದಾಳಿ ನಡೆಸಿತು. ಆದ್ದರಿಂದ, ಪಾಕಿಸ್ತಾನವು ಭೂಗತ ಪಾತಕಿಗಳಾದ ದಾವೂದ್ ಇಬ್ರಾಹಿಂ, ಛೋಟಾ ಶಕೀಲ್ ಮತ್ತು ಮುನ್ನಾ ಜಿಂಗಾ ಅವರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದೆ.

ಕಳೆದ ಹಲವಾರು ವರ್ಷಗಳಿಂದ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಪಾಕಿಸ್ತಾನದಲ್ಲಿ ಇದ್ದಾನೆ ಎಂಬ ಮಾತು ಕೇಳಿಬರುತ್ತಿದೆ. ಪಾಕಿಸ್ತಾನ ಅವನನ್ನು ರಕ್ಷಿಸಿ ಕರಾಚಿಯಲ್ಲಿ ಸುರಕ್ಷಿತವಾಗಿರಿಸಿದೆ ಎಂದು ಹೇಳಲಾಗುತ್ತದೆ. ನಿನ್ನೆ ಇಸ್ಲಮಾಬಾದ್ ಮತ್ತು ಕರಾಚಿಯಲ್ಲೂ ಭಾರತ ದಾಳಿ ನಡೆಸಿದೆ. ಹೀಗಾಗಿ, ಭಯಗೊಂಡಿರುವ ದಾವೂದ್ ಇಬ್ರಾಹಿಂ ಕರಾಚಿ ಬಿಟ್ಟು ಬೇರೆ ಜಾಗಕ್ಕೆ ಪಲಾಯನ ಮಾಡಿದ್ದಾನೆ ಎನ್ನಲಾಗಿದೆ.

ಕೇರಳದಲ್ಲಿ ಮತ್ತೆ ನಿಫಾ ಕೇಸ್ ಪತ್ತೆ; ತೀವ್ರ ಕಟ್ಟೆಚ್ಚರ



ತಿರುವನಂತಪುರ: ನೆರೆಯ ಕೇರಳದಲ್ಲಿ ಮತ್ತೆ ಮಾರಕ ನಿಫಾ ವೈರಾಣು ಭೀತಿ ಆರಂಭವಾಗಿದ್ದು, ಗುರುವಾರ ಮತ್ತೊಂದು ಪ್ರಕರಣ ವರದಿಯಾಗಿದೆ. ಗುರುವಾರ ಕೇರಳದ ಮಲಪ್ಪುರಂನಲ್ಲಿ ಮಾರಕ ನಿಫಾ ವೈರಸ್‌ನ ಮತ್ತೊಂದು ಸೋಂಕು ಪ್ರಕರಣ ವರದಿಯಾಗಿದ್ದು, 2018 ರಿಂದ ರಾಜ್ಯದಲ್ಲಿ ಏಳನೇ ಪ್ರಕರಣ ಇದಾಗಿದೆ.

ಮಲಪ್ಪುರಂ ಜಿಲ್ಲೆಯ ವಲಂಚೇರಿಯ ನಿವಾಸಿ 42 ವರ್ಷದ ಮಹಿಳೆ ಸೋಂಕಿಗೆ ತುತ್ತಾಗಿದ್ದು, ಸೋಂಕಿತ ಮಹಿಳೆ ಪ್ರಸ್ತುತ ಪೆರಿಂಥಲ್ಮನ್ನಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವೈರಸ್ ಮತ್ತಷ್ಟು ಹರಡುವುದನ್ನು ತಡೆಯಲು ಅಧಿಕಾರಿಗಳು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೋಝಿಕ್ಕೋಡ್ ಮೈಕ್ರೋಬಯಾಲಜಿ ಲ್ಯಾಬ್ ಮತ್ತು ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆಯಲ್ಲಿ ನಡೆಸಿದ ಪರೀಕ್ಷೆಗಳ ನಂತರ ಮಹಿಳೆಯಲ್ಲಿ ಸೋಂಕು ದೃಢಪಟ್ಟಿದೆ. ಮಲಪ್ಪುರಂ ಜಿಲ್ಲೆಯಲ್ಲಿ ನಿಪಾ ವೈರಸ್ ಏಕಾಏಕಿ ಕಾಣಿಸಿಕೊಂಡಿರುವುದು ಇದು ಮೂರನೇ ಬಾರಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೆಂಟಿಲೇಟರ್‌ನಲ್ಲಿದ್ದ ಗಗನಸಖಿ ಮೇಲೆ ಆಸ್ಪತ್ರೆ ಸಿಬ್ಬಂದಿ ಅತ್ಯಾಚಾರ

ಚಂಡೀಘಡ: ಅತ್ತ ಗಡಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಸೈನಿಕರ ನಡುವಿನ ಸಂಘರ್ಷ ಭುಗಿಲೆದ್ದಿರುವಂತೆಯೇ ಇತ್ತ ಹರ್ಯಾಣದಲ್ಲಿ ಭೀಕರ ಘಟನೆಯೊಂದು ವರದಿಯಾಗಿದ್ದು, ಅನಾರೋಗ್ಯದಿಂದಾಗಿ ಆಸ್ಪತ್ರೆಯ ವೆಂಟಿಲೇಟರ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಗನಸಖಿ ಮೇಲೆ ಅತ್ಯಾಚಾರವೆಸಗಿರುವ ಘಟನೆ ವರದಿಯಾಗಿದೆ.

ಹರ್ಯಾಣದ ಗುರುಗ್ರಾಮ್‌ನ ಖಾಸಗಿ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದ್ದು, 46 ವರ್ಷದ ಮಹಿಳೆ ಮೇಲೆ ಆಸ್ಪತ್ರೆಯ ಸಿಬ್ಬಂದಿಯೇ ಅತ್ಯಾಚಾರ ಮಾಡಿರುವ ಆರೋಪ ಕೇಳಿಬಂದಿದೆ.

ಮೂಲಗಳ ಪ್ರಕಾರ ಮಹಿಳೆ ತಾನು ತಂಗಿದ್ದ ಹೋಟೆಲ್‌ನ ಈಜುಕೊಳದಲ್ಲಿ ಈಜುತ್ತಿದ್ದಾಗ ಅಸ್ವಸ್ಥಳಾಗಿ ಏಪ್ರಿಲ್ 5 ರಂದು ಗುರುಗ್ರಾಮ್‌ನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಇದೇ ಸಂದರ್ಭದಲ್ಲಿ ಆಸ್ಪತ್ರೆ ಸಿಬ್ಬಂದಿ ಅತ್ಯಾಚಾರ ವೆಸಗಿದ್ದಾನೆ ಎಂದು ಹೇಳಲಾಗಿದೆ. ಸಂತ್ರಸ್ತ ಮಹಿಳೆಯನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿತ್ತು. ಆಸ್ಪತ್ರೆಯಿಂದ ಹೊರಬಂದ ಮಹಿಳೆ ಇದೀಗ ಪೊಲೀಸರಿಗೆ ದೂರು ನೀಡಿದ್ದು, ದೂರಿನಲ್ಲಿ ಏಪ್ರಿಲ್ 6 ರಂದು ನಾನು ವೆಂಟಿಲೇಟರ್ ನಲ್ಲಿದ್ದಾಗ ಕೆಲವು ಆಸ್ಪತ್ರೆ ಸಿಬ್ಬಂದಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದರು ಎಂದು ಆರೋಪಿಸಿದ್ದಾರೆ.

ಆಪರೇಷನ್ ಸಿಂಧೂರ ಯಶಸ್ಸಿಗೆ ಜಿಲ್ಲೆಯಲ್ಲಿ ವಿಶೇಷ ಪೂಜೆ

ಬಿಜೆಪಿ ಪಕ್ಷದಿಂದ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ



ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಯಶಸ್ವಿಯಾದ ಹಿನ್ನೆಲೆ ಜಿಲ್ಲಾ ಬಿಜೆಪಿ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿತು.

ಮಡಿಕೇರಿ, ಮೇ 9– ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಯಶಸ್ವಿಯಾದ ಹಿನ್ನೆಲೆ ಜಿಲ್ಲಾ ಬಿಜೆಪಿ ವಿಶೇಷ ಪೂಜೆ ಸಲ್ಲಿಸಿತು. ನಗರದ ಓಂಕಾರೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಭಾರತೀಯ ಸೈನ್ಯಕ್ಕೆ ಶಕ್ತಿ ತುಂಬಲು ಮತ್ತು ದೇಶದ ಶಾಂತಿ, ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯ ಪ್ರತಿಯಾಗಿ ಭಾರತೀಯ ಸೈನಿಕರು ದಾಳಿ ನಡೆಸಿದ್ದಾರೆ. ಭಾರತ ನ್ಯಾಯದ ಪರವಾಗಿದೆ. ನ್ಯಾಯಕ್ಕೆ ಎಂದಿಗೂ ಜಯವಿದೆ ಎಂದು ಹೇಳಿದರು.

ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಿಂದ ಪಾಕಿಸ್ತಾನದ ಸ್ಥಿತಿ ಗಂಭೀರವಾಗಿದ್ದು, ಭಯೋತ್ಪಾದನೆಯ ಸಂಪೂರ್ಣ ನಾಶವೇ ಭಾರತದ ಗುರಿ ಆಗಿದೆ ಎಂದು ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸುದ್ದಿಗಾರರಿಗೆ ತಿಳಿಸಿದರು.

ಉಗ್ರರನ್ನು ಮಟ್ಟ ಹಾಕಲು ಕೇಂದ್ರ ಸರ್ಕಾರ ಭಾರತ ಸೇನೆ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಮೂಲಕ ಪಾಕಿಸ್ತಾನದ ವಿರುದ್ಧ ಹೋರಾಟವನ್ನು ಆರಂಭಿಸಿದ್ದು ಈಗಾಗಲೇ ಯಶಸ್ವಿ ಕಂಡಿದೆ. ದೇಶದ ರಕ್ಷಣೆಗೆ ಭಾರತೀಯ ಸೈನಿಕರು ತಮ್ಮ ಪ್ರಾಣವನ್ನೆ ಮುಡಿಪಾಗಿಟ್ಟಿದ್ದು, ಅವರಿಗೆ ಜಯವಾಗಲಿ. ಭಾರತ ದೇಶ ಶಾಂತಿಗೆ ಹೆಸರಾಗಿದ್ದು, ಭಯೋತ್ಪಾದನೆ ನಿರ್ಮೂಲನೆ ಮಾಡುವ ಮೂಲಕ ಪಾಕಿಸ್ತಾನ ಎಂದಿಗೂ ಭಾರತದತ್ತ ತಿರುಗಿಯೂ ನೋಡದಂತೆ ಉತ್ತರ ಕೊಡುವಂತಾಗಬೇಕೆಂದು ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ ಹೇಳಿದರು.

ನಗರಸಭೆ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್ ಕುಮಾರ್, ನಗರ ಬಿಜೆಪಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಮಹಿಳಾ ಬಿಜೆಪಿ ಅಧ್ಯಕ್ಷೆ ಅನಿತಾ ಪೂವಯ್ಯ, ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ಪ್ರಮುಖರಾದ ಮನುಮಂಜುನಾಥ್, ಬೊಳ್ಳಜಿರ ಬಿ.ಅಯ್ಯಪ್ಪ, ಸವಿತಾ ರಾಕೇಶ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸೈನಿಕರ ನೈತಿಕ ಸ್ಥೈರ್ಯ ಹೆಚ್ಚಿಸಲು ಮುಸಲ್ಮಾನ ಬಾಂಧವರ ವಿಶೇಷ ಪ್ರಾರ್ಥನೆ



ನಗರದ ಬದ್ರಿಯಾ ಮಸೀದಿಯಲ್ಲಿ ಮುಸಲ್ಮಾನ ಬಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮಡಿಕೇರಿ, ಮೇ 9– ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಯಶಸ್ವಿಯಾದ ಹಿನ್ನೆಲೆ ಮತ್ತು ಸೈನಿಕರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಬೇಕು ಎಂದು ನಗರದ ಬದ್ರಿಯಾ ಮಸೀದಿಯಲ್ಲಿ ಮುಸಲ್ಮಾನ ಬಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಧರ್ಮ ಗುರುಗಳಾದ ಹಾಫಿಲ್ ನೌಫಾಲ್ ಸಕಾಫಿ ನೇತೃತ್ವದಲ್ಲಿ ದೇಶದ ಶಾಂತಿ ಸೌಹಾರ್ದತೆಗಾಗಿ ಮತ್ತು ಭಾರತೀಯ ಸೇನೆಯ ಸೈನಿಕರ ಒಳಿತಿಗಾಗಿ ಮುಸಲ್ಮಾನರು ಪ್ರಾರ್ಥಿಸಿದರು.

ಸೈನ್ಯದ ದಂಡಾಧಿಕಾರಿಗಳು, ರಾಷ್ಟ್ರ ಬದ್ಧತೆ ಹಾಗೂ ಧೈರ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಇದರಿಂದ ಭಾರತದ ಜನತೆಗೆ ಹೆಚ್ಚಿನ ಶಕ್ತಿ ಮತ್ತು ಧೈರ್ಯ ಬಂದಿದೆ. ಈ ಸನ್ನಿವೇಶವನ್ನು ಎಲ್ಲಾ ಭಾರತೀಯರು ಒಕ್ಕೊರಲಿನಿಂದ ಸಂಭ್ರಮಿಸಬೇಕು. ಮುಂದೆಯೂ ಪ್ರಜಾಪ್ರಭುತ್ವ ರಾಷ್ಟ್ರ ಭಾರತದಲ್ಲಿ ಸೌಹಾರ್ದತೆಯ ಪರಂಪರೆ ಮುಂದುವರೆಯಬೇಕು. ಒಗ್ಗಟ್ಟಿನ ಬೆಳವಣಿಗೆ ದೇಶಕ್ಕೆ ವಿಜಯವನ್ನು ತಂದುಕೊಡುತ್ತದೆ ಎಂದು ಅಮೀನ್ ಮೊಹಿಸಿನ್ ಅಭಿಪ್ರಾಯಪಟ್ಟರು.

ಬದ್ರಿಯಾ ಮಸೀದಿಯ ಉಪಾಧ್ಯಕ್ಷ ಇಸ್ಮಾಯಿಲ್, ಮದ್ರಾಸ ಪ್ರಾಂಶುಪಾಲರಾದ ಹನೀಫ್ ಧಾರಿಮಿ, ನಗರಸಭಾ ಸದಸ್ಯ ಮನ್ಸೂರ್ ಮತ್ತಿತರರು ಉಪಸ್ಥಿತರಿದರು.

ಪ್ರತ್ಯೇಕ ಕೋಡ್‌ಗೆ ಒತ್ತಾಯಿಸಿ ಸಿಎನ್‌ಸಿಯಿಂದ ಸತ್ಯಾಗ್ರಹ



ಪ್ರತ್ಯೇಕ ಕೋಡ್ ಮತ್ತು ಕಾಲಂ ಅನ್ನು ಸೇರಿಸುವಂತೆ ಒತ್ತಾಯಿಸಿ ಸಿಎನ್‌ಸಿ ಶಾಂತಿಯುತ ಸತ್ಯಾಗ್ರಹ ನಡೆಸಿತು.

ಮಡಿಕೇರಿ: ರಾಷ್ಟ್ರೀಯ ಜನಗಣತಿಯ ಸಂದರ್ಭ ಬುಡಕಟ್ಟು ಜನಾಂಗ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಡಿಕೇರಿಯಲ್ಲಿ ಶಾಂತಿಯುತ ಸತ್ಯಾಗ್ರಹ ನಡೆಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸತ್ಯಾಗ್ರಹ ನಡೆಸಿದ ಸದಸ್ಯರು ಕೊಡವ ಯೋಧ ಕುಲಕ್ಕಾಗಿ ಸೋಶಿಯಲ್ ಎಂಜಿನಿಯರಿಂಗ್ ಪ್ರಕ್ರಿಯೆಯ ಭಾಗವಾಗಿ ಪ್ರತ್ಯೇಕ 'ಕೋಡ್ ಮತ್ತು ಕಾಲಮ್' ಅನ್ನು ಸೇರಿಸಬೇಕೆಂದು ಒತ್ತಾಯಿಸಿ ಗೃಹಮಂತ್ರಿಗಳು ಹಾಗೂ ಅವರ ಅಧೀನದಲ್ಲಿ ಬರುವ ರಿಜಿಸ್ಟ್ರಾರ್ ಜನರಲ್ ಮತ್ತು ಸೆನ್ಸಸ್ ಕಮಿಷನರ್ ಆಫ್ ಇಂಡಿಯಾಗೆ ಜ್ಞಾಪನಾ ಪತ್ರ ಸಲ್ಲಿಸಿದರು.

ಎನ್.ಯು.ನಾಚಪ್ಪ ಮಾತನಾಡಿ ರಾಷ್ಟ್ರೀಯ ಜನಗಣತಿ ಜೊತೆಗೆ ಜಾತಿವಾರು ಜನಗಣತಿ ನಡೆಸುವ ಬಗ್ಗೆ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಸ್ವಾಗತಾರ್ಹವಾಗಿದೆ. ಜನ ಗಣತಿಯಲ್ಲಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಕೊಡವ ಸಮುದಾಯದ ನಿಖರವಾದ ಪ್ರಾತಿನಿಧ್ಯವನ್ನು ಖಚಿತಪಡಿಸುತ್ತದೆ. ಸೋಶಿಯಲ್ ಎಂಜಿನಿಯರಿಂಗ್ ಸರ್ಕಾರವು ಸಮುದಾಯದ ನಿರ್ದಿಷ್ಟ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಉದ್ದೇಶಿತ ನೀತಿಗಳನ್ನು ಅಭಿವೃದ್ಧಿ ಪಡಿಸಲು ಅನುವು ಮಾಡಿಕೊಡುತ್ತದೆ ಎಂದರು. ಬಳಿಕ ಜ್ಞಾಪನಾ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಅವರಿಗೆ ಸಲ್ಲಿಸಿದರು.

ಅರೆಯಡ ಸವಿತಾ, ಚೋಳಪಂಡ ಜ್ಯೋತಿ, ಮುದ್ದಿಯಡ ಲೀಲಾವತಿ, ಕಲಿಯಂಡ ಪ್ರಕಾಶ್, ಆಳಮಂಡ ಜೈ ಗಣಪತಿ, ಪಟ್ಟಮಾಡ ಕುಶ, ಅಜ್ಜಿಕುಟ್ಟಿರ ಲೋಕೇಶ್, ನಂದೇಟಿರ ರವಿ ಸುಬ್ಬಯ್ಯ, ಕಾಟುಮಣಿಯಂಡ ಉಮೇಶ್, ಪುದಿಯೊಕ್ಕಡ ಪೃಥ್ವಿ, ಪುಟ್ಟಿಚಂಡ ದೇವಯ್ಯ, ಕೂಪದಿರ ಸಾಬು, ಚೋಳಪಂಡ ನಾಣಯ್ಯ, ಮೇದುರ ಕಂಠಿ, ನಂದಿನೆರವಂಡ ಅಯ್ಯಣ್ಣ, ಚೀಯಬೇರ ಸತೀಶ್, ಮೇದುರ ಗಪ್ಪಣ್ಣ, ಬಡುವಂಡ ವಿಜಯ, ಮಣೋಟಿರ ನಂದಾ, ಐಚೆಟ್ಟೀರ ರವಿ ಮತ್ತಿತರರು ಭಾಗವಹಿಸಿದ್ದರು.

ಮೇ 14, ಲೋಕಾಯುಕ್ತರಿಂದ ಅರ್ಜಿ ಸ್ವೀಕಾರ

ಮಡಿಕೇರಿ: ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಮೇ 14 ರಂದು ಬೆಳಗ್ಗೆ 11 ಗಂಟೆಯಿಂದ ವಿರಾಜಪೇಟೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಅರ್ಜಿ ವಿತರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡೆವಿಟ್ ಮಾಡಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂ.ಸಂ.08272–295297 ನ್ನು ಸಂಪರ್ಕಿಸಬಹುದು.

ನಾಪೋಕ್ಲು ಮಸೀದಿಯಲ್ಲಿ ಭಾರತೀಯ ಸೈನಿಕರ ಪರ ವಿಶೇಷ ಪ್ರಾರ್ಥನೆ

ನಾಪೋಕ್ಲು: ಭಾರತೀಯ ಸೇನೆ ನಡೆಸುತ್ತಿರುವ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಯಶಸ್ವಿಗೊಂಡ ಹಿನ್ನಲೆಯಲ್ಲಿ ಪಟ್ಟಣದ ಮೊಹಿಯದ್ದೀನ್ ಜುಮಾ ಮಸೀದಿಯಲ್ಲಿ ಇಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಭಾರತೀಯರಾದ ನಾವೆಲ್ಲರೂ ನಮ್ಮ ಸೈನಿಕರಿಗೆ ನೈತಿಕ ಬೆಂಬಲ ನೀಡಬೇಕಾದ ಅನಿವಾರ್ಯತೆ ಇದೆ ಎಂದು ಶುಕ್ರವಾರ ಜುಮಾ ನಮಾಝಿನ ಬಳಿಕ ಜಮಾಯತ್ ಅಧ್ಯಕ್ಷ ಎಮ್.ಎಚ್. ಅಬ್ದುಲ್ ರೆಹಮಾನ್ ತಿಳಿಸಿದರು.

ಮೊಹಿಯದ್ದೀನ್ ಜುಮಾ ಮಸೀದಿಯ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.



ಎಮ್.ಎಚ್.ಅಬ್ದುಲ್ ರೆಹಮಾನ್ ನೇತೃತ್ವದಲ್ಲಿ ನಡೆದ ವಿಶೇಷ ಪ್ರಾರ್ಥನಾ ಸಭೆ.

ಉಸ್ತುವಾರಿ ಸಮಿತಿ ನಾಮ ನಿರ್ದೇಶಿತ ಸದಸ್ಯರಾಗಿ ಆಯ್ಕೆ



ಮಡಿಕೇರಿ, ಮೇ 9– ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧ ನಿಯಮಗಳಡಿಯ ಕೊಡಗು ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯರಾಗಿ ಮಾನವ ಬಂಧುತ್ವ ವೇದಿಕೆಯ ಜಿಲ್ಲಾ ಸಂಚಾಲಕರಾದ ಜೆ.ಎಲ್. ಜನಾರ್ಧನ್ ಆಯ್ಕೆಯಾಗಿದ್ದಾರೆ. ಪ್ರಸ್ತುತ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಹಾಗೂ ಬಗರ್ ಹುಕುಂ ತಾಲೂಕು ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಮಗ್ರ ಸಮೀಕ್ಷೆ; ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಡಿಸಿ ಸೂಚನೆ



ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಸಂಬಂಧ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಧಿಕಾರಿಗಳ ಸಭೆ ನಡೆಸಿದರು.

ಮಡಿಕೇರಿ, ಮೇ 9–ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಸಂಬಂಧ 5ರಿಂದ ನಡೆಯುತ್ತಿರುವ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸಮಗ್ರ ಸಮೀಕ್ಷೆಗೆ ನಿರ್ಲಕ್ಷ್ಯ ವಹಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ ಜಿಲ್ಲಾಧಿಕಾರಿಗಳು, ಗಣತಿದಾರರ ಜೊತೆ ಮೇಲ್ವಿಚಾರಕರು ಸಹ ಸಮೀಕ್ಷೆ ಕಾರ್ಯದಲ್ಲಿ ತೊಡಗಿಸಿಕೊಂಡು ಪ್ರಗತಿ ಸಾಧಿಸಬೇಕು. ಪರಿಶಿಷ್ಟ ಜಾತಿ ಕುಟುಂಬ ಸಮೀಕ್ಷೆಯಿಂದ ಬಿಟ್ಟು ಹೋಗದಂತೆ ಗಮನಹರಿಸಬೇಕು ಎಂದು ಹೇಳಿದರು.

ಮೇ 17 ರವರೆಗೆ ನಡೆಯುವ ಮನೆ ಮನೆ ಸಮೀಕ್ಷೆ ಸಂಬಂಧ ಸಂಪೂರ್ಣ ಪ್ರಗತಿ ಸಾಧಿಸಬೇಕು. ಸಮಗ್ರ ಸಮೀಕ್ಷೆ ಸಂಬಂಧಿಸಿದಂತೆ ಪ್ರತಿ ನಿತ್ಯ ತಾಲೂಕುವಾರು ಮಾಹಿತಿ ಒದಗಿಸುವಂತೆ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಜಿಲ್ಲಾಧಿಕಾರಿ ಅವರು ನಿರ್ದೇಶನ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಾಲಾ ಶಿಕ್ಷಣ ಉಪ ನಿರ್ದೇಶಕರು ಪ್ರತಿ ದಿನ ಗಣತಿದಾರರ ಮೇಲ್ವಿಚಾರಕರ ಜೊತೆ ಸಂಪರ್ಕವನ್ನು ಸಾಧಿಸಿ ಗಣತಿದಾರರು ಗಣತಿ ಕಾರ್ಯ ಕೈಗೊಳ್ಳುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ಹಾಗೂ ಪರಿಶೀಲಿಸುವಂತೆ ಜಿಲ್ಲಾಧಿಕಾರಿ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ತಹಶೀಲ್ದಾರರು, ತಾ.ಪಂ ಇಒಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಇತರರು ಇದ್ದರು.

ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ಲೋಕಾಯುಕ್ತರ ಪರಿಶೀಲನೆ



ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಏಕಕಾಲದಲ್ಲಿ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಾಮರಾಜನಗರ, ಮೇ 9– ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಇರುವ ಎಲ್ಲಾ ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಏಕಕಾಲದಲ್ಲಿ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ, ಹನೂರು, ಕುದೇರಿನಲ್ಲಿರುವ ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳು ವಿಳಂಬವಾಗುತ್ತಿರುವ ಕುರಿತು ಲೋಕಾಯುಕ್ತಕ್ಕೆ ದೂರು ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಭೇಟಿ ನೀಡಿ ಅಲ್ಲಿನ ಕಾರ್ಯ ವೈಖರಿಗಳ ಕುರಿತು ಪರಿಶೀಲಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ತಾಲೂಕು ಕಚೇರಿಯಲ್ಲಿರುವ ಸಬ್‌ರಿಜಿಸ್ಟ್ರಾರ್ ಕಚೇರಿಗೆ ದಾಳಿ ಮಾಡಿದ ಲೋಕಾಯುಕ್ತ ಡಿವೈಎಸ್‌ಪಿ ಗಜೇಂದ್ರಪ್ರಸಾದ್ ತಂಡ ಕಚೇರಿಯಲ್ಲಿನ ಕಡತಗಳನ್ನು ಪರಿಶೀಲಿಸಿತು. ಕಚೇರಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳ ವಿಳಂಬದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ತಂಡ ಕಂಪ್ಯೂಟರ್‌ಗಳನ್ನು ಪರಿಶೀಲಿಸಿದರು. ಕಚೇರಿಯಲ್ಲಿ ಬಾಕಿ ಇರುವ ಸಾರ್ವಜನಿಕರ ಕೆಲಸಗಳ ಕುರಿತು ಮಾಹಿತಿ ಪಡೆದು ವಿಳಂಬವಾದರೆ ಕಠಿಣ ಕ್ರಮದ ಎಚ್ಚರಿಕೆ ನೀಡಿದರು.

ಒಳ ಮೀಸಲಾತಿ ಜಾತಿಗಣತಿ ಕಾಲಾಮಿತಿಯೊಳಗೆ ಮಾಡುವಂತೆ ಮನವಿ



ಕಾಲಮಿತಿಯೊಳಗೆ ಜಾತಿ ಸಮೀಕ್ಷೆ ಪೂರ್ಣಗೊಳಿಸುವಂತೆ ಒತ್ತಾಯಿಸಿ ಜಿಲ್ಲಾ ಮಾದಿಗ ಸಂಘಟನೆಗಳು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾಹುಡೇದರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ: ಒಳ ಮೀಸಲಾತಿ ಜಾತಿ ಗಣತಿಯನ್ನು ವೈಜ್ಞಾನಿಕವಾಗಿ ಕಾಲಮಿತಿಯೊಳಗೆ ಜಾತಿ ಸಮೀಕ್ಷೆ ಪೂರ್ಣಗೊಳಿಸುವಂತೆ ಒತ್ತಾಯಿಸಿ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾಹುಡೇದ ಅವರಿಗೆ ಮನವಿ ಸಲ್ಲಿಸಲಾಯಿತು.

ಮೇ 5ನೇ ತಾರೀಖಿನಿಂದ ಜಾತಿ ಜನಗಣತಿ ಜಾತಿ ಸಮೀಕ್ಷೆ ಪ್ರಾರಂಭವಾಗಿದ್ದು, ಜಿಲ್ಲೆಯಲ್ಲಿ ಸಮೀಕ್ಷೆ ತುಂಬಾ ವಿಳಂಬ ಗತಿಯಲ್ಲಿ ಸಾಗುತ್ತಿದೆ. ಪರಿಶಿಷ್ಟ ಜಾತಿ ಮಾದಿಗ ಜನಾಂಗದ ಬೀದಿಗಳಲ್ಲಿ ಕೆಲ ಹಳ್ಳಿಗಳಲ್ಲಿ ಸರಿಯಾಗಿ ಸಮೀಕ್ಷೆ ನಡೆಯುತ್ತಿಲ್ಲ ಕೆಲವು ಸಿಬ್ಬಂದಿಗಳಿಗೆ 101 ಜಾತಿಗಳ ಸಮಗ್ರ ಮಾಹಿತಿಯ ಕೊರತೆ ಇದ್ದು, ಸಮೀಕ್ಷೆಯ ಸಂಪೂರ್ಣ ಮಾಹಿತಿ ತಿಳಿದಿರುವುದಿಲ್ಲ ಎಂದರು.

ಕೆಲ ಸಿಬ್ಬಂದಿ ರೇಷನ್ ಕಾರ್ಡ್ ಮಾತ್ರ ಅಪ್‌ಡೇಟ್ ಮಾಡಿರುತ್ತಾರೆ. ಪಡಿತರ ಚೀಟಿಯಲ್ಲಿ ಕೆಲ ಸದಸ್ಯರ ಆಧಾರ್ ಲಿಂಕ್ ಆಗಿರುವುದಿಲ್ಲ. ಆದ್ದರಿಂದ ಮಾದಿಗ ಜನಾಂಗದ ಯಾವೊಬ್ಬ ಸದಸ್ಯರಿಗೂ ಅನ್ಯಾಯವಾಗದಂತೆ ಸಮೀಕ್ಷೆ ಮಾಡಿಸಬೇಕೆಂದು ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟ ಮನವಿಯಲ್ಲಿ ಆಗ್ರಹಿಸಿದೆ.

ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ, ಮುಖಂಡರಾದ ನಿವೃತ್ತ ಬ್ಯಾಂಕ್ ಅಧಿಕಾರಿ ಬಸವರಾಜು, ಹೆಚ್.ಹೆಚ್.ನಾಗರಾಜು, ಕೆಸ್ತೂರು ಮರಪ್ಪ, ಬಿ.ಚಾಮರಾಜು, ಆರ್.ಸಿದ್ದರಾಜು, ಕೆ.ಜಗದೀಶ್, ಸಿ.ಎಚ್.ರಂಗಸ್ವಾಮಿ, ಬಂಗಾರ, ನಿಟ್ರೆ ಮಹದೇವಯ್ಯ, ಬಣ್ಣಾರಿ, ರವಿ, ನರಸಿಂಹ ಇತರರು ಹಾಜರಿದ್ದರು.

ಆಪರೇಷನ್ ಸಿಂಧೂರ್: ಜಿಲ್ಲೆಯಾದ್ಯಂತ ಹೆಚ್ಚಿನ ಭದ್ರತೆ



ರೈಲ್ವೆ ನಿಲ್ದಾಣದಲ್ಲಿ ಬಾಂಬ್ ನಿಷ್ಕ್ರಿಯ ದಳ ಬಂದೋಬಸ್ತ್ ಕಾರ್ಯದಲ್ಲಿ ತೊಡಗಿರುವುದು.

ಚಾಮರಾಜನಗರ, ಮೇ 9– ಆಪರೇಷನ್ ಸಿಂಧೂರ್ ದಾಳಿಯಿಂದ ಸಂಭವಿಸಿರುವ ಉದ್ವಿಗ್ನ ಪರಿಸ್ಥಿತಿ ಹಿನ್ನೆಲೆಯಲ್ಲಿ ಜಿಲ್ಲೆಯ ಜನನಿಬಿಡ ಪ್ರದೇಶಗಳು, ಪ್ರವಾಸಿ ತಾಣಗಳು, ಸರ್ಕಾರಿ ಕಟ್ಟಡಗಳಲ್ಲಿ ಹೆಚ್ಚಿನ ಭದ್ರತೆ ಕೈಗೊಳ್ಳಲಾಗಿದೆ.

ಜಿಲ್ಲಾಡಳಿತ ಭವನ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಪ್ರಮುಖ ಪ್ರವಾಸಿ ತಾಣಗಳು, ಜಿಲ್ಲೆಯ ಗಡಿ ಭಾಗಗಳಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಪೊಲೀಸರು ಹೆಚ್ಚಿನ ನಿಗಾ ವಹಿಸಲಾಗಿದೆ. ಚಾಮರಾಜೇಶ್ವರ ದೇವಸ್ಥಾನ ಸೇರಿದಂತೆ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದ್ದು, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದಿಂದ ತಪಾಸಣೆ ನಡೆಸಲಾಗುತ್ತಿದೆ.

ಜಿಲ್ಲೆಯಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಿಕೊಂಡು ಬಂದೋಬಸ್ತ್ ಮಾಡಿಕೊಳ್ಳಲಾಗಿದೆ. ಪ್ರಮುಖವಾಗಿ ಜನರು ಸೇರುವ ಪ್ರದೇಶಗಳು, ಸರ್ಕಾರಿ ಕಟ್ಟಡಗಳಲ್ಲಿ ಹೆಚ್ಚಿನ ನಿಗಾವಹಿಸಲಾಗಿದೆ. ಎಲ್ಲಾ ಕಡೆ ತಪಾಸಣೆ ತೀವ್ರಗೊಳಿಸಲಾಗಿದೆ. ಜಿಲ್ಲೆಗೆ ಹೊರಗಡೆಯಿಂದ ಬರುವವರು ಹಾಗೂ ಈಗಾಗಲೇ ಜಿಲ್ಲೆಗೆ ಹೊಸದಾಗಿ ಯಾರಾದರೂ ಬಂದಿರುವ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮೈಸೂರು ಮಿತ್ರ ತಿಳಿಸಿದರು.

ಇತ್ತೀಚೆಗೆ ಜಿಲ್ಲಾಡಳಿತ ಭವನ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶ ಬಂದಿದ್ದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನಕ್ಕೂ ಸಿಬ್ಬಂದಿ ನಿಯೋಜಿಸಿ, ಭವನಕ್ಕೆ ಬರುವವರು– ಹೋಗುವವರನ್ನು ಪರಿಶೀಲಿಸಲಾಗುತ್ತಿದೆ. ಜಿಲ್ಲಾಡಳಿತ ಭವನಕ್ಕೆ ಸೆಕ್ಯೂರಿಟಿ ಆಡಿಟ್ ಕೂಡ ಮಾಡಿಸಲಾಗುತ್ತಿದ್ದು, ಒಟ್ಟಾರೆ ಜಿಲ್ಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾಹಿತಿ ನೀಡಿದರು.

> ಜಿಲ್ಲೆಯಲ್ಲಿಯೂ ತೀವ್ರ ಬಂದೋಬಸ್ತ್ ಮಾಡಿಕೊಳ್ಳಲಾಗಿದೆ. ಜನರು ಸೇರುವ ಪ್ರದೇಶ, ಸರ್ಕಾರಿ ಕಟ್ಟಡಗಳ ಬಳಿ ಸಿಬ್ಬಂದಿಗಳ ನಿಯೋಜನೆ ಮಾಡಲಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ.
> –ಡಾ. ಬಿ.ಟಿ. ಕವಿತಾ,
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಟೋಲ್‌ನಲ್ಲಿ ಸ್ಥಳೀಯರಿಂದ ಶುಲ್ಕ ವಸೂಲಿ ವಿರೋಧಿಸಿ ಪ್ರತಿಭಟನೆ



ಅಟ್ಟುಗುಳೀಪುರ ಟೋಲ್‌ನಲ್ಲಿ ಸ್ಥಳೀಯರಿಂದ ಶುಲ್ಕ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಗೂಡ್ಸ್ ಆಟೋ ಮಾಲೀಕರು, ಚಾಲಕರ ಸಂಘದ ಪದಾಧಿಕಾರಿಗಳು ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 9– ತಾಲೂಕಿನ ಅಟ್ಟುಗುಳಿಪುರ ಟೋಲ್‌ನಲ್ಲಿ ಸ್ಥಳೀಯರಿಂದ ಶುಲ್ಕ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಗೂಡ್ಸ್ ಆಟೋ ಮಾಲೀಕರು, ಚಾಲಕರ ಸಂಘದ ಪದಾಧಿಕಾರಿಗಳು ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಬಸವನಪುರ ರಾಜಶೇಖರ ಮಾತನಾಡಿ, ತಾಲೂಕಿನ ಅಟ್ಟುಗುಳೀಪುರ ಟೋಲ್‌ನಲ್ಲಿ ಸ್ಥಳೀಯರಿಂದ ಶುಲ್ಕ ವಸೂಲಿ ಮಾಡುವುದು ಸರಿಯಲ್ಲ ರೈತರು ಬೆಳೆದ ತರಕಾರಿ, ದವಸ, ಧಾನ್ಯಗಳನ್ನು ಸ್ಥಳೀಯ ಗೂಡ್ಸ್ ಆಟೋ ಚಾಲಕರು ಮನೆಗೆ ಸಾಗಿಸುವ, ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದು ಸ್ಥಳೀಯವಾಗಿ ಓಡಾಡುವ ಆಟೋಗಳಿಗೆ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಶುಲ್ಕ ಕಟ್ಟದಿದ್ದರೆ ಆಟೋ ಚಾಲಕರೊಂದಿಗೆ ಟೋಲ್ ಸಿಬ್ಬಂದಿಗಳು ಗೂಂಡಾವರ್ತನೆ ತೋರಿರುವುದು ತಿಳಿದು ಬಂದಿದೆ ಎಂದು ಆರೋಪಿಸಿದರು.

ಜಿಲ್ಲಾಡಳಿತ ಕೂಡಲೇ ಸ್ಥಳೀಯರಿಂದ ಟೋಲ್ ವಸೂಲಿ ನಿಲ್ಲಿಸಬೇಕು ಇಲ್ಲದಿದ್ದರೆ ರೈತ ಪರ ಸಂಘಟನೆಗಳು, ಕನ್ನಡ ಪರ ಸಂಘಟನೆ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಜೊತೆಗೂಡಿ ಉಗ್ರ ಹೋರಾಟ ಮಾಡುವುದಾಗಿ ಬಸವನಪುರ ರಾಜಶೇಖರ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕೆಸ್ತೂರು ಮರಪ್ಪ, ಕನ್ನಹಳ್ಳಿ ಸೋಮಣ್ಣ, ಆಟೋ ಚಾಲಕರಾದ ವಿನೋದ್ ಕುಮಾರ್, ಲೋಹಿತ್, ರವಿ, ಜಗದೀಶ್, ಚಂದನ್, ಮಹೇಶ್, ಸಿದ್ದು, ಮಹೇಂದ್ರ, ರಮಿಜ್ ರಮೇಶ್, ವಿಶಾಲ್, ಮಹೇಶ್, ವಿಕ್ರು, ಆಕಾಶ್, ಲಿಂಗಪ್ಪ ಸಿದ್ದರಾಜು ಇತರರು ಭಾಗವಹಿಸಿದ್ದರು.

ಬಿಳಿಗಿರಿರಂಗನಬೆಟ್ಟದ ಜಾತ್ರೆಗೆ ದ್ವಿಚಕ್ರ ವಾಹನಗಳ ನಿಷೇಧ: ಆದೇಶ

ಚಾಮರಾಜನಗರ: ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಬ್ರಹ್ಮರಥೋತ್ಸವಗಾಗಿ ಬೆಟ್ಟಕ್ಕೆ ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಆದೇಶ ಹೊರಡಿಸಿದ್ದಾರೆ.

ಬೆಟ್ಟದಲ್ಲಿ ನಾಳೆ ಬಿಳಿಗಿರಿರಂಗನಾಥ ಸ್ವಾಮಿಯವರ ಬ್ರಹ್ಮರಥೋತ್ಸವ ಹಾಗೂ ದೊಡ್ಡಜಾತ್ರೆ ನಡೆಯಲಿದ್ದು, ಬೆಟ್ಟಕ್ಕೆ ಜಿಲ್ಲೆ, ಹೊರ ಜಿಲ್ಲೆಗಳಿಂದ ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ಸಂಭವವಿದ್ದು ವಾಹನ ದಟ್ಟಣೆ ಹೆಚ್ಚಾಗಲಿದೆ. ಸದರಿ ರಸ್ತೆಯು ಅರಣ್ಯ ಪ್ರದೇಶ ಹಾಗೂ ಕಡಿದಾದ ತಿರುವುಗಳಿಂದ ಕೂಡಿದ್ದು ವಾಹನ ಸಂಚಾರದಲ್ಲಿ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವ ಕಾರಣ ಬಿಳಿಗಿರಿರಂಗನಬೆಟ್ಟಕ್ಕೆ ಚಾಮರಾಜನಗರ ತಾಲೂಕಿನ ಹೊಂಡರಬಾಳು ಅರಣ್ಯ ಚೆಕ್‌ಪೋಸ್ಟ್ ಹಾಗೂ ಯಳಂದೂರು ತಾಲೂಕಿನ ಗುಂಬಳ್ಳಿ ಅರಣ್ಯ ಚೆಕ್‌ಪೋಸ್ಟ್ ಮೂಲಕ ಮೇ 10 ರವರೆಗೆ ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಆಪರೇಷನ್ ಸಿಂಧೂರ ಯಶಸ್ವಿ; ಚಾಮರಾಜೇಶ್ವರಗೆ ವಿಶೇಷಪೂಜೆ



ಚಾಮರಾಜನಗರ: ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ ಯಶಸ್ವಿಯಾದ ಹಿನ್ನಲೆಯಲ್ಲಿ ಬಿಜೆಪಿ ನಗರ ಮಂಡಲ ವತಿಯಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವೀರಯೋಧರು, ಪ್ರಧಾನಿ ನರೇಂದ್ರ ಮೋದಿಯವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು

ಭಾರತಾಂಬೆ, ಭಾರತೀಯ ಸೈನಿಕರು, ಮೋದಿ ಪರ ಜೈಕಾರ ಕೂಗಿ ಸಂಭ್ರಮಿಸಿದರು. ನೇತೃತ್ವ ವಹಿಸಿದ್ದ ನಗರ ಮಂಡಲ ಅಧ್ಯಕ್ಷ ಶಿವರಾಜ್ ಮಾತನಾಡಿ, ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ ಯಶಸ್ವಿಯಾದ ಹಿನ್ನಲೆಯಲ್ಲಿ ಬಿಜೆಪಿ ನಗರ ಮಂಡಲ ವತಿಯಿಂದ ನಗರದ ಶ್ರೀಚಾಮ ರಾಜೇಶ್ವರ ದೇವಸ್ಥಾನದಲ್ಲಿ ವೀರ ಯೋಧರು, ಪ್ರಧಾನಿ ನರೇಂದ್ರ ಮೋದಿಯವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿ, ಅವರಿಗೆ ಹೆಚ್ಚಿನ ಆರೋಗ್ಯ, ಶಕ್ತಿ ಕರುಣಿಸಲಿ ಎಂದು ಪ್ರಾರ್ಥಿಸಲಾಗಿದೆ ಎಂದರು.

'ಪಾಕಿಸ್ತಾನಿ ಕಡಿವಾಣ ಹಾಕುವ ನಿಟ್ಟಿನಲ್ಲಿ ಒಂದೇ ಬಾರಿ ಎಲ್ಲಾ ಉಗ್ರರನ್ನು ನಿರ್ನಾಮ ಮಾಡಬೇಕು' ಎಂದು ಆಗ್ರಹಿಸಿದರು.

ಮೋದಿ ನೇತೃತ್ವದ ಸರ್ಕಾರಕ್ಕೆ ನಾವು ಅಭಿನಂದನೆ ಸಲ್ಲಿಸುತ್ತೇವೆ. ಪ್ರತಿ ಬಾರಿ ಉಗ್ರರ ದಾಳಿ ಆದಾಗಲೂ ನಮ್ಮ ಭಾರತೀಯ ಸೇನೆ ಅವರಿಗೆ ತಕ್ಕ ಉತ್ತರ ಕೊಟ್ಟಿದೆ. ಉಗ್ರರನ್ನು ಸಂಹಾರ ಮಾಡಿದ, ನಮ್ಮ ಸೈನಿಕರಿಗೆ, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ನಾವು ಈ ಅಭಿನಂದನೆ ಸಲ್ಲಿಸುತ್ತೇವೆ ಎಂದರು.

ನಗರಸಭಾ ಉಪಾಧ್ಯಕ್ಷೆ ಮಮತ ಬಾಲಸುಬ್ರಹ್ಮಣ್ಯ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ನಗರದ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಮಹೇಶ್, ಉಪಾಧ್ಯಕ್ಷೆ ಕುಮುದ ಕೇಶವಮೂರ್ತಿ, ರುದ್ರ, ಭಾಸ್ಕರ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ, ಉಪಾಧ್ಯಕ್ಷ ಬುಲೆಟ್ ಚಂದ್ರು, ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್, ಪ್ರಧಾನ ಆನಂದ ಭಗಿರಥ, ನಗರಸಭಾ ಮಾಜಿ ಸದಸ್ಯ ಶಿವಣ್ಣ, ಮುಖಂಡರಾದ ವೀರೇಂದ್ರ, ಬಂಗಾರನಾಯಕ ಚಂದ್ರಶೇಖರ, ಉತ್ತವಳ್ಳಿ ಮಹೇಶ್, ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಮಲೆಯೂರು ಕಮಲಮ್ಮ ಪ್ರಧಾನ ಕಾರ್ಯದರ್ಶಿ ಎಂ.ಶೈಲಾ, ವನಜಾಕ್ಷಿ, ಜ್ಯೋತಿ, ಜಯಶ್ರೀ, ಪಾರ್ವತಿ, ಗಾಯಿತ್ರಿ, ರಾಜಮ್ಮ ಇತರರು ಭಾಗವಹಿಸಿದ್ದರು.

ಮೇ 12 ಬುದ್ಧ ಜಯಂತಿ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 2569ನೇ ಬುದ್ಧ ಪೂರ್ಣಿಮೆ ಭಗವಾನ್ ಬುದ್ಧ ಜಯಂತಿ ಆಚರಣೆಯನ್ನು ಮೇ 12 ನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 9.30 ಗಂಟೆಗೆ ನಗರದ ಸಾರನಾಥ ಬೌದ್ಧವಿಹಾರದ ಬಳಿ ಮೆರವಣಿಗೆಗೆ ಚಾಲನೆ ದೊರೆಯಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರು ಮೊಗರಳ್ಳಿ (ಮಂಟಿ)ಯಲ್ಲಿ XL ಕಂಪ್ಯೂಟರ್‌ನಲ್ಲಿ ಬಿಲ್ಲಿಂಗ್ ಕೆಲಸ ಮಾಡಲು ಲೇಡಿಸ್ Ape, Tata Ace ಓಡಿಸಲು ಡ್ರೈವರ್ ಬೇಕಾಗಿದ್ದಾರೆ. ಕುಶಾಲನಗರದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
9916842472
9845345714

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್‌ಗಳು, ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಪ್ರತಿಷ್ಠಿತ ಕಂಪನಿಗೆ ನಂಜನಗೂಡು ಇಂಡಸ್ಟ್ರಿಯಲ್ ಏರಿಯಕ್ಕೆ ವಿದ್ಯಾರ್ಹತೆ : SSLC, PUC, BA, Degree ಉತ್ತಮ ವೇತನ ಇರುತ್ತದೆ ESI, PF, NFH ಹಾಗೂ ಬೋನಸ್ W/Off ಊಟದ ವ್ಯವಸ್ಥೆ ಇರುತ್ತದೆ. ತಕ್ಷಣ ಸಂಪರ್ಕಿಸಿ.
9606824074,9513341861
9606832471,9481782571

ಬೇಕಾಗಿದ್ದಾರೆ
PGಯಲ್ಲಿ ಅಡುಗೆ ಹೆಲ್ಪರ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು.
9986622769
9535744143

ಕಥಕ್ ಶಾಸ್ತ್ರೀಯ ನೃತ್ಯ ತರಗತಿ
ಆರ್ಟಿಕ್ಯುಲೇಟ್ ಡ್ಯಾನ್ಸ್ ಸ್ಟುಡಿಯೋಸ್ ಇವರು ಮೈಸೂರಿನಲ್ಲಿ ಕಥಕ್ ಶಾಸ್ತ್ರೀಯ ನೃತ್ಯ ತರಗತಿಯನ್ನು ಪುನರಾರಂಭಿಸಿದ್ದಾರೆ. ಸೇರಲು ಇಚ್ಛಿಸುವವರು ಮೈಸೂರು ಬಿ. ನಾಗರಾಜ್
ಮೊ. 9341288391
ಸಂಪರ್ಕಿಸಬಹುದು. ವಯೋಮಿತಿ 6 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳು.

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

SLD EXCELLENT PUBLIC SCHOOL
KHB Colony, Yalachanahalli, Yelwala (H) Mysuru
WALK IN INTERVIEW
(Monday - Sat at 10am to 4 pm)
For the Posts
Principal - Qul: MA/MSc/BEd with Exp.
English & Social Teacher :
Qul : Graduate in the relevent subject with BEd, Office Asst., Any degree (Exp & English Fluency), and Driver
9148180700,9535332633

COMMERCIAL SHED FOR RENT
1500 SQFT
BEHIND SANKALP APARTMENT
YADAVAGIRI, MYSURU
30X40 2BHK,
HOUSE FOR RENT, 1ST FLOOR,
SRS COLONY, HOOTAGALLI
9448786750
8618972454

ಅಡಿಗೆ ಕೆಲಸ ಮಹಿಳೆಯರಿಗೆ
ಸಣ್ಣ ಕುಟುಂಬ ಉಳ್ಳ ಮನೆಯಲ್ಲಿ ಅಡಿಗೆ ಮತ್ತು ಮನೆ ಕೆಲಸಗಳನ್ನು ಮಾಡಬಲ್ಲ ಆರೋಗ್ಯವಂತ 40 ವಯಸ್ಸು ಮೀರದ ಮಹಿಳೆ. ಕೆಲಸದ ಸಮಯ ಬೆಳಿಗ್ಗೆ ಮೂರು ಗಂಟೆ ಮತ್ತು ಸಂಜೆ ಮೂರು ಗಂಟೆ. ಸಂಬಳ ತಿಂಗಳಿಗೆ 9000/– ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ ಮೈಸೂರು .
8762205021

WANTED
Computer Operator
(Minimum 2 Year Experience)
3 Gun Man with Armed License
(Attractive Salary with ESI and EPF)
#17/2, 1st Floor,
5th Main, 8th Cross,
Saraswathipuram, Mysore
91646 08888
98442 99888

ತಕ್ಷಣ ಬೇಕಾಗಿದ್ದಾರೆ
SRS SECURITY SERVICES
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್, ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, BA, Any Degree. ವೇತನ: S/G 22,000, S/Sup 25,000, Valet DVR 21500 ಸಂಬಳವಿರುತ್ತದೆ. ಕೆಲಸದ ಸಮಯ 8 ಗಂಟೆಗಳು ಹಾಗೂ ಓಟಿ ಸೌಲಭ್ಯವಿರುತ್ತದೆ. ವಯೋಮಿತಿ: 19 ರಿಂದ 45ರ ಒಳಪಟ್ಟಿರುವವರು. ESI, PF & Week Off, GH ಸೌಲಭ್ಯವಿರುತ್ತದೆ. ಕೆಲಸ ಮಾಡುವ ಸ್ಥಳ: Nexus Mall, N.H. Hospital, Dinesh Y.S.,
7760097320, 9606832471

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
OPERATION EXECUTIVE
Age limit 18 to 28
Pls forward your CV to
design@impactsigns.in
or what's app to
99011 63200



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಜಮೀನು ಮಾರಾಟಕ್ಕಿದೆ
ನಂಜನಗೂಡು ತಾಲ್ಲೂಕು ನಂಜನಗೂಡು, ಚಾಮರಾಜನಗರ ಮುಖ್ಯ ರಸ್ತೆ, ದೇವಸ್ಥಾನದಿಂದ 3 ಕಿ.ಮೀ. ದೂರ ವಾಣಿಜ್ಯ ಭೂಮಿ 0.32 ಗುಂಟೆ ಮಾರಾಟಕ್ಕಿದೆ. ಪೆಟ್ರೋಲ್ ಬಂಕ್ ಹಾಗೂ ವಾಣಿಜ್ಯ ಕಟ್ಟಡಗಳಿಗೆ ಅನುಕೂಲವಿದೆ. ಸಂಪರ್ಕಿಸಿ:
9845524714, 9740140575

ಶೋಭಾ ಪ್ರಾಪರ್ಟೀಸ್
ಪೂರ್ಣ ಅಭಿವೃದ್ಧಿ ಹೊಂದಿದ ಸೈಟ್‌ಗಳು ಮಾರಾಟಕ್ಕಿವೆ Govt ಹೈಸ್ಕೂಲ್ ಮತ್ತು ಕಾಲೇಜು ಹತ್ತಿರ ಇಲವಾಲ ನಂತರ
8050009696

ಮನೆ ಮಾರಾಟಕ್ಕಿದೆ
20x33 ವಿಸ್ತೀರ್ಣದ ಹೊಸದಾಗಿ ನಿರ್ಮಿಸಲಾಗಿರುವ 2 ಅಂತಸ್ತಿನ ಮನೆ ಇಲವಾಲದ ಬಳಿ ಸಂಪರ್ಕಿಸಿ:
8147891253

ಸುವರ್ಣ ಅವಕಾಶ
ಗ್ಯಾಸ್ ಪೈಪಿಂಗ್ ಟೆಕ್ನಿಷಿಯನ್ ಕೆಲಸಕ್ಕೆ 20 ಜನರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ತರಬೇತಿ, 3 ಬಾರಿ ಉಚಿತ ಊಟ, ವಸತಿ ವ್ಯವಸ್ಥೆ, ವಾಹನ ಸೌಲಭ್ಯ, TA/DA ಸೌಲಭ್ಯ (ಎಲ್ಲಾ ವಿಧ್ಯಾಭ್ಯಾಸದವರು) ಸಂಪರ್ಕಿಸಿ
9844101459

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2. ಶಿಷ್ಯರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ತಕ್ಷಣ ಬೇಕಾಗಿದ್ದಾರೆ
BMH ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ : 17000 W/o ಸಂಪರ್ಕಿಸಬೇಕಾದ ಸಂಖ್ಯೆಗಳು
9620777819
7006635122

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ನಜರ್‌ಬಾದ್ ಮತ್ತು ಅಗ್ರಹಾರ, ಮೈಸೂರು ಸಮಯ: ಬೆಳಿಗ್ಗೆ 9:30 ರಿಂದ ರಾತ್ರಿ 8:30/09:00 ವರೆಗೆ, ಸ್ಥಳೀಯರಿಗೆ ಆದ್ಯತೆ ಸಂಬಳ: 10,000 ದಿಂದ ಪ್ರಾರಂಭ
9986311444
9986322444

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552
9449408551

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

JOB VACANCY
1.Customer Relationship Executive
2.Service Advisor

*Automobile Experience preferred
*Must Have Fluency in English & Hindi
*Good Computer Knowledge
Share your CV to email :-
vahandhatu2@gmail.com
Ph - 9606998569

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/ PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

ಸಾಧ್ಯಂ ಕೋಚಿಂಗ್ ಸೆಂಟರ್
ಸುವರ್ಣವಕಾಶ
SSLC ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ
ಕ್ರಾಶ್ ಕೋರ್ಸ್ ನೀಡಲಾಗುವುದು
ಹೆಚ್ಚಿನ ಮಾಹಿತಿಗಾಗಿ
86608 34981 / 93531 59464

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

SITE FOR SALE
30X40 W/F
ಶ್ರೀ ಕೃಷ್ಣಧಾಮ ನಗರ ಮುಡಾ ಖಾತಾ, ಕಬಿನಿ ವಾಟರ್ ನಿಯರ್ ಶ್ರೀರಾಂಪುರ ರಿಂಗ್ ರೋಡ್ ಸರ್ಕಲ್
9945562267

ಬೇಕಾಗಿದ್ದಾರೆ
ಮಂಡ್ಯ ಸಿಟಿಯಲ್ಲಿ ಇರುವ ಲೇಡಿಸ್ ಪಿಜಿಯಲ್ಲಿ ಅಡುಗೆ ಕೆಲಸ ಮಾಡಲು ಅನುಭವವುಳ್ಳಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ, ಸೌಲಭ್ಯವಿರುತ್ತದೆ. ಸಂಪರ್ಕಿಸಿ
9844794242
9844894242

ಸುವರ್ಣಾವಕಾಶ
ಪ್ರಸಿದ್ಧ ಷೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, 22000/- salary. 100% ಗ್ಯಾರೆಂಟಿ ಕೆಲಸ
7795474282, 7353000488

SITE FOR SALE
52x60 S/W Corner site for sale in HPO and RMS Layout, Near Dr. Rajkumar Road. Good location. Contact:
Mob: 9880344263

SHOPS FOR RENT
Suitable for hotels & bar at Shop No. 1 & 2 at Calinga Market, Santhepet, Behind Lansdowne Building.
Mob: 8123124551

ಮದುವೆಯಾಗಲಿಲ್ಲವೇ ?
ಶೀಘ್ರ ವಿವಾಹಕ್ಕಾಗಿ ಸಂಪರ್ಕಿಸಿ
ವಧು–ವರರ ಹುಡುಕಾಟದಲ್ಲಿದ್ದೀರಾ? ಚಿಂತಿಸಬೇಡಿ, ಎಲ್ಲಾ ಜಾತಿಯ ವಧು ವರರ ವೈವಾಹಿಕ ಸಂಬಂಧದ ಸೂಕ್ತವಾದ ಆಯ್ಕೆಗೆ ಸಂಪರ್ಕಿಸಬಹುದು. (ಎರಡನೇ ವಿವಾಹಕ್ಕಾಗಿ) ವಿಧವೆ, ವಿಧುರ, ವಿಚ್ಛೇದಿತರು, ಜಾತಿಯ ಅಭ್ಯಂತರವಿಲ್ಲದವರು ಸಂಪರ್ಕಿಸಬಹುದು. ವಧುಗಳಿಗೆ ಮಾತ್ರ ಉಚಿತ ನೋಂದಾವಣಿ, ವಧುವಿನ ಮದುವೆಗೆ ಹಣಕಾಸಿನ ಆರ್ಥಿಕ ಸಹಾಯ ಮಾಡಲಾಗುವುದು. ವಧು–ವರರು ಹೆಸರು ನೊಂದಾಯಿಸಿ.
Mob: 8904834199

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಶೇಖರ್ ಗೋಲ್ಡ್ ಕಂಪನಿ ನಂಬಿಕೆಗೆ ಮತ್ತೊಂದು ಹೆಸರು
ನೀವು ಗಿರವಿ ಇಟ್ಟಿರುವ ಚಿನ್ನವನ್ನು ಇಂದಿನ ಆನ್ಲೈನ್ ದರಕ್ಕೆ ನಿಮ್ಮ ಸ್ಥಳದಲ್ಲಿ ಮಾರಾಟ ಮಾಡಬೇಕೇ? ಸಂಪರ್ಕಿಸಿ
9964068899

SITE FOR SALE
40X60 North Face at Shakthi Nagar Behind Sub Registrar Office Contact :
9886653351

PRAKRUTHI PROPERTIES
SITES FOR SALE
30x40 Commercial Site Ring Road Facing @Aditya Circle ,
MUDA Approved 30x40, 30x50 Sites Near KHB Kenchalgud
30x55 Old Hs @ Kuvempu Nagar
30x40 Dplx Hs @ Harividyala, Bgdi
20x30 Sites & House Near Kuvempu Nagar
30x50 Crnr Site @ MIT Bangalore Rd
Sites also available Near RT Nagar, Bogadi in & around Mysore
95386 90359, 90359 90359

ಕಳೆದಿದೆ
ಸುಶೀಲ ಶೇಷಾದ್ರಿ ಹೆಸರಿನಲ್ಲಿರುವ ನಂ. 286, 3ನೇ ಕ್ರಾಸ್, ನವಿಲು ರಸ್ತೆ, ಕುವೆಂಪುನಗರ, ಮೈಸೂರು ವಿಳಾಸದ ಮನೆಯ ಮಂಜೂರಾತಿ ಪತ್ರ ಮತ್ತು ಸ್ವಾಧೀನ ಪತ್ರ ಕಳೆದಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
Mob: 8217644323

ಕೆಲಸಕ್ಕೆ ಬೇಕಾಗಿದ್ದಾರೆ
ಪುರುಷರಿಗೆ ಮಾತ್ರ (Age below 35) ESI, PF, Bonus ದೊರೆಯುತ್ತದೆ. ವಿದ್ಯಾರ್ಹತೆ: SSLC and above.
ವಿಶಾಲ್ ಮೆಗಾ ಮಾರ್ಟ್
ಶಿವರಾಂಪೇಟೆ, ಮೈಸೂರು

ಬೇಕಾಗಿದ್ದಾರೆ
Room Boys
ಮಧ್ಯಾಹ್ನ 3 ರಿಂದ 6 ಗಂಟೆಗಳ ತನಕ. ರಾತ್ರಿ: 7 ರಿಂದ
Ganesh Prasad Lodge
Shivarampet, Mysore-1
Mob: 9986756866

ತಕ್ಷಣ ಬೇಕಾಗಿದ್ದಾರೆ
ಮೈಸೂರು ಹೆಸರಾಂತ ಆಸ್ಪತ್ರೆಯಲ್ಲಿ House Keeping ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ ವಯಸ್ಸು : 25 ರಿಂದ 55ರವರೆಗೆ (12 ಗಂಟೆಗೆ) ಹಾಗೂ Security Guards ಪುರುಷರು ಬೇಕಾಗಿದ್ದಾರೆ. ವಯಸ್ಸು 25 ರಿಂದ 60ರವರೆಗೆ (12 ಗಂಟೆಗೆ) (ಕುವೆಂಪುನಗರ, ಕೆ.ಜಿ.ಕೊಪ್ಪಲ್, ಸರಸ್ವತಿಪುರಂ, ಅಶೋಕಪುರಂ, ವಿದ್ಯಾರಣ್ಯಪುರಂ, ಜೆ.ಪಿ.ನಗರ, ಟಿ.ಕೆ.ಲೇಔಟ್, ರಾಮಕೃಷ್ಣನಗರ, ದಟ್ಟಗಳ್ಳಿ ಹಾಗೂ ಬೋಗಾದಿ ಸುತ್ತಮುತ್ತಲಿನವರು ಸಂಪರ್ಕಿಸಿ:
7259598615

AFFIDAVIT
My, Name is Mentioned as Ramesha K but my Daughter Tanvee Ramesh Aadhar card, Study certificate and Birth Certificate my name mentioned as Ramesh K.
I do swear that my name RAMESH K and RAMESHA K Both names belongs to me and both are one and the same refers to me only There is no difference in indentification of personality.
Sd/- Ramesha K

30x40 E/F ಸೈಟು
@ Rs. 62 ಲಕ್ಷ ತಕ್ಷಣ ನೋಂದಣಿ & ಮನೆ ಕಟ್ಟಬಹುದು. ಲಾಲ್ ಬಹದ್ದೂರ್ ಶಾಸ್ತ್ರಿನಗರದ ಪಕ್ಕ ಪೊಲೀಸ್ ಲೇಔಟ್ & JSS ಲೇಔಟ್ ನಂತರ ಚಾಮುಂಡಿಬೆಟ್ಟದ ಹಿಂಭಾಗ
9538583377

SITES FOR SALE
Semi commercial sites for sale in old Kesare Main Road. Easy instalment.
Mob: 9449018933

WANTED
Teaching staff for reputed institution (Experience Preferred) for English, Science and Maths. Transport facilities available. Drop your resume through WhatsApp Contact no:
8971577685, 9980631121

New house for sale
30x35, 4 BHK Duplex house, Dattagalli, near Aditya Circle, Mysore
7204401199, 7795269272

Skanda Construction & Interiors
Starts from Rs. 1900/- sq.ft.
INTERIORS
2 BHK starts from Rs. 3 Lakhs.
Mob: 9663246069

ಜಮೀನು ಬೇಕಾಗಿದೆ
ನಾಗವಾಲ, ಹುಯಿಲಾಳು ಹಾಗೂ ಬೊಮ್ಮೇನಹಳ್ಳಿ ಸಮೀಪ 1 ಎಕರೆ ಜಮೀನುಳ್ಳ ಮಾಲೀಕರು ಮಾತ್ರ ಸಂಪರ್ಕಿಸಿ
8073300783, 7411356023

ತಕ್ಷಣ ಬೇಕಾಗಿದ್ದಾರೆ
ಮಂಡ್ಯ ಹಾಗೂ ಮೈಸೂರು ಜಿಲ್ಲೆಯಲ್ಲಿರುವ ಪ್ರಸಿದ್ಧ ಸಂಸ್ಥೆಯಲ್ಲಿ Tele-Caller ಹುದ್ದೆಗೆ ಕೆಲಸ ಖಾಲಿ ಇದೆ. (Work from Office) ಖಾಲಿ ಇರುವ ಸಂಖ್ಯೆ 30 Nos. ವಿದ್ಯಾರ್ಹತೆ: 2nd PUC, Degree Master Degree ಹೊಸಬರು ಅರ್ಜಿ ಸಲ್ಲಿಸಬಹುದು. Work from Home ಸೌಲಭ್ಯವಿದೆ. ಇಂದೇ ಸಂಪರ್ಕಿಸಿ
ಮಂಡ್ಯ : **9606827667**
ಮೈಸೂರು : **9606822012**

ಮನೆ ಮಾರಾಟಕ್ಕಿದೆ
20x30, 30x40 ಸೈಟ್ ಮಾರಾಟಕ್ಕಿದೆ 30x50
9008711654

DTCP Sites for Sale
Thalur Circle, Mysuru
Rs. 1800/- per sq.ft.
H.D. Kote Road.
Mob: 9611110601

ತಕ್ಷಣ ಬೇಕಾಗಿದ್ದಾರೆ
ಆತ್ಮೀಯರೇ ಹುಣಸೂರು ರಸ್ತೆ, ಬೆಳವಾಡಿ ಮತ್ತು ವಿಶ್ವೇಶ್ವರ ನಗರ ಇಂಡಸ್ಟ್ರಿಯಲ್ ಸಬರ್ಬ್, ಜೆ.ಪಿ. ನಗರದಲ್ಲಿ ಇರುವ ಒಂದು ಹೆಸರಾಂತ ಕಂಪನಿಗೆ SSLC ತನಕ ವಿದ್ಯಾಭ್ಯಾಸ ಇರುವ ಸೆಕ್ಯೂರಿಟಿ ಗಾರ್ಡ್‌ಗಳು, ಮತ್ತು ಸೂಪರ್‌ವೈಸರ್‌ಗಳು ತಕ್ಷಣ ಬೇಕಾಗಿದ್ದಾರೆ. 8 hrs ಡ್ಯೂಟಿ, 3 ಶಿಫ್ಟ್, 26, ಡೇಸ್, Free ಊಟ, ತಿಂಡಿ ಸೌಲಭ್ಯ, ESI and EPF ಸೌಲಭ್ಯ, Escorts and ಕಂಪನಿ ಡ್ಯೂಟಿ. 21 ಸಾವಿರ ಸ್ಯಾಲರಿ. ಆಸಕ್ತರು ಕೂಡಲೇ ಈ ನಂಬರ್‌ಗೆ ಕರೆ ಮಾಡಿ.
Mob: 9900066284

WANTED
LADY RECEPTIONIST with computer knowledge.
Mob: 9900949020

Premium Site for Sale
Kuberananda Sagara
46x60 S/F
50 feet Road, Opp. Park.
Mob: 8050821108

COMMERCIAL SITE FOR SALE
40x60 East facing Ramakrishna Nagar 'H' Block, near Ruby Bakery. Attractive price.
Mob: 9845608259

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಬೈಪಾಸ್ ರಸ್ತೆಯಲ್ಲಿರುವ ಆಚಾರ್ಯ ವಿದ್ಯಾಕುಲ ಹಿಂಭಾಗ ನಿತ್ಯಾನಂದ ಸಾಗರ ಬಡಾವಣೆಯಲ್ಲಿ 40 ಅಡಿ ರಸ್ತೆಯಲ್ಲಿರುವಂತಹ 30x40 ಅಳತೆಯ ಈಸ್ಟ್ ಫೇಸ್ ಮನೆ ಬೋರವೆಲ್ 3 ಬೆಡ್ ರೂಂ ಅಟ್ಯಾಚ್ಡ್ ಬಾತ್ ರೂಂ ಫುಲ್ ಫರ್ನಿಷಡ್ 2 ಅಂತಸ್ತಿನ ಹೊಸ ಮನೆ ಮಾರಾಟಕ್ಕಿದೆ.
ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)
9483862050,7829779070

SITES - 7KM ಅರಮನೆಯಿಂದ
20x30, 30x40, 30x50,40x60
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ಗಳಲ್ಲಿ
* ಬನ್ನೂರು ರಸ್ತೆ–ದೇವೇಗೌಡ ಸರ್ಕಲ್ ಬಳಿ
* ಟಿ.ಎನ್.ಪುರ ರಸ್ತೆ–ಪೊಲೀಸ್ ಲೇಔಟ್ ಎದುರು
* ದಟ್ಟಗಳ್ಳಿ –ಶ್ರೀರಾಂಪುರ ರಿಂಗ್ ರಸ್ತೆ ಪಕ್ಕ
* ಲಲಿತಾದ್ರಿಪುರ ರಿಂಗ್ ರಸ್ತೆ ಸಮೀಪ
* ಬೋಗಾದಿ ರಸ್ತೆ/ಇಲವಾಲ/ಶ್ರೀನಗರ ಸಮೀಪ
NO COMMISSION, BROKER EXCUSE
8123075038

SBIT TRAVELS
Group Tours
SINGAPORE & MALAYSIA 5N6D
JUNE 05,14,23,30|JULY 02,10,18,28,31
BALI 5N6D
JUNE 01,11,22,29 |JULY 08 19,22,27,31
(SaraswathiPuram, Mysuru)
9343524127

MUDA ನಿವೇಶನ ಮಾರಾಟಕ್ಕಿದೆ
30x50 W/F
ಸಿಲಿಕಾನ್ ವ್ಯಾಲಿ ಫೇಸ್–2 ಬಡಾವಣೆ ಡಿ.ಪೌಲ್ ಶಾಲೆ ಎದುರು ಕೆ.ಆರ್.ಎಸ್ to ಇಲವಾಲ ಮುಖ್ಯ ರಸ್ತೆ, ಬಸ್ತಿಪುರ ಗ್ರಾಮ ಬೆಲೆ: 50 ಲಕ್ಷ (E ಸ್ವತ್ತು ರೆಡಿ ಇದೆ)
9341384844

ಹೋಟೆಲ್‌ನಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್ ಹಾಗೂ ರೂಮ್‌ಬಾಯ್ (Male) ಬೇಕಾಗಿದ್ದಾರೆ
9900944743
9535744143

ಕೆಲಸ ಖಾಲಿ ಇದೆ ಮೋಟೋರೈಡ್ ಸ್ಕೂಟರ್ ರೆಂಟಲ್ ಕಂಪನಿಗೆ
9611279985

ಜಮೀನು ಹಾಗೂ ಪಿಜಿ ಬಾಡಿಗೆಗೆ ಇದೆ
ಬೋಗಾದಿ ರಿಂಗ್ ರಸ್ತೆಯಿಂದ 3 ಕಿ.ಮೀ ದೂರದಲ್ಲಿ ಎಲ್ಲಾ ಸೌಕರ್ಯವಿರುವ ಅಲಿನೇಶನ 2 1/4 ಎಕರೆ ಜಮೀನು ವಿವಿಧ ಉದ್ದೇಶಗಳಿಗೆ ಹಾಗೂ ಅಪೋಲೋ ಆಸ್ಪತ್ರೆ ರಸ್ತೆಯಲ್ಲೆ 8 ರೂಮಿನ ಎಲ್ಲಾ ಸೌಕರ್ಯವಿರುವ ಪಿಜಿ ಬಾಡಿಗೆಗೆ ಇದೆ
8197609290

ಶ್ರೀ ಶಂಕರ ಟೂರಿಸ್ಟ್
23–5–2025 ರಿಂದ 25–5–2025 ಹರಿಹರಪುರ, ಶೃಂಗೇರಿ, ಕಮಲಶಿಲೆ, ಉಡುಪಿ ಬೀಚು, ಕಾಪು ಮಾರಿಯಮ್ಮ ಕಟೀಲು, ಪೊಳಲಿ ರಾಜರಾಜೇಶ್ವರಿ (ವಸತಿ, ಊಟ, ತಿಂಡಿ ಸೇರಿ ಕೇವಲ ರೂ.2000/–
9986160674
9008165171

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ 15000/– ಮೇಟಗಳ್ಳಿ, ವಿಜಯನಗರ 4ನೇ ಹಂತ, ಕೂರ್ಗಳ್ಳಿ ಸುತ್ತ ಮುತ್ತ ಪ್ರದೇಶದಲ್ಲಿ. ಸಂಪರ್ಕಿಸಿ:
9035367083
6361548626

SITE FOR SALE
60X40 W/F
90 LAC, Nego
JP Nagar Ring Road near
60x40 E/F SF.
55 Lac, Nego
Brahmins Layout
9341624462

WANTED IMMEDIATELY
RRR MEDIA
RECEPTIONIST
MARKETING EXECUTIVES
LOCATION:
AGRAHARA, MYSORE
9886868592

ಸೈಟುಗಳು ಮಾರಾಟಕ್ಕಿದೆ
30x40 S/F
ದ್ವಾರಕನಗರ ಬೆಲೆ 50 ಲಕ್ಷ
30x40 S/F
ಮಥುರನಗರ ಬೆಲೆ 35 ಲಕ್ಷ
9538412881

ಸಾಲ/LOANS
* House / Site Purchase
* Construction Loan
* House / Site Mortgage
Loans for MUDA, Corporation & Revenue Property.
77605-98705

ಜಮೀನುಗಳು ಮಾರಾಟಕ್ಕಿವೆ
ಮೈಸೂರು ತಾ. ಜಯಪುರ ಹೋಬಳಿಯಲ್ಲಿ 12 ಗುಂಟೆ 32 ಗುಂಟೆ, 25 ಗುಂಟೆ ಕಂಚಮಳ್ಳಿ ಮುಖ್ಯರಸ್ತೆಯಲ್ಲಿ
1 ಎಕರೆ 9 ಗುಂಟೆ ಸರಿಗಮಾ ಹತ್ತಿರ
1 ಎಕರೆ ಕಪಿಲಾ ಚನಾಲ್ ಪಕ್ಕದಲ್ಲಿದೆ.
1 ಎಕರೆ 4 ಗುಂಟೆ ಕಾಲುವೆ ತುಂಬಾ ಹತ್ತಿರ ಜಮೀನುಗಳು ಮಾರಾಟಕ್ಕಿವೆ.
9945661696
9945980000

D.S SECURITY FORCE
ನಮ್ಮಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್ ಮತ್ತು ಲೇಡಿ ಗಾರ್ಡ್‌ಗಳು, ವಿಜಯನಗರ 2ನೇ ಹಂತ, ಹಾರ್ಡಿಂಗ್ ವೃತ್ತ, ಭುಗತಗಳ್ಳಿ, ಮೈಸೂರು ಜೂ, ಜೆ.ಪಿ.ನಗರ, ದುದ್ದಗೆರೆಯಲ್ಲಿ ಕಾರ್ಯನಿರ್ವಹಿಸಲು ನುರಿತ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು.
8073594977,9036321118
7411115516

ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ.
Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ.
ಬೇಕಾಗುವ ದಾಖಲಾತಿಗಳು
1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ದಿನಾಂಕ 12–05–2025 ಸ್ಥಳ: Sharada Platina, 1st Floor Opp. Townhall. Followed by Lunch
9448376423,9886883858

AFFIDAVIT
My Name is Mentioned as Ramesha K but my Son ASHEESH R Aadhar card, Study certificate and Birth Certificate my name mentioned as Ramesh K. I do swear that my name RAMESH K and RAMESHA K Both names belongs to me and both are one and the same refers to me only There is no difference in indentification of pesonality.
Sd/- Ramesha K

ಸೈಟು ಬೇಕಾಗಿದೆ
ಚಿಕ್ಕಹಳ್ಳಿ/ವರುಣ/ವಾಜಮಂಗಲ/ ಜೆಎಸ್‌ಎಸ್/ಬಸವೇಶ್ವರ/ ನಿರ್ಮಾಣ್ ನಗರ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ
9686071750

ಸೈಟು ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ/ ಶಾಂತವೇರಿ ಗೋಪಾಲ್ ಗೌಡ ವಸಂತ್ ನಗರ/ ಲಲಿತಾದ್ರಿನಗರ 20x30, 30x40
9164560494

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಜಿಲ್ಲಾ ಹಾಲು ಒಕ್ಕೂಟ ವ್ಯಾಪ್ತಿಯ

65 ಸಾವಿರ ಹೈನುಗಾರರಿಗೆ ಉಚಿತ ವಿಮೆ

ಬಿಎಂಸಿ ಕೇಂದ್ರಕ್ಕೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಭೂಮಿ ಪೂಜೆ


ಬಿಎಂಸಿ ಕೇಂದ್ರ ನಿರ್ಮಾಣಕ್ಕೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಭೂಮಿ ಪೂಜೆ ನೆರವೇರಿಸಿದರು.

ಹೆಮ್ಮರವಾಗಿ ಬೆಳೆಯುತ್ತಿದೆ ಹೈನುಗಾರಿಕೆ

"ರಾಜ್ಯದಲ್ಲಿ ಹೈನುಗಾರಿಕೆ ಹೆಮ್ಮರವಾಗಿ ಬೆಳೆಯುತ್ತಿದೆ. ಈ ಭಾಗದ ರೈತರು ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು. ಗ್ರಾಮೀಣ ಪ್ರದೇಶದಿಂದ ಉದ್ಯೋಗ ಅರಸಿ ಯುವಕರು ಪಟ್ಟಣಕ್ಕೆ ಗುಳೆ ಹೋಗುತ್ತಿರುವುದನ್ನು ತಡಗಟ್ಟಲು ಹೈನೋದ್ಯಮ ಹೆಚ್ಚಿನ ಅಭಿವೃದ್ಧಿ ಆಗಬೇಕಿದೆ. ಮೈಸೂರು ಹಾಲು ಒಕ್ಕೂಟದಿಂದ ಮುಂದಿನ 2 ತಿಂಗಳ ಅವಧಿಯಲ್ಲಿ ಹೈನಗಾರಿಕೆಗೆ ಬೇಕಾದ ಮ್ಯಾಟ್, ಚಾಬ್ ಕಟರ್‌ಗಳನ್ನು, ಶೇ.50 ರ ಸಬ್ಸಿಡಿ ದರದಲ್ಲಿ ನೀಡಲಾಗುತ್ತದೆ. ರೈತರು ಇದರ ಸದುಪಯೋಗ ಪಡೆಯುವ ಮೂಲಕ ಹೈನುಗಾರಿಕೆ ಹೆಚ್ಚಿನ ಒತ್ತು ನೀಡಬೇಕು.

- ಆರ್.ಚೆಲುವರಾಜು, ಮೈಮುಲ್ ಅಧ್ಯಕ್ಷ.

ತಿ.ನರಸೀಪುರ, ಮೇ 9– ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಗೆ ಒಳಪಡುವ 65 ಸಾವಿರ ಹೈನುಗಾರರಿಗೆ ಉಚಿತವಾಗಿ ವಿಮೆ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಹೇಳಿದರು.

ತಾಲೂಕಿನ ಬಿಲಿಗೆರೆಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಿರ್ಮಿಸಲುದ್ದೇಶಿಸಿರುವ ಬಿಎಂಸಿ ಕೇಂದ್ರಕ್ಕೆ ಶುಕ್ರವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಹೈನುಗಾರರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಈ ಹಿಂದೆ ರೈತರಿಗೆ ಶೇ.50ರ ಸಬ್ಸಿಡಿಯಲ್ಲಿ ವಿಮೆ ಸೌಲಭ್ಯ ಕಲ್ಪಿಸಿಕೊಡುವ ವ್ಯವಸ್ಥೆ ಇತ್ತು. ಇದರಲ್ಲಿ 550 ರೂ.ಗಳ ವಿಮೆ ಮೊತ್ತದ ಪೈಕಿ 275 ರೂ.ಗಳನ್ನು ರೈತರಿಂದ ಪಡೆದು ಉಳಿಕೆ 275 ರೂ.ಗಳನ್ನು ಒಕ್ಕೂಟ ಭರಿಸುತ್ತಿತ್ತು. ಆದರೆ ಒಕ್ಕೂಟ ವ್ಯಾಪ್ತಿಗೊಳಪಡುವ 65 ಸಾವಿರ ಹೈನುಗಾರರ ಪೈಕಿ ಕೇವಲ 10 ಸಾವಿರ ಮಂದಿ ವಿಮೆ ಮಾಡಿಸಿದ್ದನ್ನು ಗಮನಿಸಿ ರೈತರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಒಕ್ಕೂಟದ ನಿರ್ದೇಶಕರ ಸಲಹೆ ಮೇರೆಗೆ ಇನ್ನು ಮುಂದೆ ಎಲ್ಲಾ ರೈತರಿಗೆ ಉಚಿತವಾಗಿ ವಿಮೆ ಮಾಡಿಕೊಡಲಾಗುತ್ತದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಬಿ.ಮಹದೇವಸ್ವಾಮಿ ಮಾತನಾಡಿ, ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ದಿನಕ್ಕೆ ಸಾವಿರ ಲೀಟರ್ ಹಾಲು ಸಂಗ್ರಹಣೆಯಾಗುತ್ತಿದ್ದು, ಮೈಮುಲ್ ಅಧ್ಯಕ್ಷರಿಗೆ ಡೇರಿಯಲ್ಲಿ ಬಿಎಂಸಿ ಕೇಂದ್ರ ಮಾಡಲು ಸಹಕರಿಸುವಂತೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಚೆಲುವರಾಜು ಅವರು ನಮ್ಮ ಮನವಿಗೆ ಸ್ಪಂದಿಸಿ ಭೂಮಿ ಪೂಜೆ ನೆರವೇರಿಸಿದ್ದಾರೆ. ಬಿಎಂಸಿ ಕೇಂದ್ರ ಕಾಮಗಾರಿಯನ್ನು ಗ್ರಾಮದ ಹಾಲು ಒಕ್ಕೂಟ ದಿಂದಲೇ ಆರಂಭಿಸುತ್ತೇವೆ. ನಂತರ ಒಕ್ಕೂಟದ ಅನುದಾನದೊಂದಿಗೆ ಕೇಂದ್ರವನ್ನು ಪೂರ್ಣ ಗೊಳಿಸಲಾಗುತ್ತದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷರಾದ ಓಂಪ್ರಕಾಶ್, ಕೆ.ಜಿ. ಮಹೇಶ್, ಕೆ.ಉಮಾಶಂಕರ್, ಹಿರಿಯ ನಿರ್ದೇಶಕರಾದ ಸದಾನಂದ, ಲೀಲಾಂಬಿಕೆ ಮಹೇಶ್, ಲೀಲಾ ನಾಗರಾಜು, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಡೈರಿ ಉಪಾಧ್ಯಕ್ಷ ಏಳುಮಲೆ ಮಂಜು, ನಿರ್ದೇಶಕರಾದ ಶಂಕರ್, ಪಾಪನಾಯಕ, ಸಿದ್ದರಾಜು, ಗ್ರಾಪಂ ಮಾಜಿ ಅಧ್ಯಕ್ಷೆ ಚಂದ್ರಮ್ಮ, ಸದಸ್ಯ ಮಹೇಶ್, ಸಹಕಾರ ಸಂಘದ ನಿರ್ದೇಶಕಿ ಗೌರಮ್ಮಣಿ ಮಹದೇವಸ್ವಾಮಿ, ಮೈಮುಲ್ ವ್ಯವಸ್ಥಾಪಕ ಸುರೇಶ್ ನಾಯ್ಕ, ಬಿಎಂಸಿ ವ್ಯವಸ್ಥಾಪಕ ಸಂತೋಷ್, ಹಿರಿಯ ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಶೃತಿ, ಡೈರಿ ಕಾರ್ಯದರ್ಶಿಗಳಾದ ಪುರುಷೋತ್ತಮ್, ಅಂದಾನಿಗೌಡ, ಗಿರೀಶ್, ಮುಖಂಡರಾದ ರಾಜೀವ್, ನಾಗರಾಜ್(ತಾತ), ಶಿವರುದ್ರಗೌಡ, ವೀರಶೈವ ಮಹಾಸಭಾ ನಿರ್ದೇಶಕ ಮಹಾಲಿಂಗಸ್ವಾಮಿ, ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷ ಸಿದ್ದರಾಜು ಮತ್ತಿತರರಿದ್ದರು.

1.60 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ


1.60 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು/ಮಲ್ಲುಂಡಿ, ಮೇ 9– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಜಮೀರ್ ಅಹ್ಮದ್ ಅವರ ಸಹಕಾರದಿಂದಾಗಿ ನಂಜನಗೂಡು ಕ್ಷೇತ್ರದ ಅಲ್ಪಸಂಖ್ಯಾತರ ಬೀದಿ ಅಭಿವೃದ್ಧಿಗಾಗಿ 5 ಕೋಟಿ ಅನುದಾನ ಮಂಜೂರಾಗಿದೆ. ತಾಲೂಕಿನ ಹುಲ್ಲಹಳ್ಳಿ, ಹಗಿನವಾಳು, ಹಲ್ಲರೆ ಗ್ರಾಮಗಳಲ್ಲಿ ಅಲ್ಪಸಂಖ್ಯಾತರ ಬೀದಿಯಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಅಲ್ಪಸಂಖ್ಯಾತರ ಇಲಾಖೆಯಿಂದ ಸಚಿವ ಜಮೀರ್ ಅಹಮ್ಮದ್ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಾಗಿ 5 ಕೋಟಿ ಅನುದಾನ ನೀಡಿದ್ದಾರೆ. ಅದರಲ್ಲಿ ಮೊದಲ ಭಾಗವಾಗಿ 1.60 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಗ್ರಾಮಸ್ಥರ ಬಹು ದಿನದ ಬೇಡಿಕೆಯಂತೆ 50 ಲಕ್ಷ ವೆಚ್ಚದಲ್ಲಿ ಹುಲ್ಲಹಳ್ಳಿ, ಹಲ್ಲರೆ, ಹಗಿನವಾಳು ಗ್ರಾಮದಲ್ಲಿ ತಲಾ 25 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಹುಲ್ಲಹಳ್ಳಿ ತಾಲೂಕಿನಲ್ಲಿ ದೊಡ್ಡ ಹೋಬಳಿ ಕೇಂದ್ರವಾಗಿರುವುದರಿಂದ ಇದರ ಸಮಗ್ರ ಅಭಿವೃದ್ಧಿಗಾಗಿ ಆದ್ಯತೆ ನೀಡಲಾಗಿದೆ. ಸಿಆರ್‌ಎಫ್(ಸೆಂಟ್ರಲ್ ರೋಡ್ ಫಂಡ್) ಯೋಜನೆಯಡಿ 6 ಕೋಟಿ ವೆಚ್ಚದಲ್ಲಿ ಹುರ, ಕಡಜಟ್ಟಿ, ಜಾಲಹಳ್ಳಿ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಜೊತೆಗೆ ಹುಲ್ಲಹಳ್ಳಿ ಗ್ರಾಮದಲ್ಲಿ ಹೊಸದಾಗಿ ಪಿಯುಸಿ ಕಾಲೇಜು ಕಟ್ಟಡ ಕಟ್ಟಲು ಎರಡು ಕೋಟಿ ಅನುದಾನ ಮೀಸಲಿಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಪಿಯುಸಿ ಕಾಲೇಜು ಕಟ್ಟಡ ಪೂರ್ಣಗೊಳಿಸಲಾಗುವುದು. ಜೊತೆಗೆ ಎಸ್‌ಇಪಿ, ಟಿಎಸ್ಪಿ ಯೋಜನೆಯಡಿ ರಸ್ತೆ ಅಭಿವೃದ್ಧಿಗೆ 50 ಲಕ್ಷ ಅನುದಾನ ಟೆಂಡರ್ ಹಂತದಲ್ಲಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು. ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಆಸ್ಪತ್ರೆ, ಕೃಷಿ ಇಲಾಖೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾರ್ಯ ನಡೆಯಲಿದೆ. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಕೆ–ಶಿಫ್ ಯೋಜನೆಯಡಿ ಹುಲ್ಲಹಳ್ಳಿ–ನಂಜನಗೂಡು– ಸಂತೆಮರಳ್ಳಿಗೆ ಸಂಪರ್ಕ ಕಲ್ಪಿಸುವ 55 ಕಿಮೀ ರಸ್ತೆ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ದೊರೆಯಲಿದೆ ಎಂದರು.

ತಾಲೂಕಿನ ಹುಚ್ಚಗಣಿ ಗ್ರಾಮದಲ್ಲಿ ಆದಿಶಕ್ತಿ ಅಮ್ಮನವರ ದೇವಾಲಯದ ಮುಂದುವರೆದ ಕಾಮಗಾರಿಗೆ 25 ಲಕ್ಷ ಮತ್ತು ದೇಬೂರು ಗ್ರಾಮದಲ್ಲಿ ಎಸ್‌ಇಪಿ ಯೋಜನೆಯಡಿ 30 ಲಕ್ಷ ವೆಚ್ಚದಲ್ಲಿ ಹಂದಿ ಜೋಗಿ ಮತ್ತು ಪೌರಕಾರ್ಮಿಕರ ಬೀದಿ ರಸ್ತೆಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಇಂದು 1.60 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಅನ್ಸರ್ ಅಹಮದ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಹುಲ್ಲಹಳ್ಳಿ ಗ್ರಾಪಂ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ಲೋಕೇಶ್, ಪುರಸಭೆ ಮಾಜಿ ಅಧ್ಯಕ್ಷ ಚೆಲುವರಾಜು, ಮುಖಂಡರಾದ ರೆಹಮತುಲ್ಲಾ ಖಾನ್, ಅಭಿನಂದನ್ ಪಟೇಲ್, ಪಾಂಡು, ಮಹೇಶ್, ಸೋಮೇಶ್, ನಾಗೇಶ್, ಪರಶಿವಮೂರ್ತಿ, ಬಸವಣ್ಣ, ಮರಿಸ್ವಾಮಿ, ಶಿವನಂಜ ನಾಯಕ ಸೇರಿದಂತೆ ಹಲವರಿದ್ದರು.

ಶ್ರೀಆದಿಶಕ್ತಿ ಪಟ್ಟಲದಮ್ಮನವರ ಕುಂಭಾಭಿಷೇಕ


ಶ್ರೀಆದಿಶಕ್ತಿ ಪಟ್ಟಲದಮ್ಮನವರ ಕುಂಭಾಭಿಷೇಕ ವಿಜೃಂಭಣೆಯಿಂದ ನೆರವೇರಿತು.

ಹೆಚ್.ಡಿ.ಕೋಟೆ, ಮೇ 9– ಪಟ್ಟಣದ ಶ್ರೀಆದಿಶಕ್ತಿ ಪಟ್ಟಲದಮ್ಮನವರ 41ನೇ ಕುಂಭಾಭಿಷೇಕ ವಿಜೃಂಭಣೆಯಿಂದ ನೆರವೇರಿತು.

ಕುಂಭಾಭಿಷೇಕ ಅಂಗವಾಗಿ ಪಟ್ಟಲದಮ್ಮನವರಿಗೆ 3 ದಿನಗಳಿಂದ ಹೋಮ, ಅಬಿಷೇಕ, ಪೊಂಗಲ್ ನೈವೇದ್ಯ, ಮಹಾ ಮಂಗಳಾರತಿ ನೆರವೇರಿಸಲಾಯಿತು.

ಗುರುವಾರ ಪಟ್ಟಣ ಸಮೀಪದ ಹೆಬ್ಬಾಳ ಜಲಾಶಯದಿಂದ ಕುಂಭಾಭಿಷೇಕ ಕಳಸದೊಂದಿಗೆ ಬೆಳ್ಳಿರಥದಲ್ಲಿ ಶ್ರೀಆದಿಶಕ್ತಿ ಪಟ್ಟಲದಮ್ಮನವರ ಉತ್ಸವ ಮೂರ್ತಿಯನ್ನು ದೇವಸ್ಥಾನದವರೆಗೆ ಮೆರವಣಿಗೆ ಮಾಡಲಾಯಿತು. ಶುಕ್ರವಾರ ಅಮ್ಮನವರಿಗೆ ಅಭಿಷೇಕ, ಪೊಂಗಲ್ ನೈವೇದ್ಯದ ನಂತರ ಶ್ರೀರಾಮಲಿಂಗೇಶ್ವರ ದೇವಸ್ಥಾನದಿಂದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯ, ನಗಾರಿ, ತಮಟೆ ಸದ್ದಿನೊಂದಿಗೆ ತಂಪು ಮೆರವಣಿಗೆ ಮಾಡಲಾಯಿತು.

20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪೌರಕಾರ್ಮಿಕರ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಶಾಸಕ ಅನಿಲ್, ಪೌರಕಾರ್ಮಿಕರು ಶ್ರಮಜೀವಿಗಳಾಗಿದ್ದು, ಪಟ್ಟಣ ಸೌಂದರ್ಯವಾಗಿ ಕಾಣಬೇಕಾದರೆ ಪೌರಕಾರ್ಮಿಕರ ಸೇವೆ ಅಮೂಲ್ಯವಾದದು ಎಂದರು.

ಈ ವೇಳೆ ಸಮುದಾಯದ ಗಡಿ ಯಜಮಾನರಾದ ಸುಬ್ರಹ್ಮಣ್ಯ, ಶ್ರೀಆದಿಶಕ್ತಿ ಪಟ್ಟಲದಮ್ಮ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಶ್ರೀರಂಗ, ಚೆಲುವ, ಗಣೇಶ್, ಮಾದ, ಬಣ್ಣಾರಿ, ಆರ್.ವಿಜಯ್ ಇನ್ನಿತರರಿದ್ದರು.

ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ: ಶಾಸಕ ಜಿಡಿಹೆಚ್


ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ಮೇ 9– ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಪಡಿಸುವುದರಿಂದ ಗ್ರಾಮಗಳು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಹೀಗಾಗಿ ಕ್ಷೇತ್ರದಲ್ಲಿ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಹಿಂಡಗೂಡ್ಲುನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರ ವ್ಯಾಪ್ತಿಯ ಗ್ರಾಮಗಳ ಬಹುತೇಕ ರಸ್ತೆಗಳು ಹದಗೆಟ್ಟಿದ್ದು, ಇದರಿಂದ ಜನರು ತೀವ್ರ ತೊಂದರೆ ಎದುರಿಸುತ್ತಿದ್ದಾರೆ. ಈ ಸಮಸ್ಯೆ ಬಗೆಹರಿಸಲು ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಹಂತ ಹಂತವಾಗಿ ಎಲ್ಲಾ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದರು.

ಹಿಂಡಗೂಡ್ಲು ಗ್ರಾಮದಿಂದ ಹಳೆಯೂರು ರಸ್ತೆ ಕಾಮಗಾರಿಗಾಗಿ 1.5 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಜನರು ಪಕ್ಷಬೇಧ ಮರೆತು ಸಮಸ್ಯೆಗಳನ್ನು ನನ್ನ ಗಮನಕ್ಕೆ ತರಬೇಕು. ಅವುಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಿಕೊಡುತ್ತೇನೆ ಎಂದರು.

ಅಂತರ್ಜಲ ಕುಸಿತದಿಂದಾಗಿ ಕೊಳವೆ ಬಾವಿಯಲ್ಲಿ ನೀರು ಕಡಿಮೆಯಾಗುತ್ತಿದೆ. ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚುತ್ತಿರುವ ಕಾರಣ ಜನರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಆದ್ದರಿಂದ ಗ್ರಾಮೀಣ ಭಾಗದಲ್ಲಿ ಅಗತ್ಯವಿರುವ ಕಡೆಗಳಲ್ಲಿ ಕುಡಿಯುವ ನೀರು ಶುದ್ಧೀಕರಣ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು, ರಸ್ತೆ ಚರಂಡಿ ಸೇರಿದಂತೆ ಮೂಲ ಸೌಕರ್ಯಗಳ ಕೊರತೆ ಸಾಕಷ್ಟಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಕಾಲಾವಕಾಶ ಬೇಕು. ಆದ್ಯತೆ ಮೇರೆಗೆ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ ಎಂದರು.

ಸಮಾರಂಭದಲ್ಲಿ ಕಾವೇರಿ ನೀರಾವರಿ ನಿಗಮದ ಎಇಇ ಮೋಹನ ಕುಮಾರ್, ಗ್ರಾಪಂ ಅಧ್ಯಕ್ಷ ಹರೀಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್ ಯಜಮಾನರಾದ ಶಿವಕುಮಾರ್, ಜೆಡಿಎಸ್ ಮುಖಂಡ ಸತೀಶ್, ಪಾಪಣ್ಣ, ಗೋವಿಂದೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕೆಂಪೇಗೌಡ, ಸೊಸೈಟಿ ಮಾಜಿ ಅಧ್ಯಕ್ಷ ಹನುಮು, ರಾಜೇಗೌಡ, ಪಿಡಿಓ ಭವ್ಯ, ಶೇಖರೇಗೌಡ, ಶಿವರಾಜೇಗೌಡ, ರಾಜೇಗೌಡ ಇತರರಿದ್ದರು.

ಅನುಸೂಯಮ್ಮ ನಿಧನ



ಹುಣಸೂರು, ಮೇ 9– ತಾಲೂಕು ತಂಬಾಕು ಮಂಡಳಿ ಮಾಜಿ ಅಧ್ಯಕ್ಷ ದಿ.ಹೊಂಬೇಗೌಡರ ಪತ್ನಿ ಅನುಸೂಯಮ್ಮ(83) ಶುಕ್ರವಾರ ಕಟ್ಟೆಮಳಲವಾಡಿ ತೋಟದ ಮನೆಯಲ್ಲಿ ನಿಧನರಾದರು. ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ತೋಟದಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರವಿಕುಮಾರ್



ನಂಜನಗೂಡು, ಮೇ 9– ನಗರದ ರಾಯಲ್ ಕಂಪ್ಯೂಟರ್ಸ್ ಮಾಲೀಕ ರವಿಕುಮಾರ್ (59) ಶುಕ್ರವಾರ ನಿಧನರಾದರು. ಮೃತರು ಪತ್ನಿ ಸುಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ನಗರದ 16 ಕಾಲು ಮಂಟಪದ ಬಳಿಯ ರುದ್ರಭೂಮಿಯಲ್ಲಿ ನೆರವೇರಿತು.

ತಂಬಾಕು ಬೆಳೆಗಾರರಿಗೆ ರಸಗೊಬ್ಬರ ಪೂರೈಸಲು ಕ್ರಮ ಕೈಗೊಳ್ಳಿ



ಮೈಸೂರು, ಮೇ 9– ಮೈಸೂರು–ಕೊಡುಗು ಲೋಕಸಭಾ ಕ್ಷೇತ್ರದ ಹುಣಸೂರು ಮತ್ತು ಪಿರಿಯಾಪಟ್ಟಣದಲ್ಲಿ ಅತೀ ಹೆಚ್ಚು ತಂಬಾಕು ಬೆಳೆಗಾರರಿದ್ದು, ಅವರಿಗೆ ರಸಗೊಬ್ಬರ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೂಚನೆ ನೀಡಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ತಂಬಾಕು ಬೆಳೆಗಾರರಿಗೆ ಯಾವುದೇ ತೊಂದರೆಯಾಗಬಾರದು ಎಂಬುದೇ ನಮ್ಮ ಮುಖ್ಯ ಗುರಿಯಾಗಿದೆ. ಹೀಗಾಗಿ ರೈತರಿಗೆ ಅನುಕೂಲವಾಗಲೆಂದು ಈ ಭಾನುವಾರವೂ ಮೇ 11ರಂದು ರಸಗೊಬ್ಬರ ಪೂರೈಕೆ ಮಾಡಲು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ತಂಬಾಕು ಬೆಳೆಗಾರರು ಭಾನುವಾರವೂ ನೀಡಲಾಗುತ್ತಿರುವ ಈ ಸೌಲಭ್ಯ ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಸಂಸದರ ಈ ನಡೆಗೆ ತಂಬಾಕು ಬೆಳೆಗಾರರ ಒಕ್ಕೂಟಗಳು ಅಭಿನಂದನೆ ಸಲ್ಲಿಸಿವೆ.

ಆದಿಶಕ್ತಿ ದೇವಾಲಯ ನಿರ್ಮಾಣಕ್ಕೆ ಭೂಮಿ ಪೂಜೆ


ಮೈಸೂರು ತಾಲೂಕಿನ ಜಯಪುರದಲ್ಲಿ ಆದಿಶಕ್ತಿ ದೇವಾಲಯ ನಿರ್ಮಾಣಕ್ಕೆ ಶಾಸಕ ಜಿ.ಟಿ.ದೇವೇಗೌಡ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷ ಎಂ.ಮಹದೇವಯ್ಯ, ಉಪಾಧ್ಯಕ್ಷೆ ರಾಣಿ, ಪಿಡಿಓ ಬಸವಣ್ಣ, ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ದೊಡ್ಡಪ್ರಮಾಣ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷ ಮರಿಸಿದ್ದೇಗೌಡ, ನಿರ್ದೇಶಕರಾದ ಅಭಿಷೇಕ್, ಅಬ್ದುಲ್ ಮುತಾಲಿಬ್, ಮಂಜುನಾಥ್, ಗ್ರಾಪಂ ಸದಸ್ಯರಾದ ಬಸವಣ್ಣ, ಎಂ.ನಾಗರಾಜು, ಹರೀಶ್, ಬಿ.ರೇಣುಕಾ, ಭೈರೇಶ್ ಸೇರಿದಂತೆ ಇತರರಿದ್ದರು.

ಮೂಗೂರು ಬಿಎಂಸಿ ಕೇಂದ್ರಕ್ಕೆ ಮೈಮುಲ್ ವ್ಯವಸ್ಥಾಪಕ ನಿರ್ದೇಶಕರ ಭೇಟಿ, ಪರಿಶೀಲನೆ


ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯಕ್ ಪರಿಶೀಲಿಸಿದರು.

ಮೂಗೂರು, ಮೇ 9– ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದ ಬಿಎಂಸಿ ಕೇಂದ್ರಕ್ಕೆ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯಕ್ ಭೇಟಿ ನೀಡಿ ಪರಿಶೀಲಿಸಿದರು.

ಇದಕ್ಕೂ ಮುನ್ನಾ ಗ್ರಾಮದ ಶ್ರೀತ್ರಿಪುರ ಸುಂದರಿ ಅಮ್ಮನವರ ದೇಗುಲದಲ್ಲಿ ಪೂಜೆ ಸಲ್ಲಿಸಿ ಅಮ್ಮನವರ ದರ್ಶನ ಪಡೆದರು. ಬಳಿಕ ಮೂಗೂರು ಬಿಎಂಸಿ ಕೇಂದ್ರ ಭೇಟಿ ನೀಡಿ ಪರಿಶೀಲಿಸಿ ಅವ್ಯವಸ್ಥೆ ಸರಿಪಡಿಸಿಕೊಂಡು ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಡೇರಿ ಸಿಬ್ಬಂದಿಗೆ ಸೂಚಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮೈಮುಲ್ ವತಿಯಿಂದ ಮೂಗೂರು ಬಿಎಂಸಿ ಕೇಂದ್ರದ ಮೇಲ್ಛಾವಣಿ ದುರಸ್ತಿ ಕಾರ್ಯಕ್ಕೆ ಅಗತ್ಯ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು. ರೈತರ ಹಾಲಿಗೆ ಹೆಚ್ಚಿನ ದರ ನೀಡುತ್ತಿರುವುದರಿಂದ ವೆಚ್ಚಕ್ಕೆ ಕಡಿವಾಣ ಹಾಕಿ ಅಗತ್ಯತೆ ಮೇರೆಗೆ ಸಂಘದ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡಲಾಗುವುದು. ಸ್ಥಳೀಯವಾಗಿ ಜಾಗ ದೊರೆತಲ್ಲಿ ಸದ್ಯದಲ್ಲೇ ಮೈಮುಲ್ ಉತ್ಪನ್ನಗಳ ಮಾರಾಟ ಮಳಿಗೆ ಆರಂಭಿಸಬೇಕಿದೆ ಎಂದರು.

ರೈತರಿಗಾಗಿ ಆರೋಗ್ಯ ವಿಮೆ, ಹಾಲು ಉತ್ಪಾದಕ ಸದಸ್ಯರ ಹೆಣ್ಣು ಮಕ್ಕಳಿಗೆ ಉಚಿತ ಹಾಸ್ಟೆಲ್ ವ್ಯವಸ್ಥೆ, ಸಂಘದ ಸಿಬ್ಬಂದಿಗೆ ನಿವೃತ್ತಿ ಭತ್ಯೆ ನೀಡಲಾಗುತ್ತಿದೆ. ಮೂಗೂರು ಬಿಎಂಸಿ ಕೇಂದ್ರ ಉನ್ನತೀಕರಣಕ್ಕೆ ಆಸ್ಥೆ ವಹಿಸುವುದಾಗಿ ತಿಳಿಸಿದರು. ಈ ವೇಳೆ ಡೇರಿ ಅಧ್ಯಕ್ಷ ಬಸವಣ್ಣ, ಒಕ್ಕೂಟದ ಡೆಪ್ಯುಟಿ ಮ್ಯಾನೇಜರ್ ಸಂತೋಷ್, ವಿಸ್ತರಣಾಧಿಕಾರಿ ಪ್ರಮೋದ್, ಡೇರಿ ಇಓ ನಾಗೇಂದ್ರ, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ರೈತರ ಕುಂದುಕೊರತೆ ಸಭೆ

ಹಲವು ಸಮಸ್ಯೆಗಳ ಅನಾವರಣ: ಬಗೆಹರಿಸಲು ಮನವಿ



ತಾಲೂಕು ಮಟ್ಟದ ರೈತರ ಕುಂದು ಕೊರತೆ ಸಭೆ ನಡೆಯಿತು.

ತಿ.ನರಸೀಪುರ ಮೇ 9– ಕೃಷಿ ಚಟುವಟಿಕೆಗೆ ಜೂನ್, ಜುಲೈನಲ್ಲಿ ನಾಲೆಗಳಿಗೆ ನೀರು ಹರಿಸಿ, ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ, ಬ್ಯಾಂಕ್‌ಗಳಲ್ಲಿ ರೈತರು ಅಡವಿಟ್ಟಿರುವ ಚಿನ್ನಾಭರಣ ಬಿಡಿಸಿಕೊಳ್ಳಲು ಕಾಲವಕಾಶ ನೀಡಿ, ತಾಲೂಕಿನಲ್ಲಿ ಜಮೀನು ಸರ್ವೇ ಕಾರ್ಯ ವಿಳಂಬವಾಗುತ್ತಿದೆ. ಹಳ್ಳಿಗಳಲ್ಲಿ ನಡೆಯುತ್ತಿರುವ ಮದ್ಯ ಮಾರಾಟ ತಡೆಗಟ್ಟುವಂತೆ ರೈತರು ಮನವಿ ಮಾಡಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಹಸೀಲ್ದಾರ್ ಸುರೇಶಾಚಾರ್ ಅಧ್ಯಕ್ಷತೆಯಲ್ಲಿ ನಡೆದ ರೈತರ ಕುಂದುಕೊರತೆ ಸಭೆಯಲ್ಲಿ ರೈತರು ಹಲವು ದೂರುಗಳನ್ನು ಸಲ್ಲಿಸಿದರು.

ರೈತ ಮುಖಂಡ ಕಿರಗಸೂರು ಶಂಕರ ಮಾತನಾಡಿ, ಸರ್ಕಾರ ನಾಲೆಗಳಿಗೆ ಆಗಸ್ಟ್ ಕೊನೆ ವಾರದಲ್ಲಿ ನಾಲೆಗಳಿಗೆ ನೀರು ಹರಿಸುತ್ತಿದ್ದು, ಇದರಿಂದ ಭತ್ತ ನಾಟಿ ಮಾಡಲು ವಿಳಂಬವಾಗುತ್ತಿದೆ. ಜೊತೆಗೆ ಫಸಲು ಇಳುವರಿ ಕಡಿಮೆಯಾಗಲಿದೆ ಎಂದರು.

ರೈತರು ಬ್ಯಾಂಕ್‌ಗಳಲ್ಲಿ ಚಿನ್ನಾಭರಣ ಅಡವಿಟ್ಟು ಸಾಲ ಪಡೆದು ಕೃಷಿ ಚಟುವಟಿಕೆ ಕೈಗೊಳ್ಳುತ್ತಾರೆ. ಆದರೆ ಬ್ಯಾಂಕ್ ಅಧಿಕಾರಿಗಳು ಒಂದು ವರ್ಷ ಆದ ತಕ್ಷಣ ಅಸಲು, ಬಡ್ಡಿ ಕಟ್ಟುವಂತೆ ಒತ್ತಾಯಿಸುತ್ತಾರೆ. ಅಲ್ಲದೇ ರೈತರಿಗೆ ಒಂದೇ ಕಂತಿನಲ್ಲಿ ಕಟ್ಟುವಂತೆ ಬ್ಯಾಂಕ್ ಅಧಿಕಾರಿಗಳು ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು. ತಹಸೀಲ್ದಾರ್ ಸುರೇಶಾಚಾರ್ ಮಾತನಾಡಿ, ದೂರವಾಣಿ ಮೂಲಕ ರಿಸರ್ವ್ ಬ್ಯಾಂಕ್ ಅಧಿಕಾರಿಗಳ ಜೊತೆ ಚರ್ಚಿಸಿ, ಮೇ 15 ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯುವ ಸಭೆಯಲ್ಲಿ ಈ ವಿಷಯ ಪ್ರಸಾಪಿಸಲಾಗುವುದು ಎಂದರು.

ಕೆಆರ್‌ಎಸ್ ಉಪ ವಿಭಾಗದ ಮಾದೇಗೌಡನಹುಂಡಿ ಶಾಖೆ ಎಇಇ ಲೋಕನಾಥ್ ಮಾತನಾಡಿ, ಉತ್ತಮ ಮಳೆಯಾಗಿ ಅಣೆಕಟ್ಟೆಗಳು ಭರ್ತಿಯಾದ ನಂತರ ಮೇಲಿನ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನಾಲೆಗಳಿಗೆ ನೀರು ಹರಿಸಲಾಗುವುದು ಎಂದರು.

ತಾಲೂಕು ರೈತ ಸಂಘದ ಅಧ್ಯಕ್ಷ ಕುಮಾರಸ್ವಾಮಿ ಮಾತನಾಡಿ, ಹಳ್ಳಿಗಳ ಪಟ್ಟಿಗೆ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಚಿಕ್ಕ ವಯಸ್ಸಿನ ಮಕ್ಕಳು ಇದರ ದಾಸರಾಗುತ್ತಿದ್ದಾರೆ. ಹೀಗಗಿ ಇದನ್ನು ಪೊಲೀಸ್ ಅಧಿಕಾರಿಗಳು ನಿಯಂತ್ರಿಸಬೇಕು ಎಂದರು.

ಅಬಕಾರಿ ಉಪ ನಿರೀಕ್ಷಕಿ ಸುಧಾರಾಣಿ ಮಾತನಾಡಿ, ಈಗಾಗಲೇ ಅಕ್ರಮ ಮಾರಾಟ ಮಾಡುವ 70ಕ್ಕೂ ಹೆಚ್ಚು ಕಡೆ ದಾಳಿ ನಡೆಸಿ ಪ್ರಕರಣ ದಾಖಲಿಸಲಾಗಿದೆ. 10 ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಕುರುಬೂರು ಸಿದ್ದೇಶ್ ಮಾತನಾಡಿದರು. ಈ ವೇಳೆ ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ತಾಲೂಕು ರೈತ ಸಂಘದ ಕಾರ್ಯದರ್ಶಿ ಬೂದಹಳ್ಳಿ ಶಂಕರ್, ರಾಜ್ಯ ಕಬ್ಬು ಬೆಳೆಗಾರ ಸಂಘ ಮುಖಂಡರಾದ ಉಮೇಶ್, ಕುರುಬೂರು ಪ್ರದೀಪ್, ರಾಜೇಶ್, ಯೋಗೇಶ್, ಪ್ರಸಾದ್ ನಾಯಕ್, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್, ಚಿನ್ನಸ್ವಾಮಿ, ಕೃಷ್ಣಪ್ಪ, ರವಿ, ತಾಲೂಕು ಮಟ್ಟದ ಅಧಿಕಾರಿಗಲಾದ ಇಓ ಅನಂತರಾಜು, ಸಿಪಿಐ ಧನಂಜಯ, ಸೆಸ್ಕಾಂ ಎಇಇ ವೀರೇಶ್, ಪುರಸಭೆ ಮುಖ್ಯಧಿಕಾರಿ ವಸಂತ ಕುಮಾರಿ, ಬನ್ನೂರು ಪುರಸಭೆ ಮುಖ್ಯಧಿಕಾರಿ ಹೇಮಂತ್ ಕುಮಾರ್, ಪ್ರಭಾರ ಕೃಷಿ ಸಹಯಕ ನಿರ್ದೇಶಕ ಕೆ.ಎಸ್.ರವಿ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಸಾಮಾಜಿಕ ಅರಣ್ಯ ವಲಯ ಅಧಿಕಾರಿ ಯಮುನಾ ಇತರರಿದ್ದರು.

ಮೈಸೂರು ಮಿತ್ರ ಶನಿವಾರ 10 ಮೇ 2025

'ಮೈರಿಯಾಲಿಟಿ' ರಿಯಲ್ ಎಸ್ಟೇಟ್ ಎಕ್ಸ್‌ಪೋಗೆ ತನ್ವೀರ್ ಸೇಠ್ ಚಾಲನೆ

ಮೈಸೂರು ಸುಂದರ ನಗರವಾಗಲು ನೀವೆಲ್ಲಾ ಕೊಡುಗೆ ನೀಡಿ : ನಿರ್ಮಾಣ ಉದ್ಯಮಗಳಿಗೆ ತನ್ವೀರ್ ಸೇಠ್ ಕಿವಿ ಮಾತು

ಮೈಸೂರು, ಮೇ9(ಜಿಎ)–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಘಟಕ, ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಕ್ರೆಡಾಯ್) ಮೈಸೂರು ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂ.ಬಿಸಿಟಿ)ಸಹಯೋಗದಲ್ಲಿ ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಶುಕ್ರವಾರ ನಾಲ್ಕು ದಿನಗಳ ಮೈ ರಿಯಾಲಿಟಿ–ರಿಯಲ್ ಎಸ್ಟೇಟ್ ಎಕ್ಸ್‌ಪೋಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು.

ಬಳಿಕ ಶಾಸಕ ತನ್ವೀರ್ ಸೇಠ್ ಮಾತನಾಡಿ, ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಬಿಎಐ, ಕ್ರೆಡಾಯ್, ಎಂಬಿಸಿಟಿ ಸಂಘಟನೆಗಳು ಕೇವಲ ವಹಿವಾಟಿನಲ್ಲಿ ಯಶಸ್ಸು ಕಾಣಲು ಒತ್ತು ನೀಡದೇ ಯೋಜಿತ, ಸುಂದರ ನಗರ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.



ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ(ಬಿಎಐ) ಮೈಸೂರು ಘಟಕ, ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಕ್ರೆಡಾಯ್) ಮೈಸೂರು ಹಾಗೂ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ (ಎಂ.ಬಿಸಿಟಿ)ಸಹಯೋಗದಲ್ಲಿ ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಏರ್ಪಡಿಸಿರುವ ನಾಲ್ಕು ದಿನಗಳ ಮೈ ರಿಯಾಲಿಟಿ–ರಿಯಲ್ ಎಸ್ಟೇಟ್ ಎಕ್ಸ್‌ಪೋಗೆ ಶಾಸಕ ತನ್ವೀರ್ ಸೇಠ್ ಶುಕ್ರವಾರ ಚಾಲನೆ ನೀಡಿದರು.

ನದಿಗಳತ್ತ ಕೊಳಚೆ ನೀರು : ಸದ್ಯ ನಗರಕ್ಕೆ 300 ಎಂಎಲ್‌ಡಿ ಒಳಚರಂಡಿ ನೀರು ಉತ್ಪತ್ತಿ ಆಗುತ್ತಿದ್ದು, ಅದರಲ್ಲಿ ಕೇವಲ 150 ಎಂಎಲ್‌ಡಿ ನೀರನ್ನು ಮಾತ್ರ ಶುದ್ಧೀಕರಿಸಲಾಗುತ್ತಿದೆ. ಇನ್ನುಳಿದ 150 ಎಂಎಲ್‌ಡಿ ಕೊಳಚೆ ನೀರು ನದಿ ಮೂಲಗಳಿಗೆ ಸೇರುತ್ತಿದೆ. ಇದನ್ನು ತಪ್ಪಿಸುವಂತೆ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಂಘಟನೆಗಳು ಆಡಳಿತ ವರ್ಗದ ಮೇಲೆ ಒತ್ತಡ ತರಬೇಕು ಎಂದರು.

ಪಾರ್ಕಿಂಗ್ ಸಮಸ್ಯೆ : ಗ್ರೇಟರ್ ಮೈಸೂರು ಬೇಕೋ ಬೇಡವೋ ಎಂಬ ಚರ್ಚೆ ನಡೆಯುತ್ತಿದೆ. 1.38 ಲಕ್ಷ ಆಸ್ತಿಗಳನ್ನು ಪಾಲಿಕೆಗೆ ಹಸ್ತಾಂತರ ಮಾಡಿದ್ದೇವೆ. ಅದರ ಕಸ, ನೀರಿನ ನಿರ್ವಹಣೆ ಮಾಡುವುದು ಹೇಗೆ ಎಂದು ಚಿಂತಿಸಬೇಕು. ಕೇವಲ ಲೇಔಟ್ ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲ. ಪಾರ್ಕಿಂಗ್ ವ್ಯವಸ್ಥೆ ಮಾಡುವುದೇ ಇಂದು ದೊಡ್ಡ ಸವಾಲಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ ಇದನ್ನು ಮಾಡಬೇಕು ಎಂದರು.

ಮೈಸೂರಲ್ಲಿ ಲಾಲ್‌ಬಾಗ್ ನಿರ್ಮಾಣವಾಗಲಿಲ್ಲ : ಮೈಸೂರಿನಲ್ಲಿ ನೂರು ವರ್ಷ ಪೂರೈಸಿರುವ ಅನೇಕ ಕಟ್ಟಡಗಳಿವೆ. ಆದರೆ ನಮಗೆ ಅದಕ್ಕೆ ಬದಲಿ ಕಟ್ಟಡ ನಿರ್ಮಿಸುವ ಬಗ್ಗೆ ಆಲೋಚನೆ ಮಾಡಿಲ್ಲ. ಅದಾಗುವಂತೆ ಆಲೋಚಿಸಬೇಕಿದೆ. ಮೈಸೂರಿನಲ್ಲಿ ಮೂರು ಅಂತಸ್ತಿನ ಕಟ್ಟಡ ಬಿಟ್ಟು ಮೇಲೆ ಹೋಗುತ್ತಿಲ್ಲ. ನೀವು ಧ್ವನಿ ಎತ್ತಿದಾಗ ನಮಗೆ ಜವಾಬ್ದಾರಿ ಹೆಚ್ಚುತ್ತದೆ. ಮೈಸೂರಿನಲ್ಲಿ ಬೆಂಗಳೂರಿನ ರೀತಿಯ ಒಂದು ಲಾಲ್‌ಬಾಗ್ ನಿರ್ಮಾಣ ಮಾಡಲು ಸಾಧ್ಯವಾಗಲಿಲ್ಲ. ಇರುವ ಚಾಮುಂಡಿ ಬೆಟ್ಟವು ಒತ್ತುವರಿಯಾಗಿ ಕಾಂಕ್ರೀಟ್ ಬೆಟ್ಟವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಜಮುಖಿಯಾಗಿರಿ : ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಂಘಟನೆಗಳು ಲಾಭದೊಂದಿಗೆ ಸಮಾಜಮುಖಿಯಾಗಿ ಚಿಂತನೆ ಮಾಡಬೇಕು. ಎಲ್ಲ ವರ್ಗದ ಜನರಿಗೂ ನಿವೇಶನ ಸಿಗುವಂತೆ ಕೆಲಸ ಮಾಡ ಬೇಕು. ಮೈಸೂರಿನ ಪಾರಂಪರಿಕತೆ ಕಾಪಾಡಿಕೊಳ್ಳಬೇಕು. ಸಾರ್ವಜನಿಕರಿಗೆ ಬಡಾವಣೆಗಳಲ್ಲಿ ಉತ್ತಮ ಸೌಲಭ್ಯ ನೀಡಬೇಕು. ಅಲ್ಲದೇ ನಗರದ ದೂರದೃಷ್ಟಿ ಬೆಳವಣಿಗೆಗೆ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಬಿಐಎನ ಮೇಳ ಆಯೋಜನೆ ಸಮಿತಿ ಅಧ್ಯಕ್ಷ ನಂದಕುಮಾರ್ ಮಾತನಾಡಿ, 17 ವರ್ಷಗಳಿಂದ ಆಯೋಜಿಸುತ್ತಿರುವ ಈ ಮೇಳದಲ್ಲಿ ಒಟ್ಟು35 ಮಳಿಗೆಗಳಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿರುವ ಇತ್ತೀಚಿನ ಟ್ರೆಂಡ್‌ಗಳು, ನಾವಿನ್ಯತೆಗಳು ಮತ್ತು ಅವಕಾಶಗಳನ್ನು

> ದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಎಲ್ಲರಿಗೂ ತಿಳಿದಿದ್ದು, ನಾವು ಭಾರತೀಯ ರಕ್ಷಣಾ ಪಡೆಗಳಿಗೆ ಬೆಂಬಲವಾಗಿ ನಿಲ್ಲಬೇಕಿದೆ.
> -ತನ್ವೀರ್ ಶೇಠ್, ಶಾಸಕ

ಪ್ರದರ್ಶಿಸಲಾಗಿದೆ ಎಂದು ತಿಳಿಸಿದರು.

ಮೈರಿಯಾಲ್ಟಿ 2025ರ ಪ್ರದರ್ಶನದಲ್ಲಿ 30ಕ್ಕೂ ಹೆಚ್ಚು ಮಳಿಗೆಗಳಿದ್ದು, ಪ್ಲಾಟಿನಂ, ಗೋಲ್ಡ್, ಸಿಲ್ವರ್ ಮತ್ತು ರೆಗ್ಯುಲರ್ ಹೀಗೆ 4 ವರ್ಗದ ಸ್ಟಾಲ್ ವ್ಯವಸ್ಥೆ ಮಾಡಲಾಗಿದೆ. ಹೆಸರಾಂತ ರಿಯಲ್ ಎಸ್ಟೇಟ್ ಸಂಸ್ಥೆಗಳು ಗ್ರಾಹಕರಿಗೆ ಮಾಹಿತಿ ಒದಗಿಸಲಿವೆ. ಪ್ರದರ್ಶನವನ್ನು ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 8.30ರವರೆಗೆ ವೀಕ್ಷಿಸಬಹುದಾಗಿದೆ.

ಈ ಪ್ರದರ್ಶನ ರಿಯಲ್ ಎಸ್ಟೇಟ್ ಉದ್ಯಮದ ಹೂಡಿಕೆದಾರರು, ನಿವೇಶನ, ಮನೆ ಖರೀದಿದಾರರಿಗೆ ಅನುಕೂಲಕರವಾಗಿದೆ. ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿರುವ ಇತ್ತೀಚಿನ ಟ್ರೆಂಡ್‌ಗಳು, ನಾವಿನ್ಯತೆಗಳು ಮತ್ತು ಅವಕಾಶಗಳ ಬಗ್ಗೆ ಮಾಹಿತಿ ಒದಗಿಸಲಾಗಿದೆ. ಹಸಿರು ಮತ್ತು ತೆರೆದ ಸ್ಥಳಗಳಾವಕಾಶದಿಂದ ಹೊಸ ವಿನ್ಯಾಸ ರೂಪಿಸಲಾಗಿದೆ. ಎಲ್ಲಾ ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಪ್ರಮೋಟರ್‌ಗಳು ಮತ್ತು ಬ್ಯಾಂಕ್‌ಗಳನ್ನು (ಹಣಕಾಸು ಸಂಸ್ಥೆಗಳು) ಒಂದೇ ಸೂರಿನಡಿ ತರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9945809000, 9945171737 ಸಂಪರ್ಕಿಸಬಹುದು.

ಕಾರ್ಯಕ್ರಮದಲ್ಲಿ ಬಿಎಐ ಮೈಸೂರು ಅಧ್ಯಕ್ಷ ವಿ. ಶ್ರೀನಾಥ್, ಕಾರ್ಯದರ್ಶಿ ವಿ.ಅಕ್ಷಯ್ ಕುಮಾರ್, ಕ್ರೆಡೈ ಅಧ್ಯಕ್ಷ ಹರೀಶ್ ಶೆಣೈ, ಕಾರ್ಯದರ್ಶಿ ನಾಗರಾಜ್ ವಿ ಭೈರಿ, ಸಿ.ಡಿ.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಭಾರತ ಪಾಕಿಸ್ತಾನ ಗಡಿಯಲ್ಲಿ ಉದ್ವಿಗ್ನ ಸ್ಥಿತಿ ಹಿನ್ನೆಲೆ

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಆರ್‌ಪಿಎಫ್ ಫ್ಲ್ಯಾಗ್ ಮಾರ್ಚ್



ಭಾರತ ಪಾಕಿಸ್ತಾನ ಗಡಿಯಲ್ಲಿ ಉದ್ವಿಗ್ನ ಸ್ಥಿತಿ ಹಿನ್ನೆಲೆಯಲ್ಲಿ ಜನರಲ್ಲಿ ಆತ್ಮವಿಶ್ವಾಸ ತುಂಬಲು ಮೈಸೂರು ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಆರ್‌ಪಿಎಫ್ ಹಾಗೂ ಗೃಹ ರಕ್ಷಕ ದಳದವರು ಫ್ಲ್ಯಾಗ್ ಮಾರ್ಚ್ ನಡೆಸಿದರು.

ಮೈಸೂರು, ಮೇ 9(ಬಿಎಲ್‌ಯು)– ಭಾರತ ಮತ್ತು ಪಾಕಿಸ್ತಾನ ನಡುವೆ ದಾಳಿ–ಪ್ರತಿದಾಳಿಯಿಂದ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜನರಲ್ಲಿ ಧೈರ್ಯ ಹಾಗೂ ವಿಶ್ವಾಸ ಮೂಡಿಸಲು ರೈಲ್ವೆ ರಕ್ಷಣಾ ದಳ ಮತ್ತು ಗೃಹ ರಕ್ಷಕ ದಳದವರು ಮೈಸೂರಿನ ರೈಲ್ವೆ ನಿಲ್ದಾಣದಲ್ಲಿ ಇಂದು ಫ್ಲ್ಯಾಗ್ ಮಾರ್ಚ್ ನಡೆಸಿದರು.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಭಾರತ, ಪಾಕಿಸ್ತಾನದ ಮೇಲೆ ಆಪರೇಷನ್ ಸಿಂಧೂರ್ ಕಾರ್ಯಾಚರಣೆಗಿಳಿದಿದೆ. ಪ್ರತಿಯಾಗಿ ಪಾಕಿಸ್ತಾನ ಕೂಡ ನಡೆಸುತ್ತಿರುವ ದಾಳಿಯನ್ನು ಭಾರತ ಬಗ್ಗು ಬಡಿಯುತ್ತಿದೆ.

ಇಂತಹ ಸಂದರ್ಭದಲ್ಲಿ ಜನರಲ್ಲಿ ಭಯ ಸಹಜವಾಗಿಯೇ ಆತಂಕ ಇರುವುದು ಸಾಮಾನ್ಯ. ಈ ಹಿನ್ನೆಲೆಯಲ್ಲಿ ಮೈಸೂರು ರೈಲ್ವೆ ನಿಲ್ದಾಣದಲ್ಲಿ ನಾವು ನಿಮ್ಮ ಜೊತೆಗಿದ್ದೇವೆ. ಎಂತಹ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗಿದ್ದೇವೆ ಎಂಬ ಸಂದೇಶ ಸಾರಲು ರೈಲ್ವೆ ರಕ್ಷಣಾ ದಳ ಮತ್ತು ಗೃಹ ರಕ್ಷಣಾ ದಳದವರು ಮೈಸೂರು ರೈಲ್ವೆ ನಿಲ್ದಾಣದಲ್ಲಿ ಫ್ಲ್ಯಾಗ್ ಮಾರ್ಚ್ ನಡೆಸಿದರು.

ಮೈಸೂರು ರೈಲ್ವೆ ನಿಲ್ದಾಣದ ಆರು ಪ್ಲಾಟ್‌ಫಾರಂಗಳಲ್ಲಿ ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದ ಆರ್‌ಪಿಎಫ್ ಸಿಬ್ಬಂದಿ, ಶೀಲ್ಡ್ ಹಿಡಿದು ಶ್ವಾನದಳದ ಜೊತೆಗೆ ಫ್ಲ್ಯಾಗ್ ಮಾರ್ಚ್ ನಡೆಸಿದರು.

ಆರ್‌ಪಿಎಫ್ ಇನ್ಸ್‌ಪೆಕ್ಟರ್ ದಿನೇಶ್‌ಕುಮಾರ್ ನೇತೃತ್ವದಲ್ಲಿ ನಡೆದ ಫ್ಲ್ಯಾಗ್ ಮಾರ್ಚ್‌ನಲ್ಲಿ ಸಬ್ ಇನ್ಸ್‌ಪೆಕ್ಟರ್ ಎಸ್.ಪಿ.ದಿನೇಶ್ ಸೇರಿದಂತೆ ಹಲವು ಸಿಬ್ಬಂದಿ ಭಾಗವಹಿಸಿದ್ದರು.

ನಾಳೆ ಬಂಟರ ಸಂಘದ ಸ್ವರ್ಣ ಮಹೋತ್ಸವ; ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಉದ್ಘಾಟನೆ

ಇದೇ ವೇಳೆ ಬಯಲು ರಂಗಮಂದಿರಕ್ಕೂ ಚಾಲನೆ

ಮೈಸೂರು, ಮೇ.9(ಎಂಟಿವೈ)– ಮೈಸೂರಿನ ವಿಜಯನಗರದ ಮೂರನೇ ಹಂತದಲ್ಲಿರುವ ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನದಲ್ಲಿ ಮೇ 11ರಂದು ಬೆಳಗ್ಗೆ 10ಕ್ಕೆ ಬಂಟರ ಸಂಘದ ಸ್ವರ್ಣ ಮಹೋತ್ಸವ ಹಾಗೂ ವಿನಯ ಮತ್ತು ಕೆ.ಸುಬ್ರಹ್ಮಣ್ಯ ರೈ ಬಯಲು ರಂಗ ಮಂದಿರದ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ ಎಂದು ಬಂಟರ ಸಂಘದ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಬಂಟರ ಸಂಘದ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ 1975ರಲ್ಲಿ ಸ್ಥಾಪಿತವಾದ ಬಂಟರ ಸಂಘಕ್ಕೆ 50 ವರ್ಷ ಪೂರ್ಣಗೊಂಡಿದೆ. 25 ಸದಸ್ಯರಿಂದ ಆರಂಭವಾದ 'ಬಂಟ್ಸ್ ಕ್ಲಬ್ ಆಫ್ ಮೈಸೂರ್' ಸಂಘಟನೆ ಬಂಟರ ಸಂಘವಾಗಿ ಮಾರ್ಪಾಡಾಗಿ ಇದೀಗ ಒಂದು ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ. 2011ರವರೆಗೆ 13 ಮಂದಿ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, 2011ರಿಂದ ಇದುವರೆಗೂ ಟಿ.ಪ್ರಭಾಕರ ಶೆಟ್ಟಿ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಸಂಘದ ಸುವರ್ಣ ಮಹೋತ್ಸವದ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ ಎಂದರು.

ಭವನದಲ್ಲಿ ಮೇ 11ರಂದು ಬೆಳಗ್ಗೆ 10ಕ್ಕೆ ನಡೆಯುವ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ ಬಿ.ರಮಾನಾಥ ರೈ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಗುರ್ಮೆ ಸುರೇಶ್ ಶೆಟ್ಟಿ, ಕೆ.ಅಶೋಕ್ ರೈ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಮಂಗಳೂರು ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎನ್. ವಿನಯ್ ಹೆಗ್ಡೆ, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎಸ್.ಚಂದ್ರಶೇಖರ ಶೆಟ್ಟಿ, ವಿಶ್ವ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ, ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ, ಶ್ರೀದೇವಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಡಾ.ಎ.ಸದಾನಂದ ಶೆಟ್ಟಿ ಮತ್ತಿತರರು ಉಪಸ್ಥಿತರಿರುವರು ಎಂದರು.


ಇದೇ ವೇಳೆ ಬಂಟ ಸ್ವರ್ಣ ಸಿರಿ–2025 ಸ್ಮರಣ ಸಂಚಿಕೆಯನ್ನು ಎಂಆರ್‌ಜಿ ಗ್ರೂಪ್‌ನ ಅಧ್ಯಕ್ಷ ಡಾ.ಕೆ.ಪ್ರಕಾಶ್ ಶೆಟ್ಟಿ ಬಿಡುಗಡೆಗೊಳಿಸಲಿದ್ದಾರೆ. ಬಯಲು ರಂಗ ಮಂದಿರದ ದಾನಿಗಳಾದ ವಿನಯ–ಕೆ.ಸುಬ್ರಹ್ಮಣ್ಯ ರೈ ದಂಪತಿ, ವೈದ್ಯಕೀಯ ಶಿಕ್ಷಣ ಇಲಾಖೆಯ ಮಾಜಿ ನಿರ್ದೇಶಕ ಡಾ.ಎಸ್.ರಮಾನಂದ ಶೆಟ್ಟಿ, ಆದಾಯ ತೆರಿಗೆ ಇಲಾಖೆ ಡೆಪ್ಯುಟಿ ಕಮಿಷನರ್ ನಿವ್ಯಾ ಪಿ.ಶೆಟ್ಟಿ, ನಟರಾದ ಪ್ರಮೋದ್ ಶೆಟ್ಟಿ, ಶೈನ್ ಶೆಟ್ಟಿ, ಕರ್ನಾಟಕ ರಾಜ್ಯ ರಣಜಿ ಆಟಗಾರ ಅಭಿಲಾಷ್ ಶೆಟ್ಟಿ ಅವರನ್ನು ಸನ್ಮಾನಿಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಂಟರ ಸಂಘದ ಗೌರವ ಕಾರ್ಯದರ್ಶಿ ಎಂ.ನಂದ್ಯಪ್ಪ ಶೆಟ್ಟಿ, ಸ್ಮರಣೆ ಸಂಚಿಕೆ ಸಂಪಾದಕ ಡಾ. ಶ್ರೀನಿವಾಸ್ ಶೆಟ್ಟಿ, ಜಂಟಿ ಖಜಾಂಚಿ ವೇದಾಂತ ಶೆಟ್ಟಿ, ಬಂಟರ ಸಂಘ ಮೈಸೂರು ಚಾರಿಟಬಲ್ ಟ್ರಸ್ಟ್‌ನ ಕೋಶಾಧಿಕಾರಿ ಪಿ.ತುಕಾರಾಂ ರೈ ಇದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು, ಮೇ 9– ಮೇ 9, 11, 13, 15, 17 ಮತ್ತು 19 ರಂದು ಕಡಕೊಳ, ವಾಜಮಂಗಲ ವಿದ್ಯುತ್ ಸ್ವೀಕರಣಾ ಕೇಂದ್ರ ಹಾಗೂ ಆಯರಹಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಕಾಮಗಾರಿ ನಿಮಿತ್ತ ಚಿಕ್ಕೇಗೌಡನಹುಂಡಿ, ಹಡಜನ, ಟಿ.ಎಂ ಹುಂಡಿ, ಮಾರಶೆಟ್ಟಿಹಳ್ಳಿ, ದೇವಲಾಪುರ, ಕಿರಾಳು, ಜಂತಗಳ್ಳಿ, ಸಜ್ಜೆಹುಂಡಿ, ಮರಿಗೌಡನಹುಂಡಿ, ರಾಯನಹುಂಡಿ, ಬಸಳ್ಳಿಹುಂಡಿ, ಸೋಮೇಶ್ವರಪುರ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಪ್ರಶಾಂತ್ ವಾಯು ಬಡಾವಣೆ, ಹದಿನಾರು, ಮಲ್ಲರಾಜನಹುಂಡಿ, ಕಡವೆಕಟ್ಟೆ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದೇವರ ಮೂರ್ತಿ ಪ್ರತಿಷ್ಠಾಪನೆ



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಪ್ರದೇಶಾಭಿವೃದ್ಧಿ ಅನುದಾನದಿಂದ ಚಾಮುಂಡಿಬೆಟ್ಟದ ಆದಿಶಕ್ತಿ ಶಿವಾರ್ಚಕರ ಸಂಘದ ಶ್ರೀ ಚಾಮುಂಡೇಶ್ವರಿ (ಹೊಸಗುಡಿ) ದೇವಸ್ಥಾನದಲ್ಲಿ ಶ್ರೀ ಚಾಮುಂಡೇಶ್ವರಿ ಶ್ರೀಗಣಪತಿ, ಶ್ರೀ ಈಶ್ವರ, ಶ್ರೀ ಸುಬ್ರಹ್ಮಣ್ಯೇಶ್ವರ ವಿಗ್ರಹ ಪ್ರತಿಷ್ಠಾಪನೆ ಮಾಡಲಾಯಿತು. ಶಾಸಕ ಜಿ.ಟಿ. ದೇವೇಗೌಡ ಈ ವೇಳೆ ಉಪಸ್ಥಿತರಿದ್ದರು.

ಕನ್ನಡದ ಕೆಲಸಗಳು ಜನಮನ ತಲುಪುವಂತಾಗಬೇಕು

ಸಚಿವ ಎನ್. ಚಲುವರಾಯಸ್ವಾಮಿ ಕಿವಿಮಾತು

ಮೈಸೂರು, ಮೇ 9(ಎಂಕೆ)– ಕನ್ನಡದ ಬಗ್ಗೆ ಎಷ್ಟು ಮಾತನಾಡಿದರೂ, ವಿಶ್ಲೇಷಣೆ ಮಾಡಿದರೂ ಕಡಿಮೆಯೇ. ಹಾಗಾಗಿ ಕನ್ನಡದ ಕೆಲಸಗಳು ನಾಡಿನ ಜನ–ಮನ ತಲುಪಬೇಕು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಕಲಾಂಬಿಕಾ ಭವನದಲ್ಲಿ ಕನ್ನಡ ಬೆಳಕು ಪತ್ರಿಕೆ ವತಿಯಿಂದ ಆಯೋಜಿಸಿದ್ದ 'ಸುವರ್ಣ ಕರ್ನಾಟಕ ಸಂಭ್ರಮ–50' ಸಂಸ್ಮರಣಾ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿ 50 ವರ್ಷಗಳಾಗಿರುವ ಸುವರ್ಣ ಸಂದರ್ಭದಲ್ಲಿ ನಾಡಿನ ಇತಿಹಾಸ, ಪ್ರಮುಖ ಘಟನಾವಳಿಗಳ ಕುರಿತ ಸಂಸ್ಮರಣೆ ಅವಶ್ಯವಾಗಿದೆ ಎಂದರು.



'ಸುವರ್ಣ ಕರ್ನಾಟಕ ಸಂಭ್ರಮ–50' ಸಂಸ್ಮರಣಾ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಕನ್ನಡ ಭಾಷೆಯ ಬಗ್ಗೆ ಎಷ್ಟು ಮಾತನಾಡಿದರೂ, ಎಷ್ಟೇ ವಿಶ್ಲೇಷಣೆ ಮಾಡಿದರೂ ಕಡಿಮೆಯೇ. ಈ ನಿಟ್ಟಿನಲ್ಲಿ ನಾಡಿನ ಜನರ ಮನಸ್ಸುಗಳನ್ನು ಮುಟ್ಟುವ ಇಂತಹ ಕನ್ನಡದ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು. ನಾಡು–ನುಡಿಯ ಬಗ್ಗೆ ಯುವ ಸಮುದಾಯಕ್ಕೆ ತಿಳಿಸಿಕೊಡುವ ಕಾರ್ಯ ನಡೆಯುತ್ತಿರಬೇಕು ಎಂದು ತಿಳಿಸಿದರು.

'ಸುವರ್ಣ ಕರ್ನಾಟಕ ಸಂಭ್ರಮ–50' ಸಂಸ್ಮರಣಾ ಗ್ರಂಥ ಬಿಡುಗಡೆ ಗೊಳಿಸಿದ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಮಾತನಾಡಿ, ಕರ್ನಾಟಕ ಸರ್ಕಾರ ಈಗಾಗಲೇ ಒಂದು ವರ್ಷದುದ್ದಕ್ಕೂ ಸುವರ್ಣ ಕರ್ನಾಟಕ ಸಂಭ್ರಮ ಹೆಸರಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡಿದೆ. ಇಡೀ ಕರ್ನಾಟಕದಾದ್ಯಂತ ಈ ಸಂಭ್ರಮವನ್ನು ಆಚರಿಸುತ್ತಾ ನಾಡದೇವಿ (ಭುವನೇಶ್ವರಿ)ಯ ಪ್ರತಿಮೆಯನ್ನು ಬೆಂಗಳೂರಿನ ವಿಧಾನಸೌಧದ ಎದುರು ಪ್ರತಿಷ್ಠಾಪನೆ ಮಾಡಲಾಗಿದೆ. ಇದೊಂದು ಚಾರಿತ್ರಿಕವಾದ ವರ್ಷವಾಗಿದೆ ಎಂದರು.

ಸರ್ಕಾರದ ಕಾರ್ಯಕ್ರಮಗಳು ಜನರ ಉತ್ಸವಗಳಾಗಬೇಕು. ಇತ್ತೀಚಿನ ದಿನಗಳಲ್ಲಿ ಶಾಲಾ–ಕಾಲೇಜುಗಳಲ್ಲಿ ಮಾತ್ರವೇ ಸಂಭ್ರಮ ಕಾಣುತ್ತೇವೆಯೇ ಹೊರತು ಮನೆಗಳಲ್ಲಿ ಸರ್ಕಾರಿ ಉತ್ಸವಗಳಲ್ಲಿ ಸಂಭ್ರಮ ಕಾಣುತ್ತಿಲ್ಲ. ಆದ್ದರಿಂದ ನಾಡಹಬ್ಬಗಳು ನಾಡಿನ ಪರಂಪರೆಯೊಂದಿಗೆ ಬೆಸೆಯಬೇಕು ಎಂದು ಅಭಿಪ್ರಾಯಿಸಿದರು.

ಸನ್ಮಾನ: ನಂತರ ವಿವಿಧ ಕ್ಷೇತ್ರದ ಸಾಧಕರಾದ ಡಾ.ಬಸವನಗೌಡಪ್ಪ (ವೈದ್ಯಕೀಯ), ಮುನಿಗೋಪಾಲರಾಜು (ಚೆಸ್ಕಾಂ ಆಡಳಿತ), ಟಿ.ತಿಮ್ಮೇಗೌಡ (ಜಾನಪದ), ಎಂ.ರಾಮಪ್ಪ(ಶಿಕ್ಷಣ), ಕುಮಾರ್ (ವೈದ್ಯಕೀಯ ಹಾಗೂ ಹೆಚ್.ಆರ್. ವೀರೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಶಿವರಾಜಪ್ಪ, ಐಎಫ್‌ಎಸ್ ರಾಜು, ಕನ್ನಡ ಬೆಳಕು ಪತ್ರಿಕೆ ಸಂಪಾದಕ ಮೂಗೂರು ನಂಜುಂಡಸ್ವಾಮಿ, ಉದ್ಯಮಿ ಎ.ಸಿ.ಜಗದೀಶ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದಿ ಭೂತ್‌ನಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ನಗರ ಪಾಲಿಕೆ ಆಸ್ತಿ ತೆರಿಗೆ ಶೇ.5 ರಿಯಾಯತಿ ಜೂ.30 ರವರೆಗೆ ವಿಸ್ತರಣೆ

ಮೈಸೂರು, ಮೇ.9(ಎಸ್‌ಪಿಎನ್)–2025–26ನೇ ಸಾಲಿನಲ್ಲಿ ಆಸ್ತಿ ತೆರಿಗೆಯಲ್ಲಿ ಶೇ.5ರ ರಿಯಾಯತಿ ಅವಧಿಯನ್ನು ಜೂ.30ರವರೆಗೆ ವಿಸ್ತರಿಸಿ ನಗರಾಭಿವೃದ್ಧಿ ಇಲಾಖೆ (ಮಹಾನಗರ ಪಾಲಿಕೆ–2) ಅಧೀನ ಕಾರ್ಯದರ್ಶಿ ಕೆ.ನಾಗೇಶ್ ಶುಕ್ರವಾರ ಸುತ್ತೋಲೆ ಹೊರಡಿಸಿದ್ದಾರೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಸಾಲಿನ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಆಸ್ತಿ ತೆರಿಗೆ ಪಾವತಿಸಿದಲ್ಲಿ ಶೇ.5ರಷ್ಟು ರಿಯಾಯತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ. ಪೌರಾಡಳಿತ ನಿರ್ದೇಶನಾಲಯ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ 2025–26 ಸಾಲಿನಲ್ಲಿ ಪ್ರಸ್ತುತ ನೀಡಿರುವ ಶೇ.5ರ ರಿಯಾಯತಿಯನ್ನು ವಿಸ್ತರಿಸಿದ್ದಲ್ಲಿ ಸಾರ್ವಜನಿಕರಿಗೆ ತೆರಿಗೆ ಪಾವತಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ.

ಆದ್ದರಿಂದ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಬಹುದಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆರ್ಥಿಕವಾಗಿ ನೆರವಾಗಬಹುದು. ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ವಸೂಲಿಗೆ ಮುಂದಿನ 2 ತಿಂಗಳು ಅಂದರೆ ಜೂ.30 ರವರೆಗೆ ವಿಸ್ತರಿಸಲಾಗಿದೆ.

ಅಮೆರಿಕದ ರಾಬರ್ಟ್ ಫ್ರಾನ್ಸಿಸ್ ಪ್ರಿವೋಸ್ಟ್ ನೂತನ ಪೋಪ್



ವ್ಯಾಟಿಕನ್ ಸಿಟಿ: ಫ್ರಾನ್ಸಿಸ್ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಹೊಸ ಪೋಪ್ ಆಯ್ಕೆಯಾಗಿದೆ. ಅಮೆರಿಕದ ರಾಬರ್ಟ್ ಫ್ರಾನ್ಸಿಸ್ ಪ್ರಿವೋಸ್ಟ್ ಅವರು ರೋಮನ್ ಕ್ಯಾಥೋಲಿಕ್ ಚರ್ಚ್‌ನ ನೂತನ ಪೋಪ್ ಆಗಿ ಆಯ್ಕೆಯಾಗಿದ್ದಾರೆ. 133 ಮಂದಿ ಕಾರ್ಡಿನಲ್‌ಗಳಿಂದ ಅವರನ್ನು ಪೋಪ್ ಫ್ರಾನ್ಸಿಸ್ ಅವರ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ ಪೋಪ್ ಅವರ ಅಧಿಕೃತ ನಿವಾಸದ ಚಿಮಣಿಯಿಂದ ಬಿಳಿಯ ಹೊಗೆಯು ಬರುತ್ತಿದ್ದಂತೆ ಪೋಪ್ ಆಯ್ಕೆಯು ಖಚಿತವಾಗಿದೆ.

'ಸಿಸ್ಟೀನ್ ಚಾಪೆಲ್'ನಲ್ಲಿ ಕಾರ್ಡಿನಲ್‌ಗಳ ಗೋಪ್ಯ ಮತದಾನ ಮುಗಿದು ರಾಬರ್ಟ್ ಫ್ರಾನ್ಸಿಸ್ ಪ್ರಿವೋಸ್ಟ್ ಅವರನ್ನು ಆಯ್ಕೆ ಮಾಡಲಾಗಿದೆ 69 ವರ್ಷದ ಅವರು 'ಲಿಯೋ 14' ಎಂಬ ಹೆಸರಿನಿಂದ ಕರೆಸಿ ಕೊಳ್ಳಲಿದ್ದಾರೆ. ಇದೇ ಮೊದಲ ಬಾರಿಗೆ ಕ್ಯಾಥೋಲಿಕ್ ಚರ್ಚ್‌ನ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಅಮೆರಿಕದ ಬಿಷಪ್‌ವೊಬ್ಬರು ಈ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. 1955ರ ಸೆಪ್ಟೆಂಬರ್ 14ರಂದು ಷಿಕಾಗೊದಲ್ಲಿ ಜನಿಸಿದ ರಾಬರ್ಟ್ ಫ್ರಾನ್ಸಿಸ್ ಅವರು ಪೆರು ದೇಶದಲ್ಲಿ ಎರಡು ದಶಕ ಸೇವೆ ಸಲ್ಲಿಸಿದ್ದಾರೆ. ಅಲ್ಲಿ ಬಿಷಪ್ ಆಗಿಯೂ ಕಾರ್ಯನಿರ್ವಹಿಸಿದ್ದರು. ವ್ಯಾಟಿಕನ್ ಕಾರ್ಡಿನಲ್ ಆಗಿ 2023ರಲ್ಲಿ ಅವರನ್ನು ನೇಮಕ ಮಾಡಿಕೊಳ್ಳಲಾಗಿತ್ತು.

ಸೇಂಟ್ ಪೀಟರ್ಸ್ ಬೆಸಿಲಿಕಾದ ಸೆಂಟ್ರಲ್ ಬಾಲ್ಕನಿಯಲ್ಲಿ ನಿಂತ ಅವರು ಜನರತ್ತ ಕೈಬೀಸಿದರು. ನೂತನ ಪೋಪ್ ಅವರನ್ನು ನೋಡುತ್ತಿದ್ದಂತೆ ಕ್ಯಾಥೋಲಿಕರು ಉದ್ಗಾರಗಳನ್ನು ಮಾಡಿದರು. ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಸೇರಿದ್ದ ಜನರನ್ನುದ್ದೇಶಿಸಿ ತಮ್ಮ ಚೊಚ್ಚಲ ಸಂದೇಶ ನೀಡಿದ ಅವರು, 'ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಎಲ್ಲರೂ ಪರಸ್ಪರ ಕೈಜೋಡಿಸಬೇಕು' ಎಂದು ಕರೆ ಕೊಟ್ಟರು.

ಕೌಟುಂಬಿಕ, ವೃತ್ತಿಪರ ಜೀವನದಲ್ಲಿ ಸಹಕಾರ ಮನೋಭಾವ ಅನಿವಾರ್ಯ

●ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದಜೀ ಅಭಿಮತ
●'ವೃತ್ತಿ ಪರತೆ ತರಬೇತಿ' ಕಾರ್ಯಾಗಾರಕ್ಕೆ ಸ್ವಾಮೀಜಿ ಚಾಲನೆ



ಮೈಸೂರಿನ ಯಾದವಗಿರಿಯಲ್ಲಿರುವ ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಆಯೋಜಿಸಿದ್ದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರವನ್ನು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜೀ ಉದ್ಘಾಟಿಸಿದರು.

ಮೈಸೂರು, ಮೇ.9(ಎಂಟಿವೈ)– ಕೌಟುಂಬಿಕ ಹಾಗೂ ವೃತ್ತಿಪರ ಜೀವನದಲ್ಲಿ ಪರಸ್ಪರ ಸಹಕಾರ ಮನೋಭಾವ ಬೆಳೆಸಿಕೊಳ್ಳುವುದು ಅನಿವಾರ್ಯ ಎಂದು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜೀ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರಿನ ಯಾದವಗಿರಿಯಲ್ಲಿರುವ ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ವತಿಯಿಂದ ನಡೆದ ಸಂಯುಕ್ತ ಸಹಕಾರಿ ಹಿರಿಯ, ಕಿರಿಯ ಅಧಿಕಾರಿಗಳು, ಜಿಲ್ಲಾ ಸಂಯೋಜಕರಿಗಾಗಿ 'ಕೌಶಲ್ಯ ಅಭಿವೃದ್ಧಿ ತರಬೇತಿ, ಸಹಾಯಕ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ 'ವೃತ್ತಿಪರತೆ ತರಬೇತಿ' ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳಲ್ಲಿ ಬದ್ಧತೆ, ಆಸಕ್ತಿ ಇದ್ದರೆ ಮಾತ್ರ ಸಹಕಾರ ಕ್ಷೇತ್ರದ ಬೆಳವಣಿಗೆ ಸಾಧ್ಯ. ಸಹಕಾರಿ ಕ್ಷೇತ್ರದ ಅಧಿಕಾರಿ ವರ್ಗಕ್ಕೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುತ್ತಿರುವುದು ಶ್ಲಾಘನೀಯ. ಈಗಾಗಲೇ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಸಹಕಾರಿ ಸಂಸ್ಥೆಗಳ ಶ್ರೇಯಸ್ಸಿಗಾಗಿ ಶ್ರಮಿಸುತ್ತಿದ್ದು, ಕೌಶಲ್ಯ ತರಬೇತಿ ಬಳಿಕ ಇನ್ನಷ್ಟು ಸೇವಾ ದಕ್ಷತೆ ವೃದ್ಧಿಯಾಗಲಿದೆ ಎಂದರು.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿ ಕೆ.ಗಗನ ಮಾತನಾಡಿ, ಕಲಿಕೆ ನಿರಂತರ ಪ್ರಕ್ರಿಯೆಯಾಗಿದ್ದು, ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಸಂಪನ್ಮೂಲ ವ್ಯಕ್ತಿಗಳು ನೀಡಿದ ಮಾಹಿತಿ ಹಾಗೂ ಮಾರ್ಗದರ್ಶನವನ್ನು ಗ್ರಹಿಸಬೇಕು. ಈ ತರಬೇತಿಯಲ್ಲಿ ಕಲಿತದ್ದನ್ನು ತಮ್ಮ ಸೇವಾ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು. ಸಹಕಾರಿ ಸಿಬ್ಬಂದಿ ತಮ್ಮ ಆರೋಗ್ಯದ ಕಡೆಯೂ ಗಮನ ಹರಿಸಬೇಕು. ಸಾಧ್ಯವಾದಷ್ಟು ಮನೆ ಊಟವನ್ನೇ ಅವಲಂಭಿಸಬೇಕು. ಬಡ್ತಿ, ಪ್ರಶಂಸೆ ಸೇರಿದಂತೆ ಯಾವುದೆ ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಮಾಡಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಯ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯ ಡಾ.ಹೆಚ್.ವಿ.ರಾಜೀವ್ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರು ಪ್ರತಿದಿನವೂ ಹೊಸ ಹೊಸ ಸಂಗತಿಯನ್ನು ಕಲಿಯುವುದು ಅನಿವಾರ್ಯ. ಸೇವಾ ಅವಧಿಯಲ್ಲಿ ಸುಲಲಿತವಾಗಿ ಕೆಲಸ ಮಾಡಲು ತರಬೇತಿ ಕಾರ್ಯಾಗಾರ ಪ್ರಮುಖ ಪಾತ್ರವಹಿಸುತ್ತವೆ. ಅಧಿಕಾರಿಗಳು ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಕುಟುಂಬ ಸದಸ್ಯರ ಕಡೆಗೂ ಗಮನ ಹರಿಸಬೇಕಾಗಿದೆ. ಅಲ್ಲದೆ, ಸಮಯ ಪಾಲನೆ, ಶಿಸ್ತು, ಸಂಯಮದ ಗುಣ ಬೆಳೆಸಿಕೊಳ್ಳಬೇಕು. ಆ ಮೂಲಕ ಸಹಕಾರಿಗಳಿಗೆ ಗುಣಮಟ್ಟದ ಸೇವೆ ಒದಗಿಸಬೇಕು. ಕುಟುಂಬದ ವ್ಯವಸ್ಥೆಯೊಳಗೆ ಇತಿ–ಮಿತಿಯಲ್ಲಿ ಜೀವನ ಸಾಗಿಸಬೇಕು. ಅತಿಯಾದ ನಿರೀಕ್ಷೆ, ಆಸೆಗೆ ಒಳಗಾಗಿ ಮನಶಾಂತಿ ಹಾಳುಮಾಡಿಕೊಳ್ಳಬಾರದು. ಸಿಬ್ಬಂದಿಗಳಿಗೆ ಗುಣಾತ್ಮಕ ವಾತಾವರಣ ಸೃಷ್ಟಿಯಾಗಲೆಂಬ ಉದ್ದೇಶದಿಂದ ರಾಮಕೃಷ್ಣ ಆಶ್ರಮದಲ್ಲಿ ಮೂರು ದಿನಗಳ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಯ ಅಧ್ಯಕ್ಷ ಜಿ.ನಂಜೇಗೌಡ ವಹಿಸಿದ್ದರು. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಂಚಾಲಕರಾದ ಮಹಾ ಮೇದಾನಂದ ಸ್ವಾಮೀಜಿ, ಸಹಕಾರಿ ಸಂಸ್ಥೆಯ ನಿರ್ದೇಶಕ ಎಸ್.ಕೆ. ಮಂಜುನಾಥ್, ವಸೂಲಾತಿ ಅಧಿಕಾರಿ ಬಿ.ಪಿ.ಪ್ರೇಮಾನಂದ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಸ್ಥೆಯ ಉಪಾಧ್ಯಕ್ಷ ಎ.ಆರ್.ಪ್ರಸನ್ನಕುಮಾರ್, ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಪಾಟೀಲ, ವೀರೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಿಧನ



ಡಾ.ಮುಕುಂದ

ಇವರು ದಿನಾಂಕ : 09.05.2025ರ ಶುಕ್ರವಾರ ದೈವಾಧೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿನಾಂಕ ; 10.05.2025ರ ಶನಿವಾರ ಮಧ್ಯಾಹ್ನ 3.30 ಗಂಟೆಗೆ ಅಲಗಂಚಿ ಗ್ರಾಮ, ನಂಜನಗೂಡು ಇಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಕುಟುಂಬವರ್ಗದವರು

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಎರಡನೇ ವರ್ಷದ ಸವಿನೆನಪು



ಲಕ್ಷ್ಮಣ್.ಆರ್

ದುಃಖತಪ್ತರು: ಪತ್ನಿ ಪ್ರೇಮ, ಮಗಳು ಪೂಜಾ.ಎಲ್ ಹಾಗೂ ಕುಟುಂಬವರ್ಗದವರು

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಶಿವಕುಮಾರ ರವರು

ಇವರು ದಿನಾಂಕ : 30-04-2025 ಬುಧವಾರದಂದು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ : 10-05-2025ನೇ ಶನಿವಾರದಂದು ಬೆಳಗ್ಗೆ 9-30 ಘಂಟೆಗೆ ಶ್ರೀಮತ್ ವಾಟಾಳು ಸೂರ್ಯ ಸಿಂಹಾಸನ ಮಠಾಧ್ಯಕ್ಷರಾದ ಷ.ಬ್ರ. ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರ ದಿವ್ಯಪಾದಪೂಜೆಯನ್ನು ಹಾಗೂ ಹರಗುರು ಚರಮೂರ್ತಿಗಳ ದಿವ್ಯ ಸಮ್ಮುಖದಲ್ಲಿ ಶಿವಗಣಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಪ್ರಾರ್ಥನೆ.

ದುಃಖತಪ್ತರು: ಶ್ರೀಮತಿ ನಿಂಗಮ್ಮಣಿ ಮತ್ತು ಶ್ರೀ ಶಿವಪ್ಪನವರು ಹಾಗೂ ಸಹೋದರಿಯರು, ಭಾವಂದಿರು, ಮಕ್ಕಳು ಹಾಗೂ ಶ್ರೀಮತಿ ಲೇ. ಜವಜಮ್ಮ ಮತ್ತು ಲೇ. ಶ್ರೀ ಚನ್ನಬಸಪ್ಪನವರ ಕುಟುಂಬವರ್ಗ ಶ್ರೀ ಬೋರಮ್ಮ ಐನೋರ್‌ಹಟ್ಟಿ ಮಹದೇವಪ್ಪನವರ ಕುಟುಂಬ ವರ್ಗ ಕುಪ್ಪೆಗಾಲ ಹಾಗೂ ಬಂಧುಮಿತ್ರರು ಮತ್ತು ಗ್ರಾಮಸ್ಥರು

4ನೇ ವರ್ಷದ ಸವಿನೆನಪು



ಸಿದ್ದಮ್ಮ (ಕೆ.ಸಾಲುಂಡಿ)

ನಿಧನ: 10.05.2021

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು: ಪತಿ ಪಚ್ಚೇಗೌಡ ಹಾಗೂ ಕುಟುಂಬವರ್ಗದವರು

13ನೇ ವರ್ಷದ ಸವಿನೆನಪು



ಜಿ.ಪಾಂಡು

ನೀವು ಇಂದಿಗೆ ನಮ್ಮನ್ನು ಅಗಲಿ 13 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ, ದುಃಖತಪ್ತರು : ಪತ್ನಿ ಕಲಾವತಿ, ಮಕ್ಕಳಾದ ವಿಜಯ್ ಕುಮಾರ್. ಪಿ, ಪ್ರಶಾಂತ್.ಪಿ . ಮಂಡಿ ಮೊಹಲ್ಲಾ, ಮೈಸೂರು

ನಾಲ್ಕನೇ ವರ್ಷದ ಸವಿನೆನಪು



ಎಂ.ಮಾನಸ (ಪಾಪು)

ಜೊತೆಯಲ್ಲಿರದ ಜೀವ
ಎಂದೆಂದಿಗೂ ಜೀವಂತ, ಮಗಳೇ,
ಆತ್ಮಕ್ಕೆ ಶಾಂತಿ ಕೋರುವ:
ತಂದೆ, ತಾಯಿ ಮತ್ತು ದತ್ತು ಅಪ್ಪ ಹಾಗೂ ಕುಟುಂಬವರ್ಗ

केंद्रीय हिंदी संस्थान, मैसूर केंद्र

(शिक्षा मंत्रालय, भारत सरकार)
निकट वायुसेना चयन समिति, मैसूर मिल्क डेयरी के पीछे, सिद्धार्थ नगर, मैसूर–570011 (कनार्टक), मोबा.: 8650029885 / 9686230293

प्रवेश सूचना (सत्र 2025-26)

एक वर्षीय डिप्लोमा पाठ्यक्रम

1. पोस्ट एम.ए. अनुप्रयुक्त हिंदी भाषा विज्ञान डिप्लोमा
   योग्यता: किसी विषय में एम.ए. तथा स्नातक स्तर पर एक विषय के रूप में हिंदी या स्नातक स्तर पर हिंदी माध्यम द्वारा अध्ययन
2. हिंदी भाषा कौशल डिप्लोमा
   योग्यता: किसी भी मान्यता प्राप्त बोर्ड से इंटरमीडिएट उत्तीर्ण
3. अनुवाद डिप्लोमा (प्रादेशिक भाषा से हिंदी एवं हिंदी से प्रादेशिक भाषा)
   योग्यता: किसी भी विषय में स्नातक उत्तीर्ण (स्नातक स्तर पर हिंदी एक विषय के रूप में होना अनिवार्य है)
4. पाठ संपादन एवं अशुद्धि शोधन डिप्लोमा
   योग्यता: किसी भी विषय में स्नातक उत्तीर्ण (स्नातक स्तर पर हिंदी एक विषय के रूप में होना अनिवार्य है)

आवेदन–पत्र संस्थान वेबसाइट **www.hindisansthan.in** के माध्यम से ऑनलाइन भरकर इसकी प्रिंट प्रति, आवश्यक दस्तावेज तथा रु. 200/– (रु. दो सौ मात्र) के डिमांड ड्रॉफ्ट के साथ उपर्युक्त पते पर भेजना अनिवार्य है। डिमांड ड्रॉफ्ट **सचिव, केंद्रीय हिंदी शिक्षण मडंल, मैसूर (Secretary, Kendriya Hindi Shikshan Mandal, Mysore)** के पक्ष में देय होना चाहिए। आवेदन पत्र जमा करने की अंतिम तिथि **15 जून, 2025** है।

– क्षेत्रीय निदेशक





